ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 2 ಸಂಚಿಕೆ 50

ಡಿಸೆಂಬರ್ 14, 2008


ರೂ. 5/-



ಮುಂಬೈ ಭಯೋತ್ಪಾದಕ ದಾಳಿ ಮುಂದೇನು?



ಕತ್ತಲೆಯೆಡೆಗೆ ಕರ್ನಾಟಕ



ಅಕ್ರಮ ದತ್ತಜಯಂತಿಗೆ ಸರ್ಕಾರದ ಅಭಯ ಹಸ್ತ?

'ಸಮಾಜವಾದವೇ ಪರ್ಯಾಯ' 10ನೇ ಅಂತರಾಷ್ಟ್ರೀಯದ ಘೋಷಣೆ

ಭಯೋತ್ಪಾದಕ ಮಾಧ್ಯಮಗಳು

'ಮತಾಂತರ' ಚರ್ಚೆಯ ಕುರಿತು

ನೋಟ



ಡಾ. ಜಿ. ಭಾಸ್ಕರ ಮಯ್ಯ

ಕಳೆದ ಸಂಚಿಕೆಯಿಂದ

'ಮತಾಂತರ'ದ ಬಗ್ಗೆ ಬೊಬ್ಬೆ ಹೊಡೆಯುವವರು ಒಂದು ವಿಷಯವನ್ನು ಗಮನಿಸಬೇಕು. ಕ್ರೈಸ್ತರು ಬೈಬಲನ್ನು ಧರ್ಮಗ್ರಂಥವೆಂದು ತಿಳಿಯುತ್ತಾರೆ ಸರಿ. ಆದರೆ, ಕ್ರೈಸ್ತರದು ಒಂದು ಏಕರೂಪ ಮತ ವ್ಯವಸ್ಥೆಯ ಪಂಗಡವೇ? ಅಲ್ಲ! ನೂರಾರು ಪಂಗಡಗಳಿವೆ. ನಮ್ಮ ಕಾಲೇಜಿನ ಓರ್ವ ಪ್ರಾಧ್ಯಾಪಕಿಯ ಗಂಡ ಸಣ್ಣ ಪ್ರಾಯದಲ್ಲೇ ತೀರಿಕೊಂಡ. ಆಕೆ ಕ್ರಿಶ್ಚನ್ ಆದರೆ, ಆಕೆಯ ಸೀರಿಯನ್ ಪಂಥದಲ್ಲಿ ಮರುಮದುವೆ ಯಾಗುವಂತಿಲ್ಲ. ಆಕೆ ಇನ್ನೊಂದು ಕ್ರಿಶ್ಚಿಯನ್ ಮತಕ್ಕೆ ಮತಾಂತರಗೊಂಡು ಮದುವೆಯಾದಳು. ಭೈರಪ್ಪ ಮತ್ತು ಸಂವಾದದಲ್ಲಿ ಭಾಗವಹಿಸಿದವರೆಲ್ಲಾ ಕ್ರಿಶ್ಚನ್ ಒಂದು ಏಕರೂಪದ ಅವಿಭಾಜ್ಯ ಜಡ ಮತವೆಂದು ಭಾವಿಸಿಕೊಂಡಂತೆ ಕಾಣಿಸುತ್ತದೆ. ಇದೇ ರೀತಿ ಮುಸ್ಲಿಮರಲ್ಲೂ ಹನಫಿ, ಶಾಫಿ, ಸುನ್ನಿ, ಶಿಯಾ ಇತ್ಯಾದಿ ನೂರಾರು ರೂಪಗಳಿವೆ. ಇದಲ್ಲದೆ ಕುಂದಾಪುರದ ಹಿಂದೂ, ಕ್ರೈಸ್ತ, ಮುಸ್ಲಿಮ್ ಸಮುದಾಯಗಳ ಸಂಸ್ಕೃತಿಯೇ ಬೇರೆ ಕೇರಳದ ಹಿಂದೂ, ಕ್ರೈಸ್ತ, ಮುಸ್ಲಿಮರ ಸಂಸ್ಕೃತಿಯೇ ಬೇರೆ. ಕಾಶ್ಮೀರದಲ್ಲಿ ಇನ್ನೊಂದೇ ಬಗೆ. ಈ 'ಬಹುಳತೆ'ಯನ್ನು ಗಮನಿಸದೇ ಕ್ರೈಸ್ತ, ಮುಸ್ಲಿಮರು ಎಂದು ಸರಳೀಕರಿಸುವುದು ತಪ್ಪು.

ಅವರು ಬಂದು 1700 ವರ್ಷವಾಯ್ತು

ಕ್ರೈಸ್ತರು ಈ ದೇಶಕ್ಕೆ ಬಂದು 1700 ವರ್ಷಗಳಾದವು. ಇನ್ನೂ ಅವರ ಸಂಖ್ಯೆ ಶೇ 2.1. ಮುಸ್ಲಿಮ್ ಸಮುದಾಯ ಈ ದೇಶಕ್ಕೆ ಬಂದು 1200 ವರ್ಷಗಳಾದವು. ಅವರ ಸಂಖ್ಯೆ ಶೇ. 14. 1857ರಲ್ಲಿ ಹಿಂದೂ ಮುಸ್ಲಿಮರು ಒಗ್ಗಟ್ಟಾಗಿ ಬ್ರಿಟಿಷರ ವಿರುದ್ಧ ಹೋರಾಡಿದರು. 'ಮತಾಂತರ' ಒಂದು ಸಮಸ್ಯೆಯೇ ಆಗಿರಲಿಲ್ಲ. ನಂತರದ ಕಾಲಾವಧಿಯಲ್ಲಿ 'ಕೋಮುವಾದ'ದ ವಿಷವೃಕ್ಷ ಬೆಳೆಯುತ್ತಾ ಬಂತು. 1992 ನಂತರ ಅದು ನಿರಂಕುಶವಾಗಿ ಬೆಳೆಯಿತು. ಈಗ 'ಮತಾಂತರ' ಒಂದು ಸಮಸ್ಯೆಯಾಗಿ ಕೋಮುವಾದಿಗಳಿಗೆ ಕಾಣಿಸಿತು. ಆದರೆ ನಿಜಕ್ಕೂ ಅದು ಅವರಿಗೆ ಕಾಣಿಸುತ್ತಿಲ್ಲ; ಬದಲಿಗೆ ಕಾಣಿಸುವಂತೆ ನಟಿಸುತ್ತಾರೆ. ಏಕೆಂದರೆ, ತಮ್ಮ ಹಿಂಸಾತ್ಮಕ ಎಜೆಂಡಾಕ್ಕೆ ಅವರಿಗೊಂದು ಸಮರ್ಥನೆ ಬೇಕಾಗಿದೆ. ಮುಸ್ಲಿಮರ ಮೇಲಿನ ಹಲ್ಲೆಯ ಸಮರ್ಥನೆಗೆ 'ಕ್ರಿಯೆಗೆ ಪ್ರತಿಕ್ರಿಯೆ' ಎಂದರೆ ಕ್ರೈಸ್ತರ ಮೇಲಿನ ಹಲ್ಲೆಯ ಸಮರ್ಥನೆಗೆ 'ಮತಾಂತರ' ಕಾರಣವೆನ್ನುವುದು ಕೋಮುವಾದಿಗಳ ಹಳೆಯ ರಾಗ. **ಅಂತೆಯೇ ಸಂಘ ಪರಿವಾರ ಒತ್ತಾಯಿಸುವಂತೆ 'ಮತಾಂತರ' ನಿಷೇಧವನ್ನು ಜಾರಿಗೊಳಿಸುವುದೆಂದರೆ ಭಾರತವನ್ನು ಒಂದು** 'ಮತಾಧಾರಿತ ದೇಶ'ವೆಂದು ಘೋಷಿಸುವುದೆಂದೇ ಅರ್ಥ. ದುಃಖದ ಸಂಗತಿಯೆಂದರೆ ಜನರು ಪ್ರತೀ 30 ನಿಮಿಷಕ್ಕೆ ಸರಾಸರಿ ಒಬ್ಬನಂತೆ ಹಸಿವಿನಿಂದ ಸಾಯುತ್ತಿರುವುದು ಇವರಿಗೆ ಕಾಣಿಸುತ್ತಿಲ್ಲ. **ಶೋಷಿತ ಸಮುದಾಯ ತಮ್ಮ ಹೊಟ್ಟೆಬಟ್ಟೆಗೆ ಹೋರಾಟ ಮಾಡುವುದನ್ನು ತಡೆಯಲು, ಅವರನ್ನು ದಿಕ್ಕು ತಪ್ಪಿಸಲು ಶೋಷಿತ ಜನರ ಕ್ರಾಂತಿಕಾರಿ ಹೋರಾಟವನ್ನು ತುಳಿಯಲು ಈ ರೀತಿಯ ದೊಂಬರಾಟಗಳನ್ನು ನಡೆಸಲಾಗುತ್ತದೆ.** ಈ ದೊಂಬರಾಟ ದೇಶದ್ರೋಹಿ, ಜನ ದ್ರೋಹಿ ಮತ್ತು ಮಾನವತೆಯ ಮೇಲೆ ನಡೆಸಿದ ಹಿಂಸ್ರ ದಾಳಿ ಎಂಬುದನ್ನು ನಾವು ಅರ್ಥಮಾಡಿಕೊಂಡು ಅದನ್ನು ಸೋಲಿಸಲೇ ಬೇಕಾದುದು ಇಂದಿನ ತುರ್ತು ಅಗತ್ಯ.

ಮೂಲಭೂತವಾದ (Fundamentalism)

Fundamentalism ಮೂಲಭೂತವಾದ, ಕಟ್ಟರ್‌ವಾದ Fundamentalizm ಎಂಬ ಶಬ್ದವನ್ನು ಮೊದಲು ಉತ್ತರ ಅಮೆರಿಕಾದ ಬೆಪ್ಟಿಸ್ಟ್ ಮತ್ತು ಪ್ರೆಸ್‌ಬಿಟೇರಿಯಸ್ ಕ್ರೈಸ್ತ ಪಂಥಗಳಿಗೆ ಉಪಯೋಗಿಸಲಾಗಿತ್ತು. ಅವರು ಬೈಬಲಿನ ನೈಸರ್ಗಿಕತೆ, ಅಲೌಕಿಕ ಪ್ರಾಯಶ್ಚಿತ, ಏಸುವಿನ ಪುನರುತ್ಥಾನ, ಕುಮಾರಿಯ ಗರ್ಭದಲ್ಲಿ ಏಸು ಜನನ ಮತ್ತು ಚಮತ್ಕಾರ ಪವಾಡಗಳನ್ನು ಅಕ್ಷರಶಃ ನಂಬುವವರು, ಪಾಲಿಸುವವರು. ಇಷ್ಟೇ ಆಗಿದ್ದರೆ ಅವರು ಮೂಲಭೂತವಾದಿಗಳಲ್ಲ. ಆದರೆ ಅವರು ಈ ನಂಬಿಕೆಗೆ ಹೊರತಾದವರ ಬಗೆಗೆ ಅತ್ಯಂತ ಆಕ್ರಮಣಕಾರಿ ನಿಲುವನ್ನು ಹೊಂದಿರುವ ಅಸಹಿಷ್ಣುಗಳು. ಇದಕ್ಕಾಗಿ ಅವರು ಬಲಪ್ರಯೋಗವನ್ನು ಉಚಿತವೆಂದು ತಿಳಿಯುವವರು. ತಮ್ಮ ವಿಚಾರಗಳ ಪ್ರಚಾರ-ಪ್ರಸಾರಗಳಿಗೆ ಉದಾರತೆ, ಧರ್ಮನಿರಪೇಕ್ಷತೆ ಮತ್ತು ಪ್ರಜಾಪ್ರಭುತ್ವ ದೊಡ್ಡ ಅಡ್ಡಿ ಮತ್ತು ಅಪಾಯಕಾರಿಯೆಂದು ಅವರು ಭಾವಿಸುತ್ತಾರೆ. ಮತಾಂತರ ಇಂಥ ಸಂಘಟನೆಗಳ ಮುಖ್ಯ ಕಾರ್ಯಕ್ರಮ.

ಇವರು ಅಮೆರಿಕ ಸರಕಾರದ ಮೇಲೆ ವಿಕಾಸವಾದವನ್ನು ಪಠ್ಯಕ್ರಮದಿಂದ ಹೊರಗಿಡಲು ಒತ್ತಡ ಹಾಕಿದರು. ಟೆನ್ನೆಸೀ ವಿಧಾನಸಭೆಯು 1925ರಲ್ಲಿ ವಿಕಾಸವಾದವನ್ನು ಪಠ್ಯಕ್ರಮದಿಂದ ಹೊರಗಿಟ್ಟಿತು.

ಅಮೆರಿಕಾದ ಮೂಲಭೂತವಾದಿ ಆಂದೋಲನದ ವಿಶೇಷತೆಗಳು : 1. ವಿವೇಕದ ನಿರಾಕರಣೆ. 2. ಮಾನವೀಯ ನ್ಯಾಯ ವ್ಯವಸ್ಥೆಯನ್ನು ಮಾನ್ಯ ಮಾಡದಿರುವುದು. (ದೈವೀ ಶಕ್ತಿಯ ಮೇಲೆ ವಿಶ್ವಾಸ) 3. ತಮ್ಮ ವಿಚಾರಗಳಿಗೆ ಹೊರತಾದ ವಿಚಾರಗಳ ಬಗ್ಗೆ ಯಾವುದೇ ರಾಜಿ ಇಲ್ಲ. 4. ತಮ್ಮನ್ನು ಮಾತ್ರ ಧರ್ಮದ ನಿಜವಾದ ಅನುಯಾಯಿಗಳೆಂದು ನಂಬಿರುವುದು ಹಾಗೂ ಮಿಕ್ಕುಳಿದವರೆಲ್ಲಾ ಅವರ ದೃಷ್ಟಿಯಲ್ಲಿ ಶತ್ರುಗಳು. 5. ತಮ್ಮ ವಿಚಾರಗಳಿಗಾಗಿ ಅವರು ತಮ್ಮ ಜೀವಗಳನ್ನು ಬಲಿಕೊಡಲು ಸಿದ್ಧರಿದ್ದರು. 6. ಸತ್ಯದ ಮೇಲೆ ತಮ್ಮದೊಂದೇ ಏಕಾಧಿಕಾರ - ಇದರಿಂದಾಗಿ ಮಾನವ ಹಕ್ಕು, ಪ್ರಜಾಪ್ರಭುತ್ವ ಮತ್ತು ಮಾನವ ಮೌಲ್ಯಗಳ ಬಗ್ಗೆ ಅವರಿಗೆ ಯಾವುದೇ ಗೌರವಿರುವುದಿಲ್ಲ. 7. ಹಿಂಸಾತ್ಮಕ ಮಾರ್ಗಗಳಿಂದ ಇನ್ನೊಬ್ಬರ ಮೇಲೆ ತಮ್ಮ ಧಾರ್ಮಿಕ ವಿಚಾರಗಳನ್ನು ಹೇರಲು ಅವರು ಪ್ರಯತ್ನ ಪಡುತ್ತಾರೆ.

ಆದರೆ, ಮುಖ್ಯಧಾರೆಯಿಂದ ಈ ಪಂಥಗಳೂ ಹೊರಗಿದ್ದುದರಿಂದ ಅಮೆರಿಕಾದಲ್ಲಿ ಅವರ ಆಂದೋಲನ ಸಫಲವಾಗಲಿಲ್ಲ. ತೀವ್ರವಾದ ಔದ್ಯೋಗೀಕರಣ ಮತ್ತು ಜಾಗತೀಕರಣಕ್ಕೆ ಈ ಸಿದ್ಧಾಂತಗಳು ಬಾಧಕವಾಗಿದ್ದವು. ಈಗ ಅದು ದಕ್ಷಿಣ ಅಮೆರಿಕಾದ ಕೆಲವು ರಾಜ್ಯಗಳಿಗಷ್ಟೇ ಅದು ಸೀಮಿತವಾಗಿದೆ. (ಉತ್ತರದ ರಾಜ್ಯಗಳಿಗಿಂತ ಅವು ಹೆಚ್ಚು ಕೃಷಿಪ್ರಧಾನವಾಗಿದ್ದು, ಹಿಂದುಳಿದಿದ್ದವು ಎಂಬುದು ಗಮನಿಸಬೇಕಾದ ಅಂಶ)

ಆಧುನಿಕ ಯುಗದ ಮೊದಲ ಮೂಲಭೂತವಾದಿಗಳ ಸಂಘಟನೆ 'ಲಿಖ್‌ವಾನುಲ್ ಮುಸಲಮೀನ್'. ಪಾಶ್ಚಾತ್ಯ ಪ್ರಭಾವವನ್ನು ಕೊನೆಗೊಳಿಸಿ-'ಇಸ್ಲಾಂ'ಗೆ ಹೊಸ ಶಕ್ತಿಯನ್ನು ತುಂಬುವುದಾಗಿ ಅವರು ಹೇಳಿಕೊಳ್ಳುತ್ತಾರೆ. ಅದರ ಸಂಸ್ಥಾಪಕ 'ಹಸನ್-ಅಲ್-ಬನ್ನಾ'. 'ಲಿಖವಾನ್' ಈಜಿಪ್ತಿನ ಇಸ್ಮಾಯಿಲಿಯಾದಲ್ಲಿ ಸ್ಥಾಪನೆಯಾಗಿದ್ದರೂ ಅದು ಸಿರಿಯ, ಇರಾಕ್ ಮೊದಲಾದ ಅರಬ್ ದೇಶಗಳಿಗೂ ವ್ಯಾಪಿಸಿತು. ಆನಂತರ ವಿಭಿನ್ನ ಸಂಘಟನೆಗಳು ಹುಟ್ಟಿಕೊಂಡವು. ಅವುಗಳು ಭಯೋತ್ಪಾದನೆಯನ್ನು ಪ್ರೋತ್ಸಾಹಿಸುತ್ತವೆ. ಅಲ್-ತೌಕೆಯಿರ್- ಅಲ್-ಹಿಜಿರಾ, ಹಿಜ್ಬ-ಅಲ್-ತಹರೀರ್-ಅಲ್-ಇಸ್ಲಾಮ್, ಜಮಾತ್-ಅಲ್-ಜಿಹಾದ್, ಇವುಗಳಲ್ಲಿ ಪ್ರಮುಖವಾದವುಗಳು. 1979ರಲ್ಲಿ ಅಬ್ದುಲ್ಲಾ-ಅಲ್-ಕಹತಾನಿ ಕಾಬಾರ ಮೇಲೆ ದಾಳಿ ಮಾಡಿದ. ಅದು ಆತನ ಸಂಘಟನೆಯ ಹತಾಶ ಪ್ರಯತ್ನ. ಆತನ ತಿಳುವಳಿಕೆಯಂತೆ ಸೌದಿಯ ರಾಜ ಅತ್ಯಂತ ಭ್ರಷ್ಟ. ಇಂದು ಹೆಚ್ಚು ಕಡಿಮೆ ಎಲ್ಲಾ ಮುಸ್ಲಿಂ ರಾಷ್ಟ್ರಗಳೂ ಮೂಲಭೂತವಾದಿಗಳ ಅಪಾಯವನ್ನು ಎದುರಿಸುತ್ತಿವೆ. ತುರ್ಕಿಸ್ತಾನ ಧರ್ಮನಿರಪೇಕ್ಷ ದೇಶವಾದರೂ ಅಲ್ಲಿ ಮೂಲಭೂತವಾದ ತೀವ್ರವಾಗಿ ಬೆಳೆಯುತ್ತಿದೆ.

ಮೂಲಭೂತವಾದ ಮತ್ತು ಪುನರುತ್ಥಾನವಾದ

ಮೂಲಭೂತವಾದಕ್ಕೂ ಪುನರುತ್ಥಾನವಾದಕ್ಕೂ ನಿಕಟವಾದ ಸಂಬಂಧವಿದೆ. ಪುನರುತ್ಥಾನವಾದ ಹೇಳುವುದು-'ಭೂತಕಾಲಕ್ಕೆ ಹಿಂತಿರುಗು'. 'ಅತೀತವನ್ನು ಗೌರವಶಾಲೀ ಆದರ್ಶವೆಂದು ತಿಳಿ'. ಎಲ್ಲ ಪುನರುತ್ಥಾನವಾದಿಗಳು ಹೇಳುವುದು ಒಂದೇ. ತಮ್ಮ ತಮ್ಮ ಧರ್ಮ ಆರಂಭದ ಕಾಲದಲ್ಲಿ ಶುದ್ಧವಾಗಿತ್ತು; ಪವಿತ್ರವಾಗಿತ್ತು. ಕಾಲಕಳೆದಂತೆ ಅದು ವಿಕೃತಗೊಂಡಿತು.

ಮೂಲಭೂತವಾದ ಹಾಗೂ ಪುನರುತ್ಥಾನವಾದದ ವಿಚಾರಗಳಲ್ಲಿ ಸಾಕಷ್ಟು ಸಾಮ್ಯವಿದೆ. ಜಗತ್ತಿನ ಬಗ್ಗೆ ಅವರ ವಿಚಾರಗಳು ನಿರಾಶಾವಾದಿಯಾಗಿದೆ. ಅವರು ವಿಶ್ವದ ಅಂತ್ಯವನ್ನು (ಪ್ರಳಯ) ನಿರೀಕ್ಷಿಸುತ್ತಿರುತ್ತಾರೆ. ಅವರಿಗೆ ಯಾವುದೇ ಉತ್ಸವ ಅಥವಾ ಸಮಾರಂಭ ಬೇಕಿಲ್ಲ. ಸಾಹಿತ್ಯ ಮತ್ತು ಸಂಗೀತದಿಂದ ಅವರು ಬಹಳ ದೂರ. ತಮ್ಮೆಲ್ಲ ಶಕ್ತಿಯನ್ನು ಅವರು ಧಾರ್ಮಿಕ ಶಿಕ್ಷಣಕ್ಕೇನೆ ಮೀಸಲಿಡುತ್ತಾರೆ.

ಹೆಚ್ಚಿನ ಮುಸ್ಲಿಂ ದೇಶಗಳಲ್ಲಿ ಮೂಲಭೂತವಾದವು ಒಂದು ಹೊಸ ಘಟನೆಯೇನಲ್ಲ. ಚರಿತ್ರೆಯಲ್ಲಿ ಇದರ ಬೇರುಗಳು ಬಹಳ ಆಳಕ್ಕಿವೆ. ಹಾಗೂ ಕಾಲಕಾಲಕ್ಕೆ ಅದು ಬೇರೆ ಬೇರೆ ಸ್ವರೂಪವನ್ನು ಪಡೆದಿದೆ. ಅವರ ಪಾಶ್ಚಾತ್ಯ ವಿರೋಧಿ ಭಾವನೆ ಮಾತ್ರ ಆಧುನಿಕವಾಗಿದ್ದು ಹೆಚ್ಚಿನ ಮುಸ್ಲಿಂ ದೇಶಗಳು ಪಾಶ್ಚಾತ್ಯರ ವಸಾಹತುಗಳಾಗಿದ್ದು ಅವುಗಳನ್ನು ನಿರಂತರವಾಗಿ ಶೋಷಿಸುತ್ತಿದ್ದು, ಆ ದೇಶಗಳು ಈಗ ಸ್ವತಂತ್ರವಾದ ನಂತರವೂ ಪಾಶ್ಚಾತ್ಯ ಶಕ್ತಿಗಳ ಹಿಡಿತದಲ್ಲಿಯೇ ಇವೆ; ನವವಸಾಹತುಗಳಾಗಿಯೇ ಇವೆ. ಇದರ ಫಲವೇ ಅಸಹಾಯಕತೆಯಿಂದ ಹುಟ್ಟಿದ ಮೂಲಭೂತವಾದ. ಅದರ ವಿಕಾಸವೇ ಆತಂಕವಾದ - ಭಯೋತ್ಪಾದನೆ.

ಧರ್ಮನಿರಪೇಕ್ಷ ನೇತೃತ್ವವು ಸಂಪೂರ್ಣ ವಿಫಲವಾದಾಗ ಇಸ್ಲಾಮೀ ಸಮಾಜವಾದ, ಇಸ್ಲಾಮೀ ಅರ್ಥವ್ಯವಸ್ಥೆಯು ರಾಜಕೀಯ ವ್ಯವಸ್ಥೆಯ ಭಾಗವಾಯಿತು. ಇದರ ಪರಿಣಾಮವಾಗಿ ಹಲವು ಮುಸ್ಲಿಂ ದೇಶಗಳು ಮೂಲಭೂತವಾದದೆಡೆಗೆ ಸೆಳೆಯಲ್ಪಟ್ಟವು.

ಈ ಮೂಲಭೂತವಾದಕ್ಕೆ ಬಾಹ್ಯ ಬೆಂಬಲವಿರುವುದು ಗಮನಾರ್ಹವಾದ ವಿಷಯ. ಸೋವಿಯತ್ ಯೂನಿಯನ್ ಹಾಗೂ ಪೂರ್ವಯೂರೋಪಿನ ಸಮಾಜವಾದಿ ದೇಶಗಳು ಮುರಿದು ಬೀಳುವ ತನಕ ಅಮೆರಿಕವು ಮೂಲಭೂತವಾದವನ್ನು ಬೆಂಬಲಿಸುತ್ತಿತ್ತು. ಸಮಾಜವಾದವನ್ನು ಹಿಮ್ಮೆಟ್ಟಿಸಲು ಮಾಡಿದ ಅಥವಾ ಮಾಡುತ್ತಿರುವ ಸಾಮ್ರಾಜ್ಯಶಾಹಿ ನೀತಿ ಅದಾಗಿತ್ತು. ತೈಲ ಸಂಪತ್ತು ಪತ್ತೆಯಾದ ನಂತರ ಸದ್ರಿ ದೇಶಗಳು ಧನಾಢ್ಯ ದೇಶಗಳಾದವು. 70ರ ದಶಕದಲ್ಲಿ ಧಾರ್ಮಿಕ ಕಟ್ಟರ್ (ಕಡು ಸಂಪ್ರದಾಯಗಳು) ಪಂಥಗಳು ಗರಿಕೆದರಿ ನಿಂತವು. ಹಳ್ಳಿ ಹೋಬಳಿಗಳಲ್ಲಿ ಮದರಸಾ, ಮಸೀದಿಗಳು ದೊಡ್ಡ ಪ್ರಮಾಣದಲ್ಲಿ ಸ್ಥಾಪನೆಯಾದವು. ಉಲೇಮಾಗಳೇ ರಾಜಕೀಯದ ಸೂತ್ರಧಾರರಾದರು.

ಮೂಲಭೂತವಾದದ ವಿಸ್ತರಣೆಗೆ ಇನ್ನೊಂದು ಕಾರಣ - ಪರಾಜಯ, ಸೋಲು. ಉದಾ: ಮುಖ್ಯವಾಗಿ ಇಸ್ರೇಲಿಗಳಿಂದ ಈಜಿಪ್ತ್, ಜೋರ್ಡಾನ್, ಲೆಬೆನಾನ್, ಸಿರಿಯಾಗಳ ಪರಾಜಯ, ಭಾರತದಿಂದ ಪಾಕಿಸ್ತಾನದ ಪರಾಜಯ, ಬಾಂಗ್ಲಾದೇಶದ ಮುಕ್ತಿ, ಇತ್ತೀಚೆಗೆ ಅಫಘಾನಿಸ್ತಾನ್ ಮತ್ತು ಇರಾಕ್ ಪರಾಜಯ. ಇದೆಲ್ಲದರ ಟ್ರೆಜೆಡಿಯೆಂದರೆ ಮುಸ್ಲಿಂ ಜಗತ್ತಿನ ಒಂದು ಸಣ್ಣಭಾಗದ ಮೂಲಭೂತವಾದಿಗಳು ಭಯೋತ್ಪಾದಕ ರಾಗಿ ಮಾರ್ಪಟ್ಟಿರುವುದು. ಇದಕ್ಕೂ 'ಇಸ್ಲಾಂ' ಧರ್ಮಕ್ಕೂ ಯಾವ ಸಂಬಂಧವೂ ಇಲ್ಲ.

ಪುಟ 15ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ

ಸಂಪಾದಕೀಯ

ಪ್ರಜಾಪ್ರಭುತ್ವ ಹಕ್ಕು ಮುಕ್ಕಾಗದಿರಲಿ

ಇಡೀ ದೇಶವನ್ನೇ ತಲ್ಲಣಗೊಳಿಸಿದ ಮುಂಬೈನ ಭಯೋತ್ಪಾದಕರ ಕೃತ್ಯಗಳಿಂದ ಚೇತರಿಸಿಕೊಳ್ಳುವ ಪ್ರಯತ್ನಗಳು ನಡೆದಿರುವಾಗಲೇ ಕರ್ನಾಟಕದಲ್ಲಿ ಡಿಸೆಂಬರ್ ಆಸುಪಾಸಿನಲ್ಲಿ ಮತ್ತು ನಂತರ ಭಯೋತ್ಪಾದನಾ ಕೃತ್ಯಗಳು ಘಟಿಸಬಹುದೆಂಬ ಆತಂಕದ ವರದಿಗಳನ್ನು ಬೇಹುಗಾರಿಕ ಸಂಸ್ಥೆಗಳು ಬೊಟ್ಟು ಮಾಡಿವೆ. ಕಳೆದ ಕೆಲವಾರು ವರ್ಷಗಳಲ್ಲಿನ ಘಟನೆಗಳು ರಾಜ್ಯದಲ್ಲಿ ಭಯೋತ್ಪಾದನಾ ಚಟುವಟಿಕೆಗಳು ನೆಲೆಗೊಳ್ಳುತ್ತಿರು ವುದನ್ನು ಘೋಷಿಸಿದವು. ವಿಶೇಷವಾಗಿ ತೀರಾ ಇತ್ತೀಚೆಗೆ ಕೆಲವು ತಿಂಗಳ ಹಿಂದೆ ಒಬ್ಬ ಮಹಿಳೆಯನ್ನು ಬಲಿತೆಗೆದುಕೊಂಡ ಬೆಂಗಳೂರು ನಗರದಲ್ಲಿ ಸಂಭವಿಸಿದ ಸರಣಿ ಬಾಂಬ್‌ಗಳ ಸ್ಫೋಟವು ಸಮಸ್ಯೆಯ ಗಂಭೀರತೆಯನ್ನು ಎತ್ತಿತೋರಿಸಿತು. ನಂತರದ ಘಟನಾವಳಿಗಳು ಸ್ಥಿತಿಯು ಸುಧಾರಿಸಬಹುದು ಎಂಬದರ ಬದಲಾಗಿ ಉಲ್ಬಣದ ಸಂಗತಿಯನ್ನೇ ಹೇಳುತ್ತಿವೆ.

ಪ್ರಮುಖವಾಗಿ ಭಯೋತ್ಪಾದನೆಯನ್ನು ನಿಗ್ರಹಿಸುದಾಗಿ ಸರ್ಕಾರದಿಂದ ಪದೇ ಪದೇ ಹೇಳಿಕೆಗಳು ಬರುತ್ತಿವೆ. ಅದಕ್ಕಾಗಿ ಪೋಲಿಸ್, ವಿಶೇಷ ರಕ್ಷಣ ದಳ, ಶಸ್ತ್ರ ಇತ್ಯಾದಿಗಳಿಂದ ತಡೆಯುವುದಾಗಿ ಹೇಳಲಾಗುತ್ತದೆ. ಆದರೆ ಭಯೋತ್ಪಾದನೆಯ ಹುಟ್ಟಿಗೆ ಕಾರಣವಾಗುವ ಮೂಲಭೂತ ಸಂಗತಿಗಳತ್ತ ಆಳುವವರು ಗಮನಹರಿಸುತ್ತಿಲ್ಲ. ಬಹುಸಂಖ್ಯಾತರ ಹೆಸರಿನಲ್ಲಿ ಅಲ್ಪಸಂಖ್ಯಾತರ ಮೇಲೆ ಹೆಚ್ಚುತ್ತಿರುವ ಫ್ಯಾಶಿಸ್ಟ್ ಮನೋಭಾವದ ಧಾಳಿಗಳು, ಅದು ಸೃಷ್ಟಿಸುವ ಆತಂಕದ ಸ್ಥಿತಿಯನ್ನು ಭಯೋತ್ಪಾದಕ ಶಕ್ತಿಗಳು ಬಳಸುತ್ತವೆ.


ಈಗ ಬೆಳೆಯುತ್ತಿರುವ ಆತಂಕದ ಸನ್ನಿವೇಶವನ್ನು ಗಂಭೀರವಾಗಿ ಪರಿಗಣಿಸಿ ರಾಜ್ಯದ ಜನರನ್ನು ರಕ್ಷಿಸಲು ಬಿಜೆಪಿಗೆ ನಿಜಕ್ಕೂ ಕಾಳಜಿಯಿದ್ದರೆ ಕೋಮುವಾದಿಗಳ ಧಾಳಿಯನ್ನು ಮಟ್ಟಹಾಕಬೇಕಿತ್ತು. ಆಧರೆ ಅಂತಹ ಯಾವುದೇ ಕ್ರಮಗಳಿಲ್ಲದೇ ಕುಮ್ಮಕ್ಕು ಕೊಡುವ ನೀತಿಗಳನ್ನೇ ಅನುಸರಿಸುತ್ತಿದೆ. ಕೋಮು ಧಾಳಿ ಬೆಂಬಲಿಸುತ್ತಾ ಭಯೋತ್ಪಾದನೆ ಎದುರಿಸುವ ಅವರ ಮಾತು ಕಪಟತನದ್ದು ಎಂದೇ ಹೇಳಬೇಕಾಗುತ್ತದೆ. ಕೋಮುವಾದ ಮತ್ತು ಭಯೋತ್ಪದನೆಗಳು ಒಂದು ಇನ್ನೊಂದು ಬೆಳೆಸುವ ಪಾತ್ರವನ್ನು ನಿರ್ವಹಿಸುತ್ತವೆ.

ಇಂತಹ ಸನ್ನಿವೇಶವನ್ನೇ ಇಟ್ಟುಕೊಂಡು ಭಯೋತ್ಪಾದನೆ ಎದುರಿಸಲೆಂದು ರಾಜ್ಯದಲ್ಲಿ 2009ರ ಜನವರಿ 15ರವರೆಗೆ ಯಾವುದೇ ರ್‍ಯಾಲಿ-ಬೃಹತ್ ಪ್ರತಿಭಟನೆಗಳನ್ನು ನಡೆಸದಂತೆ ನಿರ್ಬಂಧಿಸುವ ಮಾತುಗಳನ್ನು ಸರ್ಕಾರ ಆಡುತ್ತಿದೆ. ರ್‍ಯಾಲಿ-ಪ್ರತಿಭಟನೆಗಳು ಜನತೆಯ ಮೂಲಭೂತವಾದ ಪ್ರಜಾಸತ್ತಾತ್ಮಕ ಹಕ್ಕುಗಳು. ಇದನ್ನು ರಕ್ಷಿಸುವ ಹೊಣೆ ಸರ್ಕಾರದ್ದು ಕೂಡ. ಜನ ತಮ್ಮ ಬದುಕಿನ ಹಕ್ಕಿಗಾಗಿ, ಕೋಮುಸೌಹಾರ್ದತೆ ಸಾರಲು ಬೀದಿಗೆ ಇಳಿದಲ್ಲಿ ಅವುಗಳನ್ನು ನಿಷೇಧಿಸುವುದು ಕೂಡದು. ಇನ್ನೊಂದು ಮಗ್ಗುಲಲ್ಲಿ ಕೋಮುವಾದ, ಭಯೋತ್ಪಾದನೆಯು ಪ್ರಜಾಪ್ರಭುತ್ವದ ಹಕ್ಕುಗಳ ಹರಣಕ್ಕೆ ಕಾರಣವಾಗುತ್ತವೆ. ಇದನ್ನೇ ಆಳುವವರು ತಮ್ಮ ವಿರುದ್ಧದ ಅತೃಪ್ತಿಯನ್ನು ಧಮನಿಸಲು ಬಳುತ್ತಿರುವುದು ಖಂಡನಿಯ. ಈಗಾಗಲೇ ನಗರದಲ್ಲಿ ಜನ ರ್‍ಯಾಲಿ ನಡೆಸಿದರೆ ಸಂಚಾರಕ್ಕೆ ತೊಂದರೆ ಯಾಗುವುದೆಂದು ಅಂತಹ ಪ್ರತಿಭಟನೆಗಳನ್ನು ನಗರದಿಂದಲೇ ದೂರ ಅಟ್ಟುವ ಪ್ರಯತ್ನಗಳೂ ನಡೆದಿವೆ.

ಜನತೆಯು ಬದುಕಿನ ಜ್ವಲಂತ ಸಮಸ್ಯೆಗಳಿಂದ ತತ್ತರಿಸುತ್ತಿರುವಾಗ, ಸರ್ಕಾರದ ನೀತಿಗಳು ಬದಲಾಗದೇ ಅವುಗಳನ್ನು ಉಲ್ಬಣಗೊಳಿಸುತ್ತಿರುವಾಗ, ಪರಿಹಾರ ಕಲ್ಪಿಸದೆ ಸರ್ಕಾರವೇ ನಿರ್ಲಕ್ಷಿಸುತ್ತಿರುವಾಗ ಜನತೆ ಪ್ರತಿಭಟನೆಗಿಳಿಯುವುದು ಸಹಜ. ಪ್ರಜಾಪ್ರಭುತ್ವದ ಹಕ್ಕುಗಳನ್ನು ಮೊಟಕುಗೊಳಿಸಲು ಸರ್ಕಾರಕ್ಕೆ ಅವಕಾಶ ನೀಡಬಾರದು. ಈ ದಿಶೆಯಲ್ಲಿ ಆತಂಕ ಯತ್ನಗಳನ್ನು ಸರ್ಕಾರ ಕೈಬಿಡಬೇಕು. ಅದಕ್ಕಾಗಿ ಜನತೆಯು ಒತ್ತಾಯಿಸಬೇಕು.

ದತ್ತ ಜಯಂತಿ :

ಅಕ್ರಮ ಆಚರಣೆಗೆ ಅಭಯ ಹಸ್ತ ?



ಪರಂಪರೆಯ, ನ್ಯಾಯಾಲಯದ ಆದೇಶವನ್ನು ನಿರ್ಲಕ್ಷಿಸಿ ಹಿಂದೆಂದು ಇಲ್ಲದ ದತ್ತಜಯಂತಿ ಆಚರಣೆಗೆ ಸರ್ಕಾರ ಅವಕಾಶ ಕಲ್ಪಿಸುವ ಹಾದಿಯಲ್ಲಿ ರಾಜ್ಯದಲ್ಲಿ ಶಾಂತಿ ಸಾಮರಸ್ಯಕ್ಕಿಂತ ಸಂಘ ಪರಿವಾರದ ಅಜೆಂಡಾ ಜಾರಿಯೇ ಯಡಿಯೂರಪ್ಪನ ಮಹಾ ಆದ್ಯತೆಯೇ?

'ಡಾಕ್ಟ್ರೇ ನಾನೀಗ ಪರಿಶುದ್ಧವಾಗಿದ್ದೀನಿ. ಮನೆಯನ್ನು 'ಶುದ್ಧ' ವಾಗಿ ಇಟ್ಟಿದ್ದೀನಿ. ಇನ್ನು ಒಂದು ವಾರ ನಮ್ಮ ಮನೆಯಲ್ಲಿ ಯಾವುದೇ ಮಾಂಸದ ಅಡುಗೆ ಮಾಡೋದಿಲ್ಲ'...

ಬದುಕು ರೂಪಿಸಿದ ಅನುಭವ

ಕಳೆದ ಕೆಲವು ದಿನಗಳ ಹಿಂದೆ ಕೊಡಗಿನ ಸಂಗಾತಿ ಡಾ|| ಐ.ಆರ್.ದುರ್ಗಾಪ್ರಸಾದ್‌ರವರು ಚಿಕಿತ್ಸೆಗೆ ಬಂದಿದ್ದ ಒಬ್ಬ ಮಹಿಳೆ ಪಿಸುಮಾತಿನಲ್ಲಿ ಹೇಳಿದ್ದ ಮಾತುಗಳನ್ನು ಪುನರುಚ್ಚಿಸಿದರು. ಆಕೆ ಒಬ್ಬ ಕ್ರಿಶ್ಚಿಯನ್ ಮೇರಿ ಅಂತಾ. ತಾನು, ತನ್ನ ಮನೆ 'ಪರಿಶುದ್ಧ' ವಾಗಿರಿಸಿಕೊಂಡಿದ್ದನ್ನು ಹೇಳುವುದಕ್ಕೆ ಕಾರಣವಿದೆ. ಹಿಂದೆ ಅದು ಮಲಿನವಾಗಿತ್ತೆಂದು ಅರ್ಥವಲ್ಲ... ವಾಸ್ತವದಲ್ಲಿ ಶುಚಿಯಾದ ಮನೆಯೇ. ಆದರೆ ಈಗ ಹೇಳುತ್ತಿರುವ ಮಾತಿಗೆ ಕಾರಣ' ಆಕೆಯ ಮಗನ ಸ್ನೇಹಿತನೊಬ್ಬ ವಿರಾಜಪೇಟೆಗೆ ಬಂದಿದ್ದಾನೆ. ಇವರ ಮನೆಯಲ್ಲೇ ಒಂದು ವಾರ ಇರಲಿದ್ದಾನೆ. ಆ ಹುಡುಗ ಬ್ರಾಹ್ಮಣ ಮಾಂಸಗೀಂಸ ತಿನ್ನೋದಿಲ್ಲ ಎಂದು ಈಕೆಗೆ ತಿಳಿದಿದೆ. ಬ್ರಾಹ್ಮಣರಿಗೆ ಅಡುಗೆ ಮಾಡುವುದೆಂದರೆ ಸ್ನಾನ ಮಾಡಿ ಶುದ್ಧವಾಗಿದ್ದು ಮಾಡಬೇಕೆಂದು (ಅವರು ಹಾಗೆ ಮಾಡುವರೆಂದು) ಆಕೆ ತಿಳಿದಿದ್ದಾಳೆ. ನಿತ್ಯವೂ ಮಾಂಸ, ಮೀನು ತಿನ್ನುವ ಅವರು ಆ ಕಾರಣದಿಂದ ಬಂದ ಅತಿಥಿಗೆ ಅವಮಾನ, ಕಸಿವಿಸಿ ಆಗಬಾರದೆಂದು ಮಾಂಸ ದೂಟಕ್ಕೆ ಒಂದು ವಾರದ ನಿರ್ಬಂಧವನ್ನು ವಿಧಿಸಿಕೊಂಡಿದ್ದಾಳೆ. ಆ ಹುಡುಗನಿಗೆ ಖುಷಿಯಾಗುವಂತೆ, ಆತನಿಗಾಗಿ ವಿಚಾರ, ಆಹಾರ ಪರಿಸ್ಥಿತಿಯನ್ನು ಆಕೆ ಮಾರ್ಪಡಿಸಿಕೊಳ್ಳಲು ಸಿದ್ಧಳಿದ್ದಾಳೆ. ಹೀಗೆ ಪರಸ್ಪರ ಗೌರವ, ಒಳಗೊಳ್ಳುವಿಕೆಯು ಗೆಳೆತನಕ್ಕೆ, ಸಹಬಾಳ್ವೆಗೆ ಅವಶ್ಯಕ ಎಂಬುದು ಆಕೆಯಂತಹವರ ಸರಳ ತಿಳುವಳಿಕೆ. ಇದು ಜನ ತಮ್ಮ ಬದುಕಿನಿಂದ ಕಲಿತ, ರೂಪಿಸಿ ರೂಢಿಸಿಕೊಂಡ ಅನುಭವ.

ಇಂತಹ ಸರಳ ತಿಳುವಳಿಕೆ ಇಂದು ಅತ್ಯಂತ 'ಉನ್ನತ' ಸ್ಥಾನದಲ್ಲಿರುವ, ಪ್ರತಿಯೊಂದಕ್ಕೂ ಧರ್ಮ ನಿರ್ದೇಶನ ಕೊಡುವ ನೀತಿ ಸಂಹಿತೆಗಾರರಿಗೆ ಯಾಕಿಲ್ಲ? ಕನಿಷ್ಠ ಅನ್ಯಮತ ಸಹಿಷ್ಣುತೆ ಅತ್ಯಂತ ಅವಶ್ಯಕ, ಐಕ್ಯತೆಗೆ ಬೆಸುಗೆಯ ಅಂಶವೆಂಬುದನ್ನು ಅರಿಯಲು ಸಿದ್ಧರಿಲ್ಲ. ಗೋವಿನ ಹೆಸರಿನಲ್ಲಿ ಧರ್ಮ ಕಾಯುವವೆಂದು ಚರ್ಚ್ ಮಸೀದಿಗಳ ಮೇಲೆ ಧಾಳಿ ಎಸಗುವ, ಹಿಂಸೆ ತಲ್ಲಣ ಹುಟ್ಟುಹಾಕುವ ಧರ್ಮದ ವ್ಯಾಪಾರಿಗಳಿಗೆ ವೈವಿಧ್ಯ ಸಂಸ್ಕೃತಿಯ ಬಹುಮುಖಿತ್ವದ ಬಗ್ಗೆ ಕಿಂಚಿತ್ತೂ ಗೌರವವಿಲ್ಲ. ಇಂತಹದ್ದೊಂದು ಉದಾಹರಣೆ ನೆನಪಾಗುವುದು ಮತಾಂತರದ ಹೆಸರಿನಲ್ಲಿ ಕ್ರಿಶ್ಚಿಯನ್ನರ ಮೇಲೆ, ಚರ್ಚ್‌ನಂತಹ ಪ್ರಾರ್ಥನಾ ಮಂದಿಗಳ ಮೇಲೆ ನಡೆಯುತ್ತಿರುವ ಹಲ್ಲೆಗಳ ಸ್ಥಿತಿಯಲ್ಲಿ. ಪಿಳ್ಳೆ ನೆಪವೊಡ್ಡಿ, ಭಯೋತ್ಪಾದನೆಯ ಆರೋಪ ಹೊರಿಸಿ ಮುಸ್ಲಿಂ ಅಲ್ಪಸಂಖ್ಯಾತರ ಮೇಲೆ ನಡೆಯುವ ಕೋಮುವಾದಿ ದಾಳಿಗಳ ಸಂದರ್ಭದಲ್ಲಿ. ಶತ ಶತಮಾನಗಳಿಂದ ಕಟ್ಟಿ ಬೆಳೆಸಿದ, ನಾಗರೀಕತೆ, ಸಂಸ್ಕೃತಿ ಪರಂಪರೆಗಳ ಮೇಲೆ ಬೀಳುತ್ತಿರುವ ಆಘಾತಕಾರಿ ಏಟುಗಳ ಎದುರಿನಲ್ಲಿ ನಕಾರಾತ್ಮಕ ಶಕ್ತಿಗಳ ಇಂತಹ ಧಾಳಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯವಾಗುವುದು ಮೇರಿ, ಮಾರಪ್ಪ, ಮೌಲಾ ಸಾಬ್‌ಗಳಂತಹ ಜನಸಾಮಾನ್ಯರ ಬೆವರ ಬದುಕಿನ ಬಲದ ಪ್ರತಿರೋಧದಲ್ಲಿ.

ಮತ್ತೆ ದ್ವೇಷಾಗ್ನಿ...

ಈಗ ನೋಡಿ, ಇದು ಡಿಸೆಂಬರ್, ಮತೀಯ ಸಾಮರಸ್ಯದ ಪ್ರಬಲ ಸಂಕೇತವಾಗಿರುವ ಬಾಬಾಬುಡನ್‌ಗಿರಿಯ ಮೇಲೆ, ಈ ವರುಷವೂ ಮತ್ತೆ ದ್ವೇಷಾಗ್ನಿ ಹೊತ್ತಿಸುವ ಪ್ರಯತ್ನಗಳು ಆರಂಭಗೊಂಡಿವೆ. ಅಲ್ಲಿಂದ ಬೆಳಕು ಹಿಡಿದು ತಂದು ಬಾಳು ಬೆಳಗ ಬೇಕಾಗಿರುವಲ್ಲಿ ದಾವಾಗ್ನಿ ಹೊತ್ತಿಸುವ ಹುನ್ನಾರಗಳು... ಈ ಬಾರಿಯೂ ದತ್ತ ಜಯಂತಿಯನ್ನು ಡಿಸೆಂಬರ್10 ರಿಂದ 12 ರವರೆಗೆ ಗಿರಿಯ ಮೇಲೆ ಹಾಗೂ ಚಿಕ್ಕಮಗಳೂರು, ಇತರೆಡೆಗೆ ಆಚರಿಸುವುದಾಗಿ ಭಜರಂಗದಳ, ಶ್ರೀರಾಮಸೇನೆ, ವಿಶ್ವ ಹಿಂದೂ ಪರಿಷತ್ ನಂತಹ ಸಂಘ ಪರಿವಾರದ ವಿಧ್ವಂಸಕ ಪಡೆ ಸಾಧನೆ ನಡೆಸಿದೆ. ಮೂರು ತಿಂಗಳ ಕೆಳಗೆ ದತ್ತಮಾಲೆ, ಈಗ ದತ್ತ ಜಯಂತಿ.

ಪ್ರತಿರೋಧ

ಇಂತಹ ದತ್ತ ಜಯಂತಿಯೆಂಬುದು ಹಿಂದೆ ಇಲ್ಲದ ಆಚರಣೆ ಎಂಬುದು, ಅದರಲ್ಲಿಯೂ ಈ ಸಂಘ ಪರಿವಾರಗಳನ್ನೊಳಗೊಂಡು ಎಲ್ಲರಿಗೂ ಗೊತ್ತು. ಅದಕ್ಕೆಂದೇ ಅವರು ಇಂತಹದ್ದೊಂದು ಹೊಸ ಆಚರಣೆ ಹುಟ್ಟುಹಾಕಿದರು. ಹಂತ ಹಂತವಾಗಿ ಗಿರಿಯ ಗುಹೆಯಲ್ಲಿದ್ದ ಸೂಫಿ ಪರಂಪರೆಯ ಆಚರಣೆಗಳನ್ನು ವೈಧೀಕರಣಗೊಳಿಸುವ ಯತ್ನದಲ್ಲಿ ತೊಡಗಿದರು. ಅಂದಿದ್ದ ಕಾಂಗ್ರೆಸ್ ಸರ್ಕಾರವೇ ಹವನ, ಹೋಮ, ದತ್ತ ವಿಗ್ರಹ ಪೂಜೆ ಇತ್ಯಾದಿ ಹೊಸ ಆಚರಣೆಗಳಿಗೆ ಅವಕಾಶ ಕಲ್ಪಿಸಿ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ ಹಿಂದುತ್ವ (ಮೃದು ಹಿಂದುತ್ವ) ತೋರಿದ್ದು, ಅದಕ್ಕೆ ಎಡಪಕ್ಷಗಳನ್ನೊಳಗೊಂಡು ಪ್ರಗತಿಪರರ ವಿಶಾಲ ಪ್ರತಿರೋಧ ಗಮನಾರ್ಹವಾಗಿದ್ದವು.

ಈ ಒತ್ತಡದಿಂದಾಗಿ ಧರಂಸಿಂಗ್‌ರ ಸರ್ಕಾರ ಅಂತಹ ಆಚರಣೆಗಳನ್ನು ನಿರ್ಬಂಧಿಸಿತು. ಆದಾಗ್ಯೂ ವಿರೋಧಪಕ್ಷವಾಗಿದ್ದ ಬಿಜೆಪಿಯ ಸಕ್ರಿಯ ಬೆಂಬಲದೊಂದಿಗೆ ಸಂಘ ಪರಿವಾರವು ಗಿರಿಯನ್ನು ಇನ್ನೊಂದು ಅಯೋಧ್ಯಾ ಮಾಡುವ ತನ್ನ ಅಜೆಂಡಾವನ್ನು ಮುಂದೊತ್ತಲು ಯತ್ನಿಸಿತು. ಇದಕ್ಕೆ ಪ್ರತಿರೋಧವೂ ಬೆಳೆಯಿತು. ಹೀಗಿರುವಾಗಲೇ ಮುಂದೆ ಬಂದ ಸರ್ಕಾರದ ಆಡಳಿತವೇ ಅಲ್ಲಿ ನಡೆಯುತ್ತಿದ್ದ ಏಕೈಕ ಉರುಸ್ ಆಚರಣೆಯನ್ನು ವಿಕೃತಗೊಳಿಸತೆಲ್ಲದೇ, ಅಲ್ಲಿನ ಮುಖ್ಯಸ್ಥ ಶಾಖಾದ್ರಿಯವರ ಸ್ಥಾನ, ಪಾತ್ರವನ್ನು ಗೌಣಗೊಳಿಸಿ, ಜಿಲ್ಲಾ ಆಡಳಿತವೇ ಎಲ್ಲವನ್ನೂ ಏಕಪಕ್ಷೀಯವಾಗಿ ನಿರ್ಧರಿಸುವಂತಹ ಮಟ್ಟಕ್ಕೆ ಹೋಯಿತು. ಜೆಡಿ(ಎಸ್)ನೊಂದಿಗೆ ಬಿಜೆಪಿಯು ಅಧಿಕಾರದಲ್ಲಿ ಪಾಲು ಪಡೆದ ನಂತರ ನ್ಯಾಯಾಲಯದ ಆದೇಶವನ್ನು ಹಾಗೂ ಅಲ್ಲಿನ ಆಚರಣೆಗಳನ್ನು ತಿರುಚಲು ಯತ್ನಿಸಿತು. ದತ್ತಮಾಲೆ-ದತ್ತಜಯಂತಿ; ಹವನಹೋಮಗಳಿಗೆ ಅವಕಾಶ ನೀಡಬೇಕೆಂದು ವಾದಿಸಿತು. ಆದರೆ ಜನತೆಯ ಒತ್ತಡದಿಂದ ಮುಖ್ಯಮಂತ್ರಿ ಕುಮಾರಸ್ವಾಮಿ ಅದಕ್ಕೆ ಅವಕಾಶ ನೀಡಿರಲಿಲ್ಲ. ಅದು ಒಂದು ಸಂಘರ್ಷದ ಸನ್ನಿವೇಶ ಸೃಷ್ಟಿಸಿತ್ತು.

ಸರ್ಕಾರವೇ

ಅದರೀಗ ಬಿಜೆಪಿಯೇ ರಾಜ್ಯ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಸಂಘ ಪರಿವಾರವು ನ್ಯಾಯಾಲಯದಲ್ಲಿ ಪುನರ್ ಅರ್ಜಿ ಸಲ್ಲಿಸಿದ್ದ ಬಳಿಕ ಹೊರಬಂದಿರುವ ತೀರ್ಪು ಹಿಂದಿನ ಎಲ್ಲಾ ನ್ಯಾಯಾಲಯಗಳ ತೀರ್ಪಿಗೆ ವ್ಯತಿರಿಕ್ತವಾಗಿ ಬಂದಿದೆ. 1975ರ ಹಿಂದಿನ ಆಚರಣೆಗಳಿಗಷ್ಟೇ ಸೀಮಿತವಾಗಿರಬೇಕು ಎಂಬ ನಿರ್ದೇಶನವನ್ನು ಪುನರ್ ವಿಮರ್ಶಿಸಲು ಮುಂದಾಗಿ ಹೈದರಾಲಿ

ಪುಟ 6 ಕ್ಕೆ

ಕೋಮುಗಲಭೆ ಪೀಡಿತ ಭಟ್ಕಳದಲ್ಲಿ ಸೌಹಾರ್ದ ಕರ್ನಾಟಕ ರಾಜ್ಯೋತ್ಸವ

'ಭಟ್ಕಳ' ಎಂದಾಕ್ಷಣ ಇಡೀ ರಾಜ್ಯದ ಜನತೆಯ ಮನಸ್ಸಿನಲ್ಲಿ ಕೋಮುಗಲಭೆ ಪೀಡಿತ ಪ್ರದೇಶ ಎಂದಾಗಿದ್ದು ಇಲ್ಲಿನ ಸಂಘ ಪರಿವಾರ, ಮುಸ್ಲಿಂ ಮೂಲಭೂತವಾದಿ ಸಂಘಟನೆಗಳಿಂದ ಅದಕ್ಕೆ ತಕ್ಕಂತೆ ಕಾರ್ಯಕ್ರಮ ರೂಪಿಸಿ ಜನತೆಯಲ್ಲಿ ವಿಷ ಬೀಜ ಬಿತ್ತುವ ನಿರಂತರ ಪ್ರಯತ್ನ ನಡೆಯುತ್ತಿದೆ.

ಆದರೆ ಸಿಪಿಐ(ಎಂ) ಮತ್ತು ಇತರೆ ಪ್ರಜಾಸತ್ತಾತ್ಮಕ ಸಾಮಾಜಿಕ ಸಂಘಟನೆಗಳು ಶಕ್ತಿ ಮೀರಿ ಈ ಶಕ್ತಿಗಳ ವಿರುದ್ಧ ನಿರಂತರ ಹೋರಾಟ ನಡೆಸುತ್ತಿರುತ್ತವೆ. ನವೆಂಬರ್ 30 ರಂದು ಸಿಪಿಐ(ಎಂ) ಪಕ್ಷದ ಬ್ಯಾನರ್ ಅಡಿ ಭಟ್ಕಳ ನಗರದ ಶಂಶುದ್ದೀನ್ ಸರ್ಕಲ್ ಬಳಿಯ ಸೀಮಾ ಲಾಡ್ಜ್ ಸಭಾ ಭವನದಲ್ಲಿ ಸೌಹಾರ್ದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ನಡೆದಾಗ ಸೌಹಾರ್ದತೆ ಬಯಸುವ ಮುಸ್ಲಿಂ ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಬಾಂಧವರು ಪ್ರಥಮ ಬಾರಿಗೆ ದೊಡ್ಡ ಸಂಖ್ಯೆಯಲ್ಲಿ ಬಂದು ಸಿಪಿಐ(ಎಂ) ಕಾರ್ಯವನ್ನು ಬಹಿರಂಗವಾಗಿ ಹೊಗಳಿದ್ದು ಸ್ಥಳೀಯ ಸಿಪಿಐ(ಎಂ) ಕಾರ್ಯಕರ್ತರಿಗೆ ಹೊಸ ಹುಮ್ಮಸ್ಸು ನೀಡಿದೆ.

ಖ್ಯಾತ ಸಾಹಿತಿಗಳು, ವಿಚಾರವಾದಿಗಳೂ ಆದ, ಭಟ್ಕಳ ಅಂಜುಮಾನ್ ಕಾಲೇಜಿನ ಪ್ರಾಂಶುಪಾಲರಾದ ಡಾ: ಸೈಯದ್ ಜಮೀರುಲ್ಲಾ ಷರೀಫ್ ತಮ್ಮ ಭಾಷಣದಲ್ಲಿ 'ನಾನು ನಿರಂತರವಾಗಿ ಸಿಪಿಐ(ಎಂ) ಚುಟವಟಿಕೆಗಳನ್ನು ಗಮನಿಸುತ್ತಿದ್ದು, ಕೋಮು ಸೌಹಾರ್ದತೆ ವಿಚಾರದಲ್ಲಿ ಸ್ಪಷ್ಟ ಧೋರಣೆ ಹೊಂದಿ ಪ್ರಾಮಾಣಿಕ ಪ್ರಯತ್ನ ನಡೆಸುತ್ತಿದೆ' ಎಂದಿದ್ದು, ಅದೇ ರೀತಿ ನಗರ ಸಭಾ ಸದಸ್ಯರು, ನಾವಾಯತಿ (ಮುಸ್ಲಿಂ) ಸಮಾಜದ ಯುವ ಮುಖಂಡರಾದ ಆದ ಇನಾಯತ್ ಉಲ್ಲಾ ಶಾಂಬದ್ರಿ ನೇರನಾಗಿ ಸಿಪಿಎಂ ಚಟುವಟಿಕೆ ಈ ಪ್ರದೇಶದಲ್ಲಿ ಹೆಚ್ಚಾಗಬೇಕಾಗಿದ್ದು, ಕೋಮುಶಕ್ತಿ ಮಟ್ಟ ಹಾಕಲು ಇವರಿಂದ ಮಾತ್ರ ಸಾಧ್ಯ ಎಂದು ಬಹಿರಂಗ ವೇದಿಕೆಯಲ್ಲಿ ಹೇಳಿದ್ದು ಇದೆಲ್ಲಾ ಉದಾಹರಣೆ ಅಷ್ಟೆ. ಅದೇ ರೀತಿ ಫಾದರ್ ಸೆಬಾಸ್ಟಿನ್ ಪಿಂಟೋ, ಉದ್ಯಮಿ ಎಂ.ಡಿ. ಮ್ಯಾಥ್ಯೂ, ತಾಲ್ಲೂಕಿನ ಪತ್ರಕರ್ತರು ಪಾಲ್ಗೊಂಡ ಜನರು ಸಿಪಿಐ(ಎಂ) ಕಾರ್ಯವನ್ನು ಮನಸಾರೆ ಶ್ಲಾಘಿಸಿದ್ದರು.

ಡಿಸೆಂಬರ್ 14 ರಂದು ಭಟ್ಕಳಕ್ಕೆ ಆಗಮಿಸುವ ವಾಹನ ಜಾಥಾದ ಅದ್ದೂರಿ ಸ್ವಾಗತಕ್ಕೂ ಸರ್ವ ರೀತಿ ಸಹಕರಿಸುತ್ತೇವೆಂದು ಸಮಾವೇಶದಲ್ಲಿ ಹಾಜರಿದ್ದ ಎಲ್ಲಾ ಗಣ್ಯರು ತಿಳಿಸಿದ ಮಾತು ಸ್ಫೂರ್ತಿದಾಯ.

ಸಿಂಧನೂರಿನಲ್ಲಿ...

ಸೌಹಾರ್ದ ಕರ್ನಾಟಕ ರಾಜ್ಯೋತ್ಸವ ಆಚರಣೆಯನ್ನು 27-11-2008ರಂದು ಸಿಐಟಿಯು ತಾಲ್ಲೂಕು ಸಮಿತಿ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಕಾರ್ಮಿಕರ ತಾಲ್ಲೂಕು ಸಮಿತಿ ಜಂಟಿಯಾಗಿ ಆಚರಿಸಿದವು. ಮೊದಲೇ ನಿಗದಿಗೊಳಿಸಿದಂತೆ ಸಾಯಂಕಲ 5-00 ಗಂಟೆಗೆ ಮನೆಗೆಲಸ ಕಾರ್ಮಿಕ ಸಂಘದ ಮುಖಂಡರು, ಕಟ್ಟಡ ಕಾರ್ಮಿಕ ಸಂಘದ ಕಾರ್ಯಕರ್ತರು, ಡಿವೈಎಫ್‌ಐ ಮುಖಂಡರು, ಹಮಾಲಿ ಕಾರ್ಮಿಕ ಸಂಘದ ಮುಖಂಡರು ತಮ್ಮ ತಮ್ಮ ಕಾರ್ಮಿಕರನ್ನು ಕೃಷಿ ಕೂಲಿಕಾರರನ್ನು ನಗರಸಭೆ ಮೈದಾನಕ್ಕೆ ಕರೆದುಕೊಂಡು ಬರತೊಡಗಿದರು. ಸಂಜೆ ಆರು ಗಂಟೆ ಆಗುತ್ತಾಬಂದಂತೆಲ್ಲ, ಎಲ್‌ಐಸಿ ಆಫೀಸಿನ ಸಿಬ್ಬಂದಿಯವರು ಬಂದು ಈ ಸಮೂಹದಲ್ಲಿ ಸೇರಿಕೊಂಡರು.

ನಗರಸಭೆ ಮೈದಾನದಿಂದ ಸೌಹಾರ್ದ ಕರ್ನಾಟಕ ರಾಜ್ಯೋತ್ಸವದ ಜ್ಯೋತಿಯ ಮೆರವಣಿಗೆ ಸೌಹಾರ್ದತೆ ಐಕ್ಯತೆಗೆ ಜಯಘೋಷ ಕೂಗುತ್ತಾ ಕೋಮುವಾದಕ್ಕೆ ಧಿಕ್ಕಾರ ಹೇಳುತ್ತಾ ಸಾಗಿತು. ಪ್ರಮುಖ ಬೀದಿಗಳ ಮೂಲಕ ತಹಶೀಲ್ದಾರ್ ಕಾರ್ಯಾಲಯ ತಲುಪಿದ ಮೆರವಣಿಗೆ ಅಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು. ಸಭೆಯನ್ನು ಉದ್ದೇಶಿಸಿ ನರಸಿಂಹಪ್ಪ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ಕೋಮು ಸೌಹಾರ್ದತೆಯೇ ನಮ್ಮ ಬದುಕಿನ ಜೀವಾಳ, ಅದನ್ನು ಉಳಿಸಿಕೊಂಡು ಹೋಗುವುದು ನಮ್ಮ ಜವಾಬ್ದಾರಿ ಎಂದರು. ಕೃಷಿ ಕಾರ್ಮಿಕ ಸಂಘದ ತಾಲ್ಲುಕು ಸಂಚಾಲಕರಾದ ನಾರಾಯಣ ಕಿಲ್ಲೇದ್ ಮಾತನಾಡುತ್ತಾ ಕೋಮುವಾದವನ್ನು ಖಂಡಿಸಿದರು. ಡಿವೈಎಫ್‌ಐ ತಾಲ್ಲೂಕು ಅಧ್ಯಕ್ಷ ಅಪ್ಪಣ್ಣ ಕಾಂಬ್ಳೆ ಮಾತನಾಡುತ್ತಾ ಕೋಮುವಾದಕ್ಕೆ ಪ್ರಚೋದನೆ ಕೊಡುವ ಬಿಜೆಪಿ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ಎಐಐಇಎ ಮುಖಂಡರು ಹಾಗೂ ವಲಯ ಕಾರ್ಯದರ್ಶಿಗಳಾದ ಜಿ.ಸುರೇಶ್ ಕೋಮುವಾದದ ಅಪಾಯವನ್ನು ಎಳೆ ಎಳೆಯಾಗಿ ಬಿಡಿಸಿಡುತ್ತಾ ಸೌಹಾರ್ದತೆಯ ಮಹತ್ವ ವಿವರಿಸಿದರು. ಸಿಐಟಿಯು ತಾಲ್ಲೂಕು ಅಧ್ಯಕ್ಷ ಹೆಚ್.ವಿ.ಗುಡಿ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಯಂಕಪ್ಪ ವಂದನೆ ಹೇಳಿದರು. ಗೋಪಾಲಕೃಷ್ಣ ನಿರೂಪಿಸಿದರು. ಈ ಕಾರ್ಯಕ್ರಮದಲ್ಲಿ 180 ರಿಂದ 200 ಜನ ಭಾಗವಹಿಸಿದ್ದರು.

○

ಇದ್ದದ್ದು ಇದ್ದಾಂಗ

ವಿದ್ಯುತ್ ಕೊರತೆ - ವೈಫಲ್ಯ


"ಬೇಸಿಗೆ ದೂರವಿರುವಾಗಲೇ ರಾಜ್ಯದಲ್ಲಿ ತೀವ್ರ ವಿದ್ಯುತ್ ಅಭಾವ ಕಾಣಿಸಿಕೊಂಡಿದ್ದು, ಮುಂದಿನ ದಿನಗಳು ಮತ್ತಷ್ಟು ಭಯಾನಕವಾಗುವ ಎಲ್ಲ ಸಾಧ್ಯತೆಗಳು ಇವೆ. ಕರ್ನಾಟಕವು ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಿಲ್ಲದಿರುವುದು ನಿಜವಾದರೂ, ಹಿಂದಿನ ಸರ್ಕಾರಗಳು ಕೇಂದ್ರ ಮತ್ತು ನೆರೆಹೊರೆ ರಾಜ್ಯಗಳ ಜೊತೆ ಉತ್ತಮ ಬಾಂಧವ್ಯ ಇಟ್ಟುಕೊಂಡು ಅಗತ್ಯವಿರುವ ವಿದ್ಯುತ್ ಪಡೆಯುವಲ್ಲಿ ಯಶಸ್ವಿಯಾಗುತ್ತಿದ್ದವು. ಆದರೆ ಈಗಿನ ರಾಜ್ಯ ಸರ್ಕಾರವು ಛತ್ತೀಸ್‌ಗಡದಲ್ಲಿ ಶಾಖೋತ್ಪನ್ನ ವಿದ್ಯುತ್ ಕೇಂದ್ರವೊಂದನ್ನು ಸ್ಥಾಪಿಸುವ ಪ್ರಯತ್ನವೊಂದನ್ನು ಬಿಟ್ಟರೆ, ಬೇರೆ ಕಡೆಗಳಿಂದ ವಿದ್ಯುತ್ ಪಡೆಯುವ ಯಾವ ಪ್ರಯತ್ನವನ್ನೂ ನಡೆಸಿದಂತಿಲ್ಲ. ವಿದ್ಯುತ್ ತೊಂದರೆ ಇದ್ದಾಗಲೆಲ್ಲ ಆಂಧ್ರ ಮತ್ತು ಮಹಾರಾಷ್ಟ್ರದಿಂದ ಹೆಚ್ಚುವರಿ ವಿದ್ಯುತ್ ಪಡೆಯಲಾಗುತ್ತಿತ್ತು. ಆದರೆ ಅಂಥ ಪ್ರಯತ್ನ ಈಗ ನಡೆದಂತೆ ಕಾಣುತ್ತಿಲ್ಲ. ನೆರೆ ಹೊರೆಯ ರಾಜ್ಯಗಳ ಜೊತೆ ಗಡಿ ಮತ್ತು ನೀರಿನ ಹಂಚಿಕೆ ವಿಷಯದಲ್ಲಿ ವಿವಾದ ಮತ್ತು ಭಿನ್ನಾಭಿಪ್ರಾಯವಿರಬಹುದು. ಬೇರೆ ಬೇರೆ ಪಕ್ಷಗಳ ಸರ್ಕಾರವಿರಬಹುದು. ಆದರೆ ಪಕ್ಷ ರಾಜಕಾರಣವೇ ಬೇರೆ. ಆಡಳಿತವೇ ಬೇರೆ. ಕಷ್ಟ ಬಂದಾಗ ಕೊಟ್ಟು ಪಡೆದುಕೊಳ್ಳುವ ಬಾಂಧವ್ಯ ಮುಂದುವರಿಯುವುದು ಎರಡೂ ರಾಜ್ಯಗಳಿಗೂ ಒಳ್ಳೆಯದು. ಆದರೆ ಇತ್ತೀಚೆಗೆ ಈ ಬಾಂಧವ್ಯ ಕಾಣದಿರುವುದು ದುಃನದೃಷ್ಟಕರ.....'

'ಪ್ರಜಾವಾಣಿ' ಸಂಪಾದಕೀಯ ರಾಜ್ಯದ ವಿದ್ಯುತ್ ಸಮಸ್ಯೆ ಬಗ್ಗೆ

ಈ ಧಾಳಿಯನ್ನು ಪ್ರಾಯೋಜಿಸಿದವರು

ಅಂತೂ ಕೇಂದ್ರದ ಮನೆ (ಗೃಹ) ಮಂತ್ರಿ ಮನೆಗೆ ಹೋಗಿದ್ದಾರೆ. ಕೃಷ್ಣ ಕಂಸನಿಗೆ ನೂರು ತಪ್ಪುಗಳವರೆಗೆ ಅವಕಾಶ ಕೊಟ್ಟಿದ್ದಹಾಗೆ ಈತನಿಗೂ ಅಭಯವಿತ್ತೇನೋ?. ಅವರಷ್ಟೇ ಅಥವಾ ಅವರಿಗಿಂತ 'ದಕ್ಷ'ರಾದ ನಮ್ಮ ರಾಜ್ಯದ 'ಗ್ರಹ'ಮಂತ್ರಿಯ ಗ್ರಹಗತಿ ಚೆನ್ನಾಗಿದೆಯೆಂದು ಕಾಣುತ್ತದೆ. ಸಾವಿರ ತಪ್ಪುಗಳವರೆಗೂ ಅಭಯವಿರಬಹುದು. ಆ ವಿಷಯ ಇರಲಿ, ಇಷ್ಟು ವರ್ಷ ಕೇಂದ್ರದ ಅ(ನ)ರ್ಥ ಮಂತ್ರಿಯಾಗಿದ್ದ ಚಿದಂಬರಂ ಈಗ ಮನೆ ಮಂತ್ರಿಯಾಗಿ ಭಯೋತ್ಪಾದನೆ ಎದುರಿಸಲು ಬಂದಿದ್ದಾರೆ. ಅಮೆರಿಕದಂತೆ ನಮ್ಮ ದೇಶದ ಅರ್ಥ ವ್ಯವಸ್ಥೆಯನ್ನೂ ಸಂಪೂರ್ಣ ಮಲಗಿಸಿಯಾದ ನಂತರ ಬಹುಶಃ ಅವರ ಕಾರ್ಯ ಯಶಸ್ವಿಯಾಗಿ ಪೂರೈಸಿದಂತಾಗಿದೆ ಎಂದು ಸನ್ಮಾನ್ಯ ಪ್ರಧಾನಿ ಸರ್ದಾರ್‌ಜಿಯವರು ಭಾವಿಸಿರಬೇಕು.

ಮನೆ ಮಂತ್ರಿಯಾಗಿ ಈ ಚಿದಂಬರಂ ಏನು ಮಾಡಬಹುದು? ಸದಾ ಜಿ.ಡಿ.ಪಿ. ದರದ ಜಪ ಮಾಡುತ್ತಿದ್ದ ಇವರು ಈಗ ಜಿ.ಟಿ.ಎ. ದರ ಎಷ್ಟು ಇರಬೇಕೆಂದು ನಿರ್ಧರಿಸಿ ಅದನ್ನು ಸಾಧಿಸಲು ಪ್ರಾಮಾಣಿಕವಾಗಿ ಪ್ರಯತ್ನ ಪಡುತ್ತಾರೇನೋ! ಅರ್ಥ ಮಂತ್ರಿಯಾಗಿದ್ದಾಗ ಜಿ.ಡಿ.ಪಿ ದರದ ಬಗ್ಗೆ ಭಾಳ ತಲೆ ಕೆಡಿಸಿಕೊಂಡಿದ್ರು. ಈ ಗೃಹ ಖಾತೆಯಲ್ಲಿ ಅಂಥದ್ದು ಏನೂ ಇಲ್ಲದಿದ್ರೆ, ಅವರಿಗೆ ಸರಿಹೋಗಲ್ಲ. ಅದಕ್ಕೆ ಜಿ.ಡಿ.ಪಿ. ಬದಲು ಜಿ.ಟಿ.ಎ. ದರ ನಿಗದಿ ಮಾಡಿಕೊಳ್ಳಬಹುದಾ? ಅಂದಹಾಗೆ ಜಿ.ಟಿ.ಎ ಅಂದ್ರೆ ಏನು? ಅಂತ ಕೇಳುತ್ತಿದ್ದೀರಾ? ಜಿ.ಟಿ.ಎ ಅಂದ್ರೆ ಗ್ರಾಸ್ ಟೆರರಿಸಂ ಅಟ್ಯಾಕ್ಸ್ ಎಂದು ಇರಬಹುದೇ? ಚಿದಂಬರಂಗೆ ಬಹಳ ಇಷ್ಟವಾದುದು ತ್ರಿಕರಣಗಳು: ಉದಾರೀಕರಣ , ಜಾಗತೀಕರಣ, ಹಾಗೂ ಖಾಸಗೀಕರಣ. ಭಯೋತ್ಪಾದನೆ ನಿಯಂತ್ರಣ ಅಥವಾ ನಿರ್ಮೂಲನ ಕಾರ್ಯವನ್ನೂ ಖಾಸಗೀಕರಣಗೊಳಿಸುವುದು ಇವರ ಆದ್ಯತೆಯಾಗಬಹುದು. ಖಾಸಗೀಕರಣ ವಾದ ಮೇಲೆ ಜಾಗತೀಕರಣ, ಅಂದರೆ, ಭಯೋತ್ಪಾದನೆ ವಿರುದ್ಧ ವಿದೇಶೀ ಬಂಡವಾಳ ಆಕರ್ಷಣೆಗೆ ಸಕಲ ಯತ್ನಗಳನ್ನೂ ಮಾಡಬಹುದು . ನಂತರ ಇದ್ದೇ ಇದೆ, ಉದಾರೀಕರಣ: ಸ್ವದೇಶೀ ಭಯೋತ್ಪಾದಕರ ಬಗ್ಗೆ ಉದಾರ ನಿಲುವು!



ಮುಂಬೈ ಭಯೋತ್ಪಾದನೆ ತನಿಖೆ ಮಾಡಲು ಅಮೆರಿಕದ ತನಿಖಾಧಿಕಾರಿಗಳು ಇಲ್ಲಿಗೆ ಬಂದಿದ್ದರು. ತಾವು ಭಯೋತ್ಪಾದಕರಿಗೆ ಸಪ್ಲೈ ಮಾಡಿದ ವೆಪನ್‌ಗಳು ಸರಿಯಾಗಿ ಢಂ ಅಂದವೋ ಇಲ್ಲವೋ ಎಂದು ಕ್ವಾಲಿಟಿ ಚೆಕ್ ಮಾಡಲು ಇರಬೇಕು! ಆಹಾ ಎಂಥ ಸ್ವತಂತ್ರ ದೇಶವಿದು! ಭಯೋತ್ಪಾದನೆಯ ಪಿತಾಮಹ ಕೂಡಾ ನಮ್ಮ ದೇಶಕ್ಕೆ ಬಂದು ಸ್ವತಂತ್ರವಾಗಿ ತನಿಖೆ (?) ಮಾಡಿಕೊಂಡು ಹೋಗಬಹುದು. ಭಯೋತ್ಪಾದನೆಗೆ ಪಾಕಿಸ್ಥಾನ ಕಾರಣ ಅಂತ ಅಂತೂ ಭಾರತ ಗಟ್ಟಿಯಾಗಿ ಹೇಳುತ್ತಿದೆ ನಿಜ. ಆದರೆ ಆ ಭಯೋತ್ಪಾದಕರಿಗೆ ಅಂಥ ಆಧುನಿಕ ವೆಪನ್‌ಗಳು ಎಲ್ಲಿಂದ ಬಂದವು? ಹಣಕಾಸು ಎಲ್ಲಿಂದ ಬಂತು? ತನಿಖೆ ಮಾಡುವವರು ಯಾರು?.

ನಮ್ಮ ಟೀವಿ ಮಾಧ್ಯಮದವರಿಗೆ ಇಂಥ 'ತನಿಖೆ'ಗಳಲ್ಲಿ ಆಸಕ್ತಿಯಿಲ್ಲ. ಏನಿದ್ದರೂ ಮೂರನೇ ದರ್ಜೆ ಸಿನಿಮಾಗಳಂತೆ ಸ್ಫೋಟದ, ರಕ್ತ ಚೆಲ್ಲಾಡುವ ರೋಚಕತೆ(?)ಯಿಂದ ಜಾಹೀರಾತು ಸೆಳೆಯುವುದೇ ಅವರ ಧ್ಯೇಯ. ಹೀಗೆ ಲೈವ್ ಶೋಗಳಲ್ಲಿ ಜಾಹೀರಾತು ಇನ್ನು ಮುಂದೆ ಹೇಗಿರಬಹುದೆಂದು ಹಾಗೇ ಕಲ್ಪಿಸಿಕೊಳ್ಳಿ:

1. ಭಯೋತ್ಪಾದನೆಯ ಈ ಭಾಗವನ್ನು ಪ್ರಾಯೋಜಿಸಿದವರು......,
2. ಸ್ಟಾರ್ ಹೋಟೆಲ್ ಬಾಂಬ್ ಸ್ಫೋಟದ ಪ್ರಾಯೋಜಕರು.....,
3. ವಿಮಾನ ನಿಲ್ದಾಣದಲ್ಲಿ ಗುಂಡಿನ ದಾಳಿಯನ್ನು ಪ್ರಾಯೋಜಿಸಿದವರು.....,
4. ಅಮಾಯಕ ಹೆಣ್ಣಿನ ಮೇಲೆ ಸಾಮೂಹಿಕ ಅತ್ಯಾಚಾರವನ್ನು ಪ್ರಾಯೋಜಿಸಿದವರು ..,

(ಈ ಕಾರ್ಯಕ್ರಮದ ಲೈವ್ ಕವರೇಜ್ ಮಾಡಲಾಗದಿದ್ದುದಕ್ಕಾಗಿ ವಿಷಾದಿಸುತ್ತೇವೆ, ಎಂದು ಪ್ರಕಟಿಸಿದರೂ ಆಶ್ಚರ್ಯ ಪಡಬೇಡಿ).

ಕರ್ನಾಟಕ ರಾಜ್ಯ ಕ್ರಮೇಣ ಕತ್ತಲೆಯತ್ತ ಜಾರುತ್ತಿದೆ. ವಿದ್ಯುತ್ ಉತ್ಪಾದನೆಯ ಸಾಧ್ಯತೆಯಲ್ಲಿ ಕಳೆದ ವರ್ಷದ ಸ್ಥಿತಿಯಲ್ಲಿ ಭಾರಿ ಬದಲಾವಣೆ ಏನೂ ಆಗಿಲ್ಲದಿದ್ದರೂ ವಿದ್ಯುತ್ ಕೊರತೆ ಮಾತ್ರ ಗಂಭೀರ ಸ್ಥಿತಿ ಮುಟ್ಟಿದೆ. ರಾಜ್ಯ ಬಿಜೆಪಿ ಸರ್ಕಾರದ ಹೊಣೆಗೇಡಿತನವಲ್ಲದೇ ಇದಕ್ಕೆ ಬೇರೇನೂ ಕಾರಣಗಳು ಕಾಣುತ್ತಿಲ್ಲ.

ಬಿಜೆಪಿ ಸರ್ಕಾರದ ದಿವ್ಯ ಕೃಪೆ ಕತ್ತಲೆಯೆಡೆಗೆ ಕರ್ನಾಟಕ...

ಕೆ.ಎನ್.ಉಮೇಶ್

ಏಪ್ರಿಲ್-ಮೇನಲ್ಲಿರಬೇಕಾದ ವಿದ್ಯುತ್ ಕೊರತೆ ಜುಲೈ-ಆಗಸ್ಟ್‌ನಲ್ಲೇ ಆರಂಭವಾಗಿ ಸೆಪ್ಟೆಂಬರ್-ಅಕ್ಟೋಬರ್‌ನಲ್ಲಿ ತೀವ್ರ ಗೊಂಡು ಮತ್ತು ಈಗ ಆತಂಕಕಾರಿ ಹಂತ ತಲುಪಿದೆ. ಗೃಹ ಬಳಕೆಯಲ್ಲಿ ರೈತರ ನೀರಾವರಿ ಪಂಪ್‌ಸೆಟ್, ಮತ್ತು ಕೈಗಾರಿಕೆಗಳಿಗೂ ವಿದ್ಯುತ್ ಇಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಕೊರತೆ ಸರಿದೂಗಿಸಲು ಕ್ರಮವಹಿಸುವ ಬದಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ತಪ್ಪು ಹೊರಿಸುವ, ಹಿಂದಿನ ಸರ್ಕಾರಗಳ ಮೇಲೆ ಗೂಬೆ ಕೂರಿಸುವ ಕೀಳು ರಾಜಕೀಯದಲ್ಲಿ ತೊಡಗಿದೆ.

ಬಾರದ ಕರಂಟೂ...

ಗಗನಕ್ಕೇರಿದ ತರಕಾರಿ ಬೆಲೆಗಳು

ಹಳ್ಳಿಗಾಡಿನ ರೈತರ ಬದುಕಿನಲ್ಲಿ ವಿದ್ಯುತ್ ಕಣ್ಣಾಮುಚ್ಚಾಲೆ ಸೃಷ್ಟಿಸಿರುವ ಆತಂಕಗಳು ಒಂದೆರಡಲ್ಲ. ಬಹಳ ಸಮಯ ವಿದ್ಯುತ್ ಇರುವುದಿಲ್ಲ. ಇದ್ದಾಗಲೂ ಉತ್ತಮ ಗುಣಮಟ್ಟದ ವಿದ್ಯುತ್ ಇರುವುದಿಲ್ಲ. ಕರೆಂಟು ಯಾವಾಗ ಬರುತ್ತದೋ, ಹೋಗುತ್ತದೋ ಲೆಕ್ಕವಿಲ್ಲ. ಹಗಲು ವಿದ್ಯುತ್ ಇಲ್ಲದೇ ರಾತ್ರಿ ಇದ್ದರೆ, ನಡುರಾತ್ರಿ ನಿದ್ರೆಗೆಟ್ಟು ತೋಟ, ಗದ್ದೆಗೆ ನೀರು ಕಟ್ಟಲು ಹೋಗಬೇಕು. ನೆಮ್ಮದಿಯಾಗಿ ನಿದ್ರೆ ಮಾಡುವಂತಿಲ್ಲ. ಕಳ್ಳಕಾರರು, ಹಾವು, ಹುಳು ಇತ್ಯಾದಿ ವಿಷ ಜಂತುಗಳ ಭೀತಿಯಲ್ಲೇ ರೈತರು ನೀರು ಹಾಯಿಸಲು ಹೆಣಗಾಡಬೇಕು. ಇದು ಇಡೀ ರಾಜ್ಯಕ್ಕೆ ಆಹಾರ, ಸೊಪ್ಪು, ತರಕಾರಿ ಹಣ್ಣು ಹಂಪಲುಗಳನ್ನು, ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾವಸ್ತುಗಳನ್ನು ಬೆಳೆದುಕೊಡುವ ರೈತರ ಅವಸ್ಥೆ.

ಇಂತಹ ಪರಿಸ್ಥಿತಿಯ ಪರಿಣಾಮವಾಗಿ ತರಕಾರಿ ಬೆಳೆ ಇಳುವರಿ ಕುಸಿದಿದೆ. ನೇರ ಪರಿಣಾಮವಾಗಿ ತರಕಾರಿಗಳ ಬೆಲೆ ಗಗನಕ್ಕೇರಿವೆ. ರೈತರ ಸರಾಸರಿ ಆದಾಯವು ಕುಂಠಿತವಾಗಿದೆ. ಆದರೂ ಯಡಿಯೂರಪ್ಪನವರು ಮಾತ್ರ ನೀರಾವರಿ ಪಂಪ್‌ಸೆಟ್‌ಗಳಿಗೆ ಮೀಟರ್ ಹಾಕಿಸಿಕೊಳ್ಳಿ, ಹಿಂದಿನ ಬಾಕಿ ಪಾವತಿಸಿ ನಿಮಗೆ ಉಚಿತ ಹಾಗೂ ಗುಣಮಟ್ಟದ ವಿದ್ಯುತ್ ನೀಡುತ್ತೇವೆ ಎಂಬ ಮೂಗಿಗೆ ತುಪ್ಪ ಸವರುವ ಕೆಲಸ (ಪ್ರಚಾರ) ನಡೆಸಿದ್ದಾರೆ.

ವಿದ್ಯುತ್ ಕೊರತೆ

ಕಾರ್ಖಾನೆ ವಾರದ ರಜೆ ಬದಲು

ಕೈಗಾರಿಕೆಗಳಿಗೆ ಸರಬರಾಜು ಮಾಡಲು ಅಗತ್ಯ ವಿದ್ಯುತ್ ಇಲ್ಲ, ಇರುವ ವಿದ್ಯುತ್‌ನಲ್ಲೇ ಉಳಿಸಲು ರಾಜ್ಯ ಸರ್ಕಾರ ಜಾರಿಗೆ ತಂದ ಪ್ರಳಯಾಂತಕ ಐಡಿಯಾ ಎಂದರೆ ಕೈಗಾರಿಕೆ ಕಾರ್ಮಿಕರಿಗೆ ಸದ್ಯ ಚಾಲ್ತಿಯಿರುವ ಭಾನುವಾರ ವಾರದ ರಜೆಯನ್ನು ವಾರದ ಬೇರೆ ಬೇರೆ ದಿನ ಕೈಗಾರಿಕಾ ಪ್ರದೇಶವಾರು ವಾರದ ರಜೆ ನೀಡುವ (Staggered Holiday) ಪರಿಹಾರ. ಇದರಿಂದಾಗಿ ಬೆಸ್ಕಾಂ ವ್ಯಾಪ್ತಿಯ ಬೆಂಗಳೂರು ಒಂದರಲ್ಲೇ 100 ರಿಂದ 120 ಮೆಗಾವ್ಯಾಟ್ ವಿದ್ಯುತ್ ಲಭ್ಯವಾಗುತ್ತದೆ. ಅದನ್ನು ನಾವು ಬಳಸಬಹುದು ಎಂಬುದು ಅವರ ವಾದ. ಕೆಲವು ಕೈಗಾರಿಕಾ ಮಾಲೀಕರಿಗೂ ಇದು ಓಕೆ. ಏಕೆಂದರೆ ಕಾರ್ಮಿಕರನ್ನು ಏನಾದರೂ ಮಾಡಿ ವಾರದ ಬೇರೆ ಬೇರೆ ದಿನದ ರಜೆಗೆ ಒಗ್ಗಿಸಬೇಕು. ಅದರಂತೆ ಒಮ್ಮೆ ಒಗ್ಗಿಬಿಟ್ಟರೆ ಮುಂದೊಂದು ದಿನ ಅದರಿಂದಲೇ ಒಳ್ಳೆ ಹಣ ಕೊಳ್ಳೆ ಹೊಡೆಯಬಹುದು ಎಂಬುದು ಮಾಲೀಕರ ಮನದಾಳದ ಬಯಕೆ. ಕೆಲವು ಕೈಗಾರಿಕೆಗಳು ವಾರದ ಏಳು ದಿನ ನಡೆಯಲೇ ಬೇಕು. ಆದರೆ ಕಾನೂನು ಪ್ರಕಾರ ವಾರಕ್ಕೆ ಒಂದು ದಿನ ರಜೆ ನೀಡಲೇಬೇಕು. ವಾಡಿಕೆಯಂತೆ ಭಾನುವಾರ. ಭಾನುವಾರ ಇಡೀ ಕೈಗಾರಿಕೆಗೆ ರಜೆ. ಅಂದೇನಾದರೂ ಕಾರ್ಮಿಕರಿಂದ ಕೆಲಸ ಮಾಡಿಸಬೇಕೆಂದು ಹೆಚ್ಚುವರಿ ಕೆಲಸ(ಓ.ಟಿ) ಕ್ಕೆ ದುಪ್ಪಟ್ಟು ವೇತನ (ಓ.ಟಿ.ವೇತನ) ನೀಡಬೇಕು. ಇದನ್ನು ಕದಿಯಲು ಹೋದರೇ ಸಂಘಗಳು ಬಿಡುವುದಿಲ್ಲ. ತಪ್ಪಿಸಿಕೊಳ್ಳಲು ದಾರಿ ಎಂದರೆ ಕಾರ್ಖಾನೆಯ ಕಾರ್ಮಿಕರಿಗೆ ವಾರದ ಒಂದೊಂದು ದಿನ ಒಬ್ಬೊಬ್ಬರಿಗೆ ರಜೆ ನೀಡುವುದು. ಅದನ್ನು ಮಾಡಲು ಹೋದರೆ ಸಂಘಗಳು ಒಪ್ಪುವುದಿಲ್ಲ ಕಾರ್ಮಿಕರು ಒಪ್ಪುವುದಿಲ್ಲ. ವಿದ್ಯುತ್ ಕೊರತೆ ನೆಪದಲ್ಲಿ ಇಂತಹದ್ದೊಂದು ಅವಕಾಶ ಸಿಕ್ಕರೆ ಬಿಟ್ಟರಾದೀತೆ ಎಂಬುದು ಕೆಲವು ಮಾಲೀಕರ ಅಂಬೋಣ.

ಭಾನುವಾರದ ರಜೆ ಪದ್ಧತಿ ಬಂದಿರುವುದೇಕೆ, ಕ್ರಿಶ್ಚಿಯನ್ನರು ಚರ್ಚ್‌ಗಳಿಗೆ ಹೋಗಲು ಅನುಕೂಲವಾಗಲಿ ಎಂದಲ್ಲವೇ? ಇದನ್ನು ಬದಲಿಸಲು ಬಿಜೆಪಿ ಸರ್ಕಾರಕ್ಕೆ ಖುಷಿ ಇರಬಹುದು.

ಪಠಣಕ್ಕೆ ವಸುದೈವ ಕುಟುಂಬಕಂ...

ಜಾರಿಯಲ್ಲಿ ಕುಟುಂಬ ವಿಘಟನೆ

ಬೆಂಗಳೂರು ಎಂಬ ಮಹಾನಗರಿಯಲ್ಲಿ ಸೋಮವಾರದಿಂದ ಶನಿವಾರ ಹೇಗೆ ಬರುತ್ತದೆ ಎಂಬುದೇ ಗೊತ್ತಾಗಲ್ಲ! ಗಂಡ ಹೆಂಡತಿ ಮಕ್ಕಳು ಒಟ್ಟಿಗೆ ಇರಲು ಸ್ವಲ್ಪ ಸಮಯ ಒಟ್ಟಾಗಿ ಕಳೆಯಲು, ಒಟ್ಟಿಗೆ ಅಕ್ಕ ಪಕ್ಕದ ಊರಿಗೆ, ಬಂಧು ಮಿತ್ರರ ಮನೆಗೆ ಹೋಗಿ ಬರಲು ಸಿಗುವುದೊಂದೇ ಭಾನುವಾರ ರಜಾ ದಿನ. ಆದರೆ ವಿದ್ಯುತ್ ರಜೆಯಿಂದಾಗಿ ಗಂಡನಿಗೆ ಸೋಮವಾರ ರಜೆ ಆದರೆ, ಹೆಂಡತಿಗೆ ಮತ್ತ್ಯಾವುದೋ ವಾರದಂದು ರಜೆ. ಮಕ್ಕಳಿಗೆ ಭಾನುವಾರ ರಜೆ. ಇವರೆಲ್ಲಾ ಒಟ್ಟಿಗೆ ಸೇರುವುದಾದರೂ ಹೇಗೆ? ಎಂದರೆ. ಏನು ಮಾಡೋದು ವಿದ್ಯುತ್ ಕೊರತೆ ಹಾಗೂ ವಿದ್ಯುತ್ ರಜೆ. ಸ್ವಲ್ಪ ಅಡ್ಜಸ್ಟ್ ಮಾಡ್ಕೊಳ್ಳಿ. ಇದು 2009ನೇವರೆಗೆ ಇರಬಹುದು ಎಂಬ ಸಬೂಬು ಸರ್ಕಾರದ್ದು. ವಿಶ್ವವೇ ಒಂದು ಕುಟುಂಬ ಎಂದು ಮಂತ್ರ ಪಠಿಸುವ ಮಂದಿ, ಸಣ್ಣ ಪುಟ್ಟ ಕುಟುಂಬಗಳನ್ನೇ ಸಾರ್ವತ್ರಿಕವಾಗಿ ವಿಘಟಿಸುವ ಕೆಲಸಕ್ಕೆ ಮುಂದಾಗಿದ್ದರು. ಕಾರ್ಮಿಕರ ಪ್ರತಿರೋಧದಿಂದಾಗಿ 2008 ನವೆಂಬರ್ ಒಂದರಿಂದ ಜಾರಿಯಿಂದ ವಿದ್ಯುತ್ ರಜೆಯನ್ನು ನವೆಂಬರ್ 26 ರಿಂದ ರದ್ದುಪಡಿಸಲಾಗಿದೆ.

ವಿದ್ಯಾರ್ಥಿಗಳ ಅವಸ್ಥೆ

ಇನ್ನು ವಿದ್ಯಾರ್ಥಿಗಳ ಪಾಡು ಹೇಳತೀರದು. ಓದಲು, ಬರೆಯಲು ಕೂತರೆ ವಿದ್ಯುತ್ ಕೈಕೊಡುವುದು ತೀರಾ ಮಾಮೂಲಾಗಿದೆ. ಡಿಸೆಂಬರ್ ಜನವರಿ ಬರುತ್ತಿರುವಂತೆ ಪರೀಕ್ಷೆಗಳು ಹತ್ತಿರಹತ್ತಿರವಾಗುತ್ತಾ ಬಂದಂತೆ ಶಾಲಾಮಕ್ಕಳ ಎದೆಬಡಿತ ಏರುತ್ತಿದೆ. ಸೆಮಿಸ್ಟರ್ ಪದ್ಧತಿಯಿಂದಾಗಿ ವರ್ಷವಿಡಿ ಒಂದಲ್ಲ ಒಂದು ಪರೀಕ್ಷೆಗಳು ನಡೆಯುತ್ತಿರುವ ಈ ಸಮಯದಲ್ಲಿ ವಿದ್ಯಾರ್ಥಿಗಳ ಆತಂಕಗಳನ್ನು ಕೇಳುವವರು ಯಾರು? ಎಲ್ಲರ ಮನೆಗಳಲ್ಲಿ ದುಬಾರಿ ಎಮರ್ಜೆನ್ಸಿ ಲೈಟ್, ಇತ್ಯಾದಿ ಬಳಸಲು ಸಾಧ್ಯವೇ? ಬಡವರ ಮನೆಯ ಮಕ್ಕಳ ಕತೆ ಏನು ಎನ್ನುವಂತಾಗಿದೆ.

ಗುಬ್ಬಚ್ಚಿ ಬಡಿದು... ಹದ್ದಿಗೆ ಹಾಕುವ ಪ್ರಸ್ತಾವ

ಸರ್ಕಾರ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ(ಕೆಇಆರ್‌ಸಿ) ಮುಂದುವರಿಸಿರುವ ಮತ್ತೊಂದು ಪ್ರಸ್ತಾಪ ಎಂದರೆ ಸ್ವಂತ ವಿದ್ಯುತ್ ತಯಾರಿಸಿರುವ ಕಂಪನಿಗಳಿಗೆ ಬೆಸ್ಕಾಂ ವ್ಯಾಪ್ತಿಯಲ್ಲಿ ಪುಣೆ ಮಾದರಿಯನ್ನು ಜಾರಿಗೊಳಿಸುವುದು. ಅಂದರೆ ಅವರೇ ತಯಾರಿಸಿ (ಕಾಪ್ಟೀವ್ ವಿದ್ಯುತ್) ಬಳಸಿದರೆ ಅವರು ತಯಾರಿಸಲು ತಗಲು ವೆಚ್ಚ ಮತ್ತು ಬೆಸ್ಕಾಂ ಒದಗಿಸುವ ವಿದ್ಯುತ್ ದರದ ನಡುವಿನ ವ್ಯತ್ಯಾಸದ ಹಣವನ್ನು ಕಂಪನಿಯೇ ಭರಿಸಲಿದೆಯಂತೆ. ಅಂದರೆ ಪ್ರತಿ ಯೂನಿಟ್ ವಿದ್ಯುತ್‌ಗೆ ಸರಾಸರಿ 7 ರೂಪಾಯಿಯನ್ನು ಪರಿಹಾರದ ರೂಪದಲ್ಲಿ ಬೆಸ್ಕಾಂ ಆ ಕಂಪನಿಗಳಿಗೆ ಕೊಡಲಿದೆ. ಈ ಹಣವನ್ನು ಸಂಗ್ರಹಿಸಲು ಇತರೆ ಗ್ರಾಹಕರು ಬಳಸುವ ವಿದ್ಯುತ್ ಶುಲ್ಕವನ್ನು ಪ್ರತಿ ಯೂನಿಟ್‌ಗೆ 20 ರಿಂದ 22 ಪೈಸೆ ಹೆಚ್ಚಿಸುವುದು. ಹೇಗಿದೆ ಬಡಪಾಯಿ ಗ್ರಾಹಕರನ್ನು ಬಡಿದು, ಸಿರಿವಂತ ಕೈಗಾರಿಕೆಗಳ ಜೇಬು ತುಂಬಿಸುವ ಬಿಜೆಪಿ ಸರ್ಕಾರದ ವರಸೆ?


ವಿದ್ಯುತ್ ಪರಿಸ್ಥಿತಿಯ ವಾಸ್ತವವೇನು?

ರಾಜ್ಯದಲ್ಲಿ ದಿನಾಂಕಗಳಲ್ಲಿ ಸ್ವಲ್ಪ ವ್ಯತ್ಯಾಸವಾಗಿದ್ದರೂ ಬಹುತೇಕ ರಾಜ್ಯದ ಎಲ್ಲ ಅಣೆಕಟ್ಟೆಗಳು ಭರ್ತಿಯಾಗಿದ್ದವು. ಈಗ ನೀರು ಒಂದಷ್ಟು ಕಡಿಮೆ ಇದೆ ಎಂಬ ವರದಿಗಳಿವೆ. ಒಂದೊಮ್ಮೆ ರಾಜ್ಯದಲ್ಲಿ ವಿದ್ಯುತ್ ಕೊರತೆ ಇದ್ದರೆ ಅದನ್ನು ಸರಿದೂಗಿಸಲು ಸರ್ಕಾರ ಮಾಡಿದ್ದೇನು? ಚುನಾವಣೆ ಪ್ರಚಾರದಲ್ಲಿ ಅಭಿವೃದ್ಧಿಯ ಮೂಲಮಂತ್ರ ಜಪಿಸಿದ ಮೋದಿ ಮಾದರಿಯ ಗುಜರಾತ್ ಅಭಿವೃದ್ಧಿಯ ರಹಸ್ಯ ಎಂದರೆ 24 ತಾಸು ಉತ್ತಮ ಗುಣಮಟ್ಟದ ವಿದ್ಯುತ್ ಒದಗಿಸುವುದು! ನೋಡಿ ಅದನ್ನು ಮಾಡಿ ತೋರುತ್ತೇವೆ ಎಂದೆಲ್ಲಾ ಭಾಷಣ ಬಿಗಿದ ಮಂದಿ, ಸ್ವತಂತ್ರ್ಯ ಭಾರತದ ಕರ್ನಾಟಕದ ಇತಿಹಾಸದಲ್ಲೇ ಕಂಡಿರಿಯದಂತೆ ಘೋರ ಕತ್ತಲೆಗೆ ರಾಜ್ಯವನ್ನು ದೂಡಿದ್ದಾರೆ. 'ವಿದ್ಯುತ್ ಕ್ಷಾಮ' ರಾಜ್ಯವನ್ನು ಕಾಡುವಂತೆ ಮಾಡಿದ್ದಾರೆ. ಆ ಮೂಲಕ ವಿದ್ಯುತ್ ರಹಿತ ಅಭಿವೃದ್ಧಿಯ ಹೊಸ ಮಾದರಿಯನ್ನೇ ನಿರ್ಮಿಸಲು ಹೊರಟಿದ್ದಾರೆ.

2006-07 ಕ್ಕೆ ಹೋಲಿಸಿದಲ್ಲಿ 2007-08 ರಲ್ಲಿನ ವಿದ್ಯುತ್ ಉತ್ಪಾದನೆಯು ಶೇ.3.1 ರಷ್ಟು ಕಡಿಮೆಯಾಗಿದೆ. ಆದರೆ ಸರ್ಕಾರ ವಾದಿಸುವಂತೆ ಶೇ.30ರಷ್ಟು ಬೇಡಿಕೆ ಹೆಚ್ಚಾಗಿಲ್ಲ. ಆದರೆ ಸ್ವಲ್ಪ ಹೆಚ್ಚಾಗಿದೆ. ಏಕೆಂದರೆ ಕಳೆದ ನವೆಂಬರ್ 12 ರಂದು 104.55 ದಶಲಕ್ಷ ಯೂನಿಟ್ ವಿದ್ಯುತ್ ಬಳಕೆಯಾಗಿದ್ದರೆ ಈ ವರ್ಷ101.82 ದಶಲಕ್ಷ ಯೂನಿಟ್ ಬಳಕೆಯಾಗಿದೆ. ಕಳೆದ ವರ್ಷ ಈ ಅವಧಿಯಲ್ಲಿ ಅನಿಯಮಿತ ಲೋಡ್‌ಶೆಡ್ಡಿಂಗ್ ಇರದೆ ಇದ್ದರೂ ಬಳಕೆ ಪ್ರಮಾಣ 104.55 ದಶಲಕ್ಷವಿತ್ತು. ಈ ವರ್ಷ ಗರಿಷ್ಠ ಪ್ರಯಾಣದ ಅನಿಯಮಿತ ಲೋಡ್‌ಶೆಡ್ಡಿಂಗ್ ಜಾರಿ ಮಾಡಿದರು. 101.82 ದಶಲಕ್ಷ ಯೂನಿಟ್ ನೀಡಲಾಗಿದೆ.

(ಕೆಪಿಸಿಎಲ್ ಅಂದಾಜಿನಂತೆ 2007-08 ರ ಕರ್ನಾಟಕ ಆರ್ಥಿಕ ಸಮೀಕ್ಷೆಯಿಂದ ವಿದ್ಯುತ್

ಪುಟ 15ಕ್ಕೆ



ವಿದ್ಯುತ್ ಪೂರೈಕೆ ಅಸಮರ್ಪಕತೆ ವಿರೋಧಿಸಿ ಬೆಂಗಳೂರಿನಲ್ಲಿ ಡಿವೈಎಫ್ಐ ನ ಪ್ರತಿಭಟನೆ



ಮನೆ ಮನೆಯೂ ಕತ್ತಲೆ, ಪ್ರತಿದಿನವೂ ಕಡಿತ – ಪ್ರತಿಭಟನೆ

ರಾಜ್ಯದಲ್ಲಿ ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ದಿನದ 24 ಗಂಟೆಯೂ ವಿದ್ಯುತ್ ಸರಬರಾಜು ಹಾಗೂ ಭಾಗ್ಯಜ್ಯೋತಿ ಹೊಂದಿರುವವರಿಗೆ ಧರ್ಮಾರ್ಥ(ಉಚಿತ)ವಾಗಿ ವಿದ್ಯುತ್ ಸರಬರಾಜು ಮಾಡುವ ಭರವಸೆ ನೀಡಿರುವ ಬಿಜೆಪಿ ಪಕ್ಷವು ಅಧಿಕಾರಕ್ಕೆ ಬಂದು ಬೇಕಾಬಿಟ್ಟಿ ವಿದ್ಯುತ್ ಕಡಿತ ಮಾಡಿ ರಾಜ್ಯವನ್ನು ಕತ್ತಲೆ ರಾಜ್ಯವಾಗಿ ಮಾಡಿರುವುದನ್ನು ಹಾಗೂ ಗ್ರಾಮೀಣ ಪ್ರದೇಶದಲ್ಲಿ ದಿನಕ್ಕೆ 10 ಗಂಟೆಗಿಂತಲೂ ಹೆಚ್ಚು ಅವಧಿಗೆ ವಿದ್ಯುತ್ ಕಡಿತ ಮಾಡಿ ಕೃಷಿ ನಾಶಕ್ಕೆ ಮುಂದಾಗಿರುವುದನ್ನು ಖಂಡಿಸಿ ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ನೇತೃತ್ವದಲ್ಲಿ 23-11-2008 ರಂದು ಉಡುಪಿ ನಗರ, ಮಲ್ಪೆ ಮತ್ತು ಬ್ರಹ್ಮಾವರಗಳಲ್ಲಿ ಪ್ರತಿಭಟನೆ ನಡೆಸಲಾಯಿತು.

ಸರ್ಕಾರವು ಅಧಿಕಾರಕ್ಕೆ ಬಂದಂದಿನಿಂದ ವಿದ್ಯುತ್ ಸರಬರಾಜು ಉತ್ತಮಪಡಿಸುವುದಕ್ಕೆ ಅಗತ್ಯದ ವ್ಯವಸ್ಥೆ ಮಾಡುವ ಬದಲಾಗಿ, ಛತ್ತೀಸ್‌ಗಢ ರಾಜ್ಯದಲ್ಲಿ ಹೊಸ ವಿದ್ಯುತ್ ಉತ್ಪಾದನಾ ಸ್ಥಾವರ ಸ್ಥಾಪಿಸುವ ಬಗ್ಗೆ ಜನರಿಗೆ ಆಶ್ವಾಸನೆ ನೀಡಿದೆ. ರಾಜ್ಯದಲ್ಲಿ ಅಲ್ಲಲ್ಲಿ ಸಣ್ಣ-ಮಧ್ಯಮ ಪ್ರಮಾಣದ ಸ್ಥಾವರಗಳು ವಿದ್ಯುತ್ ಪಡೆಯಲು ಕೆಲಸ ಮಾಡುತ್ತಿಲ್ಲ. ಬದಲಾಗಿ ವಿದ್ಯುತ್ ಸಮಸ್ಯೆ ಅನಿವಾರ್ಯ, ಮುಂದಿನ 10-12 ವರ್ಷಗಳಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಳ ಮಾಡಲಾಗುವುದು. ಇತ್ಯಾದಿ ಬೊಗಳೆ ಬಿಡುತ್ತಿದೆ. ದೊಡ್ಡ ನಗರ ಹಾಗೂ ದೊಡ್ಡ ಕಾರ್ಖಾನೆಗಳಿಗೆ ನಿರಂತರ ವಿದ್ಯುತ್ ಒದಗಿಸಲಾಗುತ್ತಿದೆ. ಆದರೆ ಸಾಮಾನ್ಯ ಗೃಹ ಬಳಕೆದಾರರನ್ನು ಸಣ್ಣ ಉದ್ದಿಮೆಗಳನ್ನು, ಕೃಷಿಯನ್ನು ಕಡೆಗಣಿಸಲಾಗುತ್ತಿದೆ.

ಸರ್ಕಾರ ಇಡೀ ರಾಜ್ಯದಲ್ಲಿ ಸಮರ್ಪಕ ವಿದ್ಯುತ್ ಸರಬರಾಜಿಗೆ ಸೂಕ್ತ ಕ್ರಮ ಕೈಗೊಳ್ಳಬೇಕು. ಈಗಿನ ನಿರ್ಲಕ್ಷ್ಯ ಧೋರಣೆ ಮುಂದುವರಿದರೆ ತೀವ್ರ ಚಳುವಳಿ ನಡೆಸಲಾಗುವುದು ಎಂದು ಮನವಿಯಲ್ಲಿ ಎಚ್ಚರಿಕೆ ನೀಡಲಾಯಿತು. ಸಿಪಿಐ(ಎಂ) ಜಿಲ್ಲಾ ಸಮಿತಿ ಮುಖಂಡರಾದ ಪಿ.ವಿಶ್ವನಾಥರೈ ಪ್ರತಿಭಟನಾ ನೌಕರರನ್ನು ಉದ್ದೇಶಿಸಿ ಮಾತನಾಡಿದರು. ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಉಡುಪಿ ತಾಲ್ಲೂಕು ಸಮಿತಿ ನೇತೃತ್ವದಲ್ಲಿ

ದಿನಾಂಕ:25-11-2008 ರಂದು ಉಡುಪಿ ಮೆಸ್ಕಾಂ ಕಛೇರಿ ಮುಂದೆ ಪ್ರತಿಭಟನೆ ಸಲ್ಲಿಸಲಾಯಿತು.

ರಾಜ್ಯದಲ್ಲಿ ವಿದ್ಯುತ್ ಪರಿಸ್ಥಿತಿ ಶೋಚನೀಯವಾಗಿದ್ದು, ಸುಮಾರು 1700 ಮೆಗಾವ್ಯಾಟ್‌ನಷ್ಟು ವಿದ್ಯುತ್ ಕೊರತೆ ಅನುಭವಿಸುತ್ತಿದೆ ಎಂದು ರಾಜ್ಯ ಇಂಧನ ಸಚಿವರು ಹೇಳುತ್ತಾರೆ. ಈ ವರ್ಷ ಉತ್ತಮ ಮಳೆಯಾಗಿದ್ದು ಪ್ರಮುಖ ಜಲಾಶಯಗಳು ತುಂಬಿವೆ. ಆದರೂ ವಿದ್ಯುತ್ ಕೊರತೆ ಇದೆ ಎಂದು ವಿದ್ಯುತ್ ಕಡಿತ ಮಾಡಿ ಜನರ ಜೀವನದೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ. ವಿಧಾನಸಭಾ ಚುನಾವಣೆ ವೇಳೆ ರೈತರಿಗೆ ಪುಕ್ಕಟೆ ವಿದ್ಯುತ್, ನಿರಂತರ ಜ್ಯೋತಿ, ಭಾಗ್ಯಜ್ಯೋತಿ ಯೋಜನೆಯ ವಿಸ್ತರಣೆ ಮುಂತಾದ ಬಣ್ಣ ಬಣ್ಣದ ಆಶ್ವಾಸನೆಗಳನ್ನು ನೀಡಿ ಅಧಿಕಾರಕ್ಕೆ ಬಂದ ರಾಜ್ಯ ಸರ್ಕಾರ ಇದೀಗ ವಿದ್ಯುತ್ ಕೊರತೆಗೆ ಹಿಂದಿನ ಸರ್ಕಾರ ಮತ್ತು ಕೇಂದ್ರ ಸರ್ಕಾರ ಕಾರಣ ಎಂದು ಗೂಬೆ ಕೂರಿಸುತ್ತಾ ಕಾಲಯಾಪನೆ ಮಾಡುತ್ತಿದೆ.

ರಾಜ್ಯ ಸರ್ಕಾರವು ವಿದ್ಯುತ್ ಉತ್ಪಾದನೆಗೆ ಖಾಸಗಿ ಕಂಪನಿಗಳನ್ನು ಅವಲಂಬಿಸಿರುವುದನ್ನು ಬಿಟ್ಟು ಬಾಕಿ ಉಳಿದಿರುವ ಸರ್ಕಾರದ ಎಲ್ಲಾ ವಿದ್ಯುತ್ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಮತ್ತು ಕೇಂದ್ರ ವಿದ್ಯುತ್ ಗ್ರಿಡ್‌ನಿಂದ ಸಾಕಷ್ಟು ವಿದ್ಯುತ್ ಪಡೆಯಲು ಪ್ರಾಮಾಣಿಕ ಪ್ರಯತ್ನ ನಡೆಸಬೇಕು ಹಾಗೂ ವಿದ್ಯುತ್ ಕಳ್ಳತನ, ಸಾಗಾಣಿಕೆಯಲ್ಲಿ ಸೋರಿಕೆ ಮುಂತಾದ ಸಮಸ್ಯೆಗಳ ಪರಿಹಾರಕ್ಕೆ ಕ್ರಮಕೈಗೊಳ್ಳಬೇಕು ಎಂದು ಉಡುಪಿ ಮೆಸ್ಕಾಂ ಅಧಿಕಾರಿಯವರ ಮೂಲಕ ಮುಖ್ಯಮಂತ್ರಿಗಳಿಗೆ ಸಲ್ಲಿಸಿದ ಮನವಿಯಲ್ಲಿ ಆಗ್ರಹಿಸಲಾಗಿದೆ.

ಈ ಪ್ರತಿಭಟನೆಯಲ್ಲಿ ಸಿಪಿಐ(ಎಂ) ಉಡುಪಿ ತಾಲ್ಲೂಕು ಸಮಿತಿ ಕಾರ್ಯದರ್ಶಿ ಪಿ. ವಿಶ್ವನಾಥರೈ, ಆದಮಾರು ಶ್ರೀಪತಿ ಆಚಾರ್ಯ, ರಮೇಶ್ ಮೆಂಡನ್, ವಾದಿರಾಜ ಬುದ್ಯ, ಸಂಜೀವ ನಾಯಕ್, ಸತೀಶ ಪೂಜಾರಿ ಮೊದಲಾದವರು ನೇತೃತ್ವ ವಹಿಸಿದ್ದರು.



ಕುಂದಾಪುರದಲ್ಲಿ ಪ್ರತಿಭಟನೆ

ಕುಂದಾಪುರ

ಹೆಚ್ಚುತ್ತಿರುವ ವಿದ್ಯುತ್ ಕಡಿತ ಹಾಗೂ ಅಸಮರ್ಪಕ ವಿದ್ಯುತ್ ಪೂರೈಕೆ ವಿರುದ್ಧ ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿಯ ಕರೆಯ ಮೇರೆಗೆ ದಿನಾಂಕ: 25-11-2008ರಂದು ಕುಂದಾಪುರದಲ್ಲಿ ಪಕ್ಷದ ತಾಲ್ಲೂಕು ಸಮಿತಿಯ ನೇತೃತ್ವದಲ್ಲಿ ಶಾಸ್ತ್ರಿ ಸರ್ಕಲ್‌ನಿಂದ ಕುಂದಾಪುರದಲ್ಲಿ ಮೆರವಣಿಗೆ ಹೊರಟಿತು. ಪೇಟೆಯ ಒಂದು ಸುತ್ತು ಬಂದು ಮೆರವಣಿಗೆ ಮೆಸ್ಕಾಂ ಕಛೇರಿಯ ಎದುರು ಬಂದು ಅಲ್ಲಿ ಮತ ಪ್ರದರ್ಶನ ನಡೆಸಲಾಯಿತು.

ಸಿಪಿಐ(ಎಂ)ನ ಉಡುಪಿ ಜಿಲ್ಲಾ ಸಮಿತಿಯ ಕಾರ್ಯದರ್ಶಿಯವರಾದ ಶ್ರೀ ಕೆ.ಶಂಕರ್‌ರವರು ಅಸಂಬದ್ಧ ವಿದ್ಯುತ್ ಪೂರೈಕೆಯಿಂದಾಗಿ ರೈತರು ಬೆಳೆ ಹಾನಿ ಅನುಭವಿಸುತ್ತಿದ್ದಾರೆ. ವಿದ್ಯಾರ್ಥಿಗಳು, ವ್ಯಾಪಾರಸ್ಥರು ಹಾಗೂ ಸಾಮಾನ್ಯ ಗೃಹ ಬಳಕೆದಾರರು ತೊಂದರೆ ಅನುಭವಿಸುತ್ತಿದ್ದಾರೆ. ಯಡಿಯೂರಪ್ಪನವರು ರಾಜ್ಯಕ್ಕೆ ಅಗತ್ಯವಿರುವ ವಿದ್ಯುತ್ ಉತ್ಪಾದನೆಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಮಾತ್ರವಲ್ಲ ಅಗತ್ಯ ಹಣವನ್ನು ಒದಗಿಸಿಲ್ಲ. ವಿದ್ಯುತ್ ಕೊರತೆಯನ್ನು ನೀಗಿಸಲು ಪಕ್ಕದ ರಾಜ್ಯಗಳಿಂದ ವಿದ್ಯುತ್ ಪಡೆಯಲು ಯಶಸ್ವಿಯಾಗಲಿಲ್ಲ. ಸರ್ಕಾರ ರೈತರ ಮೇಲೆ, ಸಾಮಾನ್ಯ ಬಳಕೆದಾರರ ಮೇಲೆ ಅನಿಯಮಿತ ಲೋಡ್ ಶೆಡ್ಡಿಂಗ್ ಹೇರುವುದು ಸರಿಯಲ್ಲವೆಂದು ಹೇಳಿ, ರಾಜ್ಯಕ್ಕೆ ಅಗತ್ಯವಿರುವ ವಿದ್ಯುತ್ ಉತ್ಪಾದನೆಗೆ ಕ್ರಮ ಕೈಗೊಳ್ಳಬೇಕು ಹಾಗೂ ವಿದ್ಯುತ್ ಕಡಿತ ಹಿಂತೆಗೆದುಕೊಳ್ಳಬೇಕೆಂಬ ಮುಖ್ಯ ಬೇಡಿಕೆಗಳನ್ನು ವಿವರಿಸಿದರು. ಮನವಿಯೊಂದನ್ನು ಓದಿ, ಮೆಸ್ಕಾಂನ ಕುಂದಾಪುರ ವಿಭಾಗದ ಮುಖ್ಯ ಕಾರ್ಯನಿರ್ವಾಹಕ ಇಂಜಿನಿಯರ್ ಇವರ ಮುಖಾಂತರ ಮುಖ್ಯಮಂತ್ರಿಗೆ ಕಳುಹಿಸಲಾಗಿದೆ.

ಚಳವಳಿಯ ನೇತೃತ್ವವನ್ನು ಮಹಾಬಲ ವಡೇರ ಹೋಬಳಿ, ಯು.ದಾಸಭಂಡಾರಿ, ಹೆಚ್.ನರಸಿಂಹ, ಡಿ.ಲಕ್ಷ್ಮಣ, ರಾಜೀವ ಶೆಟ್ಟಿ, ಕುಂಭಾಶಿ ಗಣೇಶ್, ವೆಂಕಟೇಶ್ ಕೋಣಿ, ರಾಮ ಕೋಣಿ, ಅಶ್ವತ್ ಕುಮಾರ್, ನೆಲ್ಲಿ ಕಟ್ಟೆ ಲಕ್ಷ್ಮಣ ಇವರು ವಹಿಸಿದ್ದರು.

ಬೈಂದೂರಿನಲ್ಲಿ ಪ್ರತಿಭಟನೆ

ಸಿಪಿಐ(ಎಂ) ಬೈಂದೂರು ವಲಯ ಸಮಿತಿಯ ನೇತೃತ್ವದಲ್ಲಿ, ರೈತ, ಕಾರ್ಮಿಕ ಕೃಷಿ ಕೂಲಿಕಾರರು-ಬೈಂದೂರು ಪೇಟೆಯಲ್ಲಿ ಮೆರವಣಿಗೆ ಮೂಲಕ-ವಿದ್ಯುತ್ ಕಡಿತವನ್ನು ವಿರೋಧಿಸಿ ಘೋಷಣೆ ಹಾಕುತ್ತಾ ಬೈಂದೂರು ಪೇಟೆಗೆ ಸುತ್ತುವರಿದು ಬೈಂದೂರು ಮೆಸ್ಕಾಂ ಕಛೇರಿಗೆ ಮುತ್ತಿಗೆ ಹಾಕಲಾಯಿತು. ಮೆಸ್ಕಾಂ ಅಧಿಕಾರಿಯವರ ಮೂಲಕ ಮಾನ್ಯ ಮುಖ್ಯಮಂತ್ರಿಗೆ ಮನವಿ ಅರ್ಪಿಸಲಾಯಿತು.

ಸಿಪಿಐ(ಎಂ) ಮುಖಂಡರಾದ ಯು.ದಾಸ ಭಂಡಾರಿ, ವೆಂಕಟೇಶ ಕೋಣಿ, ಸಿಐಟಿಯು ಮುಂದಾಳು, ಗಣೇಶ ತೊಂಡೆಮಕ್ಕಿ, ನಾಗೇಂದ್ರ ಆಚಾರ್, ವೆಂಕಟ್ರಮಣ, ಗಜಾನನ, ಸರಸ್ವತಿ ಜಿ., ಅಕ್ಷರದಾಸೋಹ ನೌಕರರ ಸಂಘದ ಬೈಂದೂರು ವಲಯಾಧ್ಯಕ್ಷರಾದ ಶಾರದ ಬೈಂದೂರು ಇವರು ಪ್ರತಿಭಟನಾ ಮೆರವಣಿಗೆಯ ನೇತೃತ್ವ ವಹಿಸಿದ್ದರು.

ದತ್ತ ಜಯಂತಿ ಅಕ್ರಮ ಆಚರಣೆಗೆ ಅಭಯ ಹಸ್ತ?

ಪುಟ 3 ರಿಂದ

ಆಡಳಿತ ಅವಧಿಯ ಮೊದಲಿನ ಆಚರಣೆಗಳನ್ನು ಅಧ್ಯಯನ ಮಾಡಿ ವರದಿ ನೀಡಲು ಸರ್ಕಾರಕ್ಕೆ ತಿಳಿಸಿದೆ. ಅಂದರೆ 1991 ರಲ್ಲಿ ಸಂಸತ್‌ನಲ್ಲಿ ಅಂಗೀಕಾರವಾದ ಆರಾಧನಾ ಸ್ಥಳಗಳ ಕಾಯ್ದೆ ಹೇಳುವ 1947 ಆಗಸ್ಟ್ 15 ರ ಹೊತ್ತಿನಲ್ಲಿ ಯಾವ ಆಚರಣೆಗಳು ಇವೆಯೋ ಅವನ್ನೇ ಪರಿಗಣಿಸಬೇಕೆಂಬ ನಿರ್ದೇಶನವನ್ನು ರಾಜ್ಯ ಉಚ್ಚ ನ್ಯಾಯಾಲಯವು ಪರಿಗಣಿಸಿಲ್ಲ, ಹೈಕೋರ್ಟ್‌ನ ತೀರ್ಪಿನ ಮೇಲೆ ಸುಪ್ರೀಂಕೋರ್ಟ್‌ನಲ್ಲಿ ದಾವೆ ಹೂಡಲಾಗಿದ್ದು, ಹೈಕೋರ್ಟ್‌ನ ತೀರ್ಪಿಗೆ ತಡೆಯಾಜ್ಞೆಯನ್ನು ನೀಡಿದೆ. ಅಂದರೆ 1998ರ ತೀರ್ಪಿನಂತೆ 1975ರ ಹಿಂದಿನ ಆಚರಣೆಗಳಿಗಷ್ಟೆ ಸೀಮಿತವಾಗಬೇಕಾಗಿರುವುದು, ಅದನ್ನೇ ಅನುಸರಿಸುವುದು ಸರ್ಕಾರದ ಕರ್ತವ್ಯ. ಅಂದರೆ ದತ್ತ ಜಯಂತಿಯಂತಹ ಯಾವುದೇ ಹೊಸ ಆಚರಣೆಗಳಿಗೆ ಅಲ್ಲಿ ಅವಕಾಶ ನೀಡಕೂಡದು.

ನಿರ್ಬಂಧಿಸಬೇಕು

ಆದರೆ ರಾಜ್ಯ ಸರ್ಕಾರ, ಚಿಕ್ಕಮಗಳೂರು ಜಿಲ್ಲಾಡಳಿತ ಇವುಗಳನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ. ದತ್ತಜಯಂತಿ ಆಚರಣೆಗೆ ಗಿರಿಯ ಮೇಲೆ ಸ್ಥಳ ಹಾಗೂ ವ್ಯವಸ್ಥೆಗಳನ್ನು ಜಿಲ್ಲಾಡಳಿತವೇ ಮಾಡಲು ಮುಂದಾಗುತ್ತಿದೆ. ಕಳೆದ ಎರಡು ತಿಂಗಳ ಹಿಂದೆ ಇಂತಹ ವ್ಯವಸ್ಥೆಯನ್ನು 'ದತ್ತಮಾಲೆ ಅಭಿಯಾನ'ದ ಸಂದರ್ಭದಲ್ಲಿ ಮಾಡಿತ್ತು. ಆಡಳಿತದ ವಾದವೆಂದರೆ ಗುಹೆಯಿಂದ 200 ಮೀಟರ್ ದೂರದಲ್ಲಿ ಎಂಬುದು. ಆದರೆ ಇಂತಹ ಆಚರಣೆಗಳೇ ಅಲ್ಲಿರಲಿಲ್ಲ ಎಂದ ಮೇಲೆ ಅದು ಕಾನೂನು, ಪರಂಪರೆಗೆ ವಿರುದ್ಧ ಎಂಬುದನ್ನು ನಿರ್ಲಕ್ಷಿಸುತ್ತಿದೆ. ಗಿರಿಯ ಮೇಲಾಗಲಿ ಕೆಳಗಾಗಲೀ ಮತ್ತೆ ಅದಕ್ಕೆ ಅವಕಾಶ ನೀಡಬಾರದು. ಆದ್ದರಿಂದ ಇದಕ್ಕೆ ಹೊಂದಿಕೊಂಡು ರಾಜ್ಯದ ಎಲ್ಲೇ ಆಗಲಿ ದತ್ತ ಜಯಂತಿಯನ್ನು, ಶೋಭಾಯಾತ್ರೆಯನ್ನು ನಿರ್ಬಂಧಿಸಬೇಕು.

ಪ್ರತಿರೋಧ ಅಗತ್ಯ

ಹೀಗಾಗಿ ಬಿಜೆಪಿಯ ಸರ್ಕಾರದ ಅಧಿಕಾರವನ್ನು ಬಳಸಲು ಸಂಘ ಪರಿವಾರ ಸಕ್ರಿಯವಾಗಿರುವಾಗ ಹಿಂದೆಂದಿಗಿಂತಲೂ ಅತಿ ಎಚ್ಚರ, ಪ್ರಬಲ ಪ್ರತಿರೋಧ ಅತ್ಯಗತ್ಯವಾಗಿದೆ. ದೇಶದಲ್ಲಿ, ರಾಜ್ಯದಲ್ಲಿಯೂ ಕೋಮುಗಲಭೆ, ಭಯೋತ್ಪಾದನೆಯ ಆತಂಕದ ಕರಿನೆರಳು ಇರುವಾಗ ಶಾಂತಿ ಸಾಮರಸ್ಯ, ಕಾಪಾಡುವ ಹೊಣೆ ಮರೆತು ಸಾಮರಸ್ಯ ಕದಡುವಂತಹ ಸಂಘ ಪರಿವಾರದ ಅಜೆಂಡಾವನ್ನು ಜಾರಿಗೊಳಿಸಲು ಯತ್ನಿಸುತ್ತಿರುವ ಬಿಜೆಪಿ ಬಾಯಲ್ಲಿ ಮಾತ್ರ ಶಾಂತಿ, ಸೌಹಾರ್ದತೆ ನಾಶಗೊಳಿಸುವ ಭದ್ರತೆ ಹೇಳುತ್ತಿದೆ. ಈ ಹುನ್ನಾರಗಳನ್ನು ದೃಢತೆಯಿಂದ ಐಕ್ಯತೆಯಿಂದ ವಿರೋಧಿಸಬೇಕು.

ಜರಗ್ರಾಮ್ ಎಡರಂಗಕ್ಕೆ ಜಯ

ಮಿಡ್ನಾಪುರ ಜಿಲ್ಲೆಯ ಆದಿವಾಸಿಗಳೇ ಬಹುತೇಕ ಸಂಖ್ಯೆಯಲ್ಲಿರುವ ಮಿಡ್ನಾಪುರ ಜಿಲ್ಲೆಯ ಜರಗ್ರಾಮ್ ಮತ್ತು ಕೋಲ್ಕತ್ತದ ಅವಳಿ ನಗರ ಹೌರಾದಲ್ಲಿ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಎಡರಂಗ ಭಾರಿ ಅಂತರರಿಂದ ಜಯಗಳಿಸಿದೆ. ಆದರೆ ಈ ಬೆಹ್ರಾಂಪುರ ಮತ್ತು ಕೃಷ್ಣನಗರ್‌ಗಳಲ್ಲಿ ಗೆಲುವು ಸಾಧ್ಯವಾಗಿಲ್ಲ. ಬೆಹ್ರಾಂಪುರದಲ್ಲಿ ಅಧೀರ್ ಚೌಧುರಿ ಮತ್ತು ಹಣ ಮತ್ತು ಭೌತಿಕ ಶಕ್ತಿ ಬಳಕೆ ಮಾಡಿದ್ದರೆ, ಕೃಷ್ಣನಗರ್‌ನಲ್ಲಿ ಅತ್ಯಂತ ಕಡಿಮೆ ಅಂತರದಿಂದ ಸೋಲನುಭವಿಸುವಂತಾಗಿದೆ.

ಜರಗ್ರಾಮ್ ಕುರಿತು ಮಾಧ್ಯಮಗಳು ಭಾರಿ ಪ್ರಜ್ಞಾಪೂರ್ವಕವಾಗಿ ಪ್ರಚಾರದಲ್ಲಿ ತೊಡಗಿದ್ದವು. ಆದಿವಾಸಿಗಳ ನಡುವೆ ಸಿಪಿಎಂ ಇನ್ನೆಂದಿಗೂ ಇರಲು ಸಾಧ್ಯವಿಲ್ಲ ಎಂದು ಕೆಲವು ಪತ್ರಿಕೆಗಳು ಪ್ರಕಟಿಸಿದರೆ, ಆನಂದ್ ಬಜಾರ್ ಪತ್ರಿಕಾ ಮತ್ತು ಅದರ ಟಿವಿ ಸಮೂಹ ಆದಿವಾಸಿಗಳು ಎಂದಿನಿಂದಲೂ ಸಿಪಿಎಂ ಪಕ್ಷಕ್ಕೆ ವಿರುದ್ಧವಾಗಿದ್ದಾರೆ ಎಂದು ಪ್ರಚಾರ ಮಾಡಿದ್ದರು. ಆದರೆ ಈ ಪತ್ರಿಕೆಗಳು ಹೆಸರಿಸಿದ್ದ ಎಲ್ಲ ಅಭ್ಯರ್ಥಿಗಳು ಹೀನಾಯ ಸೋಲು ಅನುಭವಿಸಿದ್ದಾರೆ. 17 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಎಡರಂಗ 13 ಸ್ಥಾನಗಳನ್ನು ಗೆದುಕೊಂಡಿತು. ಈ ಹಿಂದಿನ ಚುನಾವಣೆಯಲ್ಲಿ 11 ಸ್ಥಾನಗಳನ್ನು ಪಡೆದುಕೊಂಡಿತ್ತು. ಅಂದರೆ ಕಳೆದ ಚುನಾವಣೆಗಿಂತ ಈಗ 2 ಹೆಚ್ಚಾಗಿ ಗೆಲ್ಲುವುದುಸಾಧ್ಯವಾಗಿದೆ.

'ಕೈಗಾರೀಕರಣ ಆಗಲೇಬೇಕು' ಸಿಂಗೂರು ಜನತೆ ಒತ್ತಾಯ

ಡಿಸೆಂಬರ್ 3ರ ಮುಂಜಾನೆ ಚುಮುಚುಮು ಚಳಿ. ಸಿಂಗೂರ್ ಸುತ್ತಮುತ್ತಲ ಗ್ರಾಮಗಳಲ್ಲಿನ ಸಿಪಿಎಂ ಕಾರ್ಯಕರ್ತರು ಹೋರಾಟಕ್ಕೆ ಸಿದ್ಧತೆ ನಡೆಸುತ್ತಿದ್ದರು. ಮಹಿಳೆಯರು, ವೃದ್ಧರು ಮತ್ತು ಮಕ್ಕಳು ಸಹ ಅವರಿಗೆ ಸಹಾಯವಾಗಿ ನಿಂತಿದ್ದರು. ಟಾಟಾ ಸಣ್ಣ ಕಾರು ಯೋಜನೆ ಅಲ್ಲಿಂದ ಕಾಲ್ಕಿತ್ತ ನಂತರ ಕೈಗಾರಿಕೀಕರಣ ಬೇಕೆಂದು ಒತ್ತಾಯಿಸಿ ಬೃಹತ್ ರ್‍ಯಾಲಿ ನಡೆಸಲು ಈ ಸಿದ್ಧತೆ ನಡೆಸಲಾಗುತ್ತಿತ್ತು. ಪ್ರತಿಯೊಬ್ಬರೂ ಕೆಂಬಾವುಟಗಳನ್ನು ಎಚ್ಚರಿಕೆಯಿಂದ ಕೋಲುಗಳಿಗೆ ಸಿಕ್ಕಿಸಿ ಭದ್ರವಾಗಿ ಸುತ್ತಿ ಬಗಲಲ್ಲಿ ಇಟ್ಟುಕೊಳ್ಳುತ್ತಿದ್ದರು. ತಮ್ಮ ಬೇಡಿಕೆಗಳನ್ನು ಒಳಗೊಂಡಿರುವ ಸಾವಿರಾರು ಘೋಷಣಾ ಫಲಕಗಳನ್ನು ಬರೆಯಲಾಗಿತ್ತು.

ರ್‍ಯಾಲಿಯಲ್ಲಿ ಪಾಲ್ಗೊಳ್ಳಲು ತಯಾರಿ ನಡೆಸುತ್ತಿದ್ದವರನ್ನು ಪ್ರಶ್ನಿಸಿದರೆ ಹಿಂದಿನ ದಿನ ತೃಣಮೂಲ ಕಾಂಗ್ರೆಸ್ ಕೈಗಾರಿಕೀರಣ ಬೇಡ ಎಂದು ನಡೆಸಿದ ರ್‍ಯಾಲಿಗೆ ವಿರುದ್ಧವಾಗಿ ನಡೆಸುತ್ತಿದ್ದೇವೆ ಎಂದು ಪ್ರಾಜ್ಞಾವಂತರಂತೆ ಪ್ರತಿಕ್ರಿಯಿಸುತ್ತಿದ್ದರು. ಕಳೆದ ಪಂಚಾಯಿತಿ ಚುನಾವಣೆಗಳಲ್ಲಿ ತೃಣ ಮೂಲ ಕಾಂಗ್ರೆಸ್ ಪರ ಮತ ಚಲಾಯಿಸಿದರೂ ಈ ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ಟಿಎಂಸಿಗೆ ಮತ ನೀಡಿದ್ದಕ್ಕೆ ಪಾಶ್ಚಾತ್ತಾಪ ಪಟ್ಟಿದ್ದರು. ಟಿಎಂಸಿಗೆ ನಮ್ಮ ಜೀವನ ಹಸನಾಗುವುದು ಇಷ್ಟವಿಲ್ಲ. ಹಾಗಾಗಿಯೇ ಕೈಗಾರಿಕೀಕರಣ ವಿರೋಧಿಸುತ್ತಿದ್ದಾರೆ ಎಂದು ಆಕ್ರೋಶದಿಂದ ಪ್ರತಿಕ್ರಿಯಿಸುತ್ತಿದ್ದರು. ಕೈಗಾರಿಕೀಕರಣ ಕೈಗೊಳ್ಳಲೇಬೇಕು ಎಂದು ಜನತೆ ರ್‍ಯಾಲಿಗೆ ಮುಂದಾಗಿದ್ದರು.

ಸಿಐಟಿಯು, ಎಐಕೆಎಸ್, ಎಐಡಿಡಬ್ಲ್ಯುಎ ಮತ್ತು ಎಸ್‌ಎಫ್‌ಐ ಹಾಗೂ ಡಿವೈಎಫ್‌ಐಗಳು ಈ ಬೃಹತ್ ರ್‍ಯಾಲಿಗೆ ನೇತೃತ್ವ ನೀಡಿದ್ದವು. 30 ಸಾವಿರಕ್ಕೂ ಹೆಚ್ಚು ಮಂದಿ ರ್‍ಯಾಲಿಯಲ್ಲಿ ಪಾಲ್ಗೊಂಡು ಕೈಗಾರಿಕೀಕರಣ ವಿರೋಧಿಗಳಿಗೆ ಎಚ್ಚರಿಕೆ ನೀಡಿದ್ದರು. ತೃಣ ಮೂಲ ಕಾಂಗ್ರೆಸ್‌ನ ಸ್ವಾರ್ಥ ರಾಜಕಾರಣವನ್ನು ಬುಡಮೇಲು ಮಾಡಬೇಕೆಂದು ಜನತೆಗೆ ಕರೆ ನೀಡಿದರು.

ಸಿಪಿಎಂ ಕೇಂದ್ರ ಸಮಿತಿ ಸದಸ್ಯರಾದ ಬಿನೊಯ್ ಕೊನಾರ್ ಮತ್ತು ಶ್ಯಾಮಲಿ ಗುಪ್ತಾ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸುಭಾಶ್ ಚಕ್ರವರ್ತಿ, ಸಿಐಟಿಯು ಮುಖಂಡರಾದ ಕಾಳಿ ಘೋಶ್, ಎಐಕೆಎಸ್‌ನ ಸಮರ್ ಬೋರಾ, ಎಐಡಿಡಬ್ಲ್ಯುಎನ ಮಿನತಿ ಘೋಶ್, ಡಿವೈಎಫ್‌ಐನ ಅವಾಸ್ ರಾಯ್ ಚೌಧರಿ ಮತ್ತು ಎಸ್‌ಎಫ್‌ಐನ ದ್ರುವಜ್ಯೋತಿ ಚಕ್ರವರ್ತಿ ಬಹಿರಂಗ ಸಭೆಯನ್ನು ಕುರಿತು ಮಾತನಾಡಿದರು.

ಮತ್ತೊಂದು 'ನಂದಿಗ್ರಾಮ' !?

ಪಶ್ಚಿಮ ಬಂಗಾಳದ ಮಿಡ್ನಾಪುರ ಜಿಲ್ಲೆಯ ಲಾಲ್‌ಗರ್ ಅನ್ನು ರಾಜ್ಯದ ಇತರ ಭಾಗದಿಂದ ಸಂಪೂರ್ಣವಾಗಿ ಪ್ರತ್ಯೇಕಿಸಿ ಮತ್ತೊಂದು 'ನಂದಿಗ್ರಾಮ' ಮಾಡುವ ಸಂಚು ಕಂಡು ಬಂದಿದೆ. ಮುಖ್ಯಮಂತ್ರಿಗಳ ಮೇಲಿನ ಬಾಂಬ್ ದಾಳಿಯ ಬಗೆಗೆ ತನಿಖೆ ಮಾಡಬಾರದೆಂದು ಜನರನ್ನು ಪ್ರಚೋದಿಸಿದ್ದಾರೆ ಇಲ್ಲಿನ ಮಾವೋವಾದಿ ನಕ್ಸಲೀಯರು. ಅವರಿಗೆ ತೃಣಮೂಲ ಹಾಗೂ ಕಾಂಗ್ರೆಸ್, ಜಾರ್ಖಂಡ್ ಪ್ರತ್ಯೇಕತಾವಾದಿಗಳ ಬೆಂಬಲ ಬೇರೆ. ಇದಕ್ಕೆ ಜನರ ಪ್ರತಿರೋಧವು ಕಂಡುಬಂದಿದೆ.



ಇದ್ದದ್ದು ಇದ್ದಾಂಗ

"ನಮ್ಮ ಸರ್ಕಾರ ಪ್ರತಿ ದಿನವೂ ಭಯೋತ್ಪಾದನೆಯ ವಿರುದ್ಧ ಹೋರಾಡುತ್ತಿದೆ. ಭಾರತ ಮತ್ತು ಇತರ ಪ್ರಜಾಪ್ರಭುತ್ವ ದೇಶಗಳೊಂದಿಗಿನ ಬಾಂಧವ್ಯ ವೃದ್ಧಿಯ ಬಗ್ಗೆ ವಿಶ್ವಾಸ ಹೊಂದಿದೆ. ಬೆದರಿಕೆ ಕೇವಲ ಮುಂಬೈ ಅಥವಾ ಭಾರತಕ್ಕೆ ಮಾತ್ರ ಇಲ್ಲ ಪಾಕಿಸ್ತಾನ, ಅಫ್ಘಾನಿಸ್ತಾನದ ಸೇರಿದಂತೆ ಇಡೀ ದಕ್ಷಿಣ ಏಷ್ಯಾ ಪ್ರಾಂತ್ಯಕ್ಕೆ ಇದೆ. ನಾವೆಲ್ಲರೂ ಈ ಯುದ್ಧದ ಸಂತ್ರಸ್ತರೇ ಆಗಿದ್ದೇವೆ. ಭಾರತೀಯರ ನೋವನ್ನು ನಾನು ಕಂಡಿದ್ದೇನೆ. ಅದಕ್ಕಾಗಿ ವಿಷಾದಿಸುತ್ತೇನೆ. ನನ್ನ ಮಕ್ಕಳನ್ನು ಕಂಡಾಗಲೆಲ್ಲ ಅವರ ಕಣ್ಣುಗಳಲ್ಲೂ ಇಂತಹದ್ದೇ ನೋವು ನನಗೆ ಕಾಣಿಸುತ್ತದೆ. ನನ್ನ ಪತ್ನಿಯ ಕಾರಣದಿಂದ ಈ ನೋವು ನನ್ನೊಳಗೇ ಉಳಿದುಹೋಗಿದೆ.

ಮುಂಬೈ ಮೇಲೆ ನಡೆದ ಉಗ್ರರ ದಾಳಿಯ ಕುರಿತು ಭಾರತ ಮತ್ತು ಪಾಕ್ ಜಂಟಿ ತನಿಖೆ ನಡೆಸಬೇಕು."

-ಆಸೀಫ್ ಅಲಿ ಜರ್ದಾರಿ
ಪಾಕಿಸ್ತಾನದ ಅಧ್ಯಕ್ಷ

"ಉಗ್ರರ ದಾಳಿಯಿಂದ ತತ್ತರಿಸಿರುವ ಮುಂಬೈ ಜನರಿಗೆ ಸ್ಥೈರ್ಯ ಹಾಗೂ ಬೆಂಬಲ ನೀಡಲು ಹೆಗಲ ಮೇಲೆ ಕಪ್ಪು ರಿಬ್ಬನ್ ಧರಿಸಿ ಬಕ್ರೀದ್ ಆಚರಿಸಬೇಕು. ಎಲ್ಲ ಇಮಾಮರು ಮತ್ತು ಮುಫ್ತಿಗಳು ಭಯೋತ್ಪಾದನೆ ಹಾಗೂ ಮುಂಬೈಯಲ್ಲಿ ನಡೆದ ಯಹೂದಿಗಳ ಕಗ್ಗೊಲೆಯನ್ನು ಖಂಡಿಸಬೇಕು. ಎಲ್ಲ ಮಸೀದಿಗಳು ಹಾಗೂ ಮದರಸಾಗಳ ಧಾರ್ಮಿಕ ನಾಯಕರು ಈ ವಾರದ ಶುಕ್ರವಾರದ ಪ್ರಾರ್ಥನೆಯಲ್ಲಿ ತಾವು ಎಲ್ಲ ರೀತಿಯ ಉಗ್ರಗಾಮಿ ಚಟುವಟಿಕೆಗಳನ್ನು ಖಂಡಿಸುವುದಾಗಿ ಹೇಳಬೇಕು ಮತ್ತು ಮುಂಬೈನಲ್ಲಿ ನಡೆದ ನರಮೇಧವನ್ನು ಖಂಡಿಸಬೇಕು."

ಹಜರತ್ ಮೌಲಾನಾ ಜಮೀಲ್ ಅಹ್ಮದ್ ಇಯಾಸಿ
ಎಐಒಐಎಂ ಅಧ್ಯಕ್ಷ

"ಮುಂಬೈ ಮೇಲೆ ಉಗ್ರರು ನಡೆಸಿದ ದಾಳಿ ಘಟನೆಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ವಿಶ್ವಸಂಸ್ಥೆ ಭಾರತಕ್ಕೆ ಸಂಪೂರ್ಣ ಸಹಕಾರ ನೀಡಲಾಗುವುದು."

-ಬಾನ್ ಕಿ ಮೂನ್
ವಿಶ್ವ ಸಂಸ್ಥೆ ಕಾರ್ಯದರ್ಶಿ





ಆ ಮೂರು ಭಯಾನಕ ದಿನಗಳ ನಂತರ ಮುಂದೇನು?

ಸೀತಾರಾಂ ಯೆಚೂರಿ

ಭಾರತವು ಪಾಕಿಸ್ತಾನದ ಮೇಲೆ ಯುದ್ಧ ಸಾರಬೇಕೆಂದು ಕೆಲವು ಶಕ್ತಿಗಳು ಪ್ರತಿಪಾದಿಸುತ್ತಾ ಪ್ರಚೋದನಾಕಾರಿ ಪ್ರಚಾರ ಕೈಗೊಂಡಿದ್ದಾರೆ. ಭಯೋತ್ಪಾದಕ ದಾಳಿಯ ವಿರುದ್ಧ ಭಾರತಕ್ಕೆ ರಾಜ್ಯತಾಂತ್ರಿಕ ಮಾರ್ಗಗಳು ಯಾವುವು ಇಲ್ಲವೇ? ಪಾಕಿಸ್ತಾನದ ಮೇಲೆ ದಾಳಿ, ಯುದ್ಧ ಎಂದರೆ ಅದರ ಪರಿಣಾಮ ಏನಾದೀತು? ಇದರಿಂದ ಖುಷಿಗೊಳ್ಳುವವರು ಯಾರು?

ನವಂಬರ್ 26 ರಿಂದ 28. ಮೂರು ಭಯಾನಕ ದಿನಗಳು. ದಕ್ಷಿಣ ಮುಂಬೈಯಲ್ಲಿ 183 ಮಂದಿ ಬಲಿಯಾದರು. 294 ಮಂದಿ ಆಸ್ಪತ್ರೆಗಳಲ್ಲಿ ಇದ್ದಾರೆ. ಹತ್ತು ಮಂದಿ ಪಾಕಿಸ್ತಾನದಿಂದ ಸಮುದ್ರ ಮಾರ್ಗವಾಗಿ ಬಂದರು ಎಂಬುದು ಸ್ಪಷ್ಟವಾಗಿದೆ. ನಮ್ಮ ಗುಪ್ತಚರ ವ್ಯವಸ್ಥೆ ಶೋಚನೀಯವಾಗಿ ವಿಫಲವಾಗಿದೆ ಎಂಬುದು ಸ್ವಯಂವೇದ್ಯ. ನಮ್ಮಲ್ಲಿ ಹೇಳಿಕೊಳ್ಳಬಹುದಾದ ತಟರಕ್ಷಕ ವ್ಯವಸ್ಥೆ ಇಲ್ಲ ಎಂಬುದೂ ಬಯಲಾಗಿದೆ. ರಾಷ್ಟ್ರೀಯ ಭದ್ರತಾ ರಕ್ಷಕ(ಎನ್‌ಎಸ್‌ಜಿ)ರಿಗೆ ಹೆಚ್ಚಾಗಿ ವಿಐಪಿಗಳನ್ನು ಕಾಯುವ ಕೆಲಸವನ್ನೇ ಕೊಡಲಾಗುತ್ತಿದೆ ಎಂಬುದೂ ಜನಗಳನ್ನು ಸಿಟ್ಟಿಗೆಬ್ಬಿಸಿದೆ.

ಮುಂದೇನು?

ಕೇಂದ್ರ ಗ್ರಹಮಂತ್ರಿಗಳು ಬದಲಾಗಿದ್ದಾರೆ. ಬಹಳ ತಡವಾಗಿ ಅವರ ಅಸಮರ್ಥತೆಯನ್ನು ಒಪ್ಪಿಕೊಳ್ಳಲಾಗಿದೆ. ಮಹಾರಾಷ್ಟ್ರದ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಕೂಡಾ ಬದಲಾಗಿದ್ದಾರೆ. ಆದರೆ ಇದರಿಂದಲೇ ವ್ಯವಸ್ಥೆಯಲ್ಲಿರುವ ಸಮಸ್ಯೆಗೆ ಪರಿಹಾರ ಸಾಧ್ಯವೇ? ಕಾರ್ಪೊರೇಟ್ ಮಾಧ್ಯಮಗಳು, ಅದರಲ್ಲೂ ಟಿವಿ ವಾಹಿನಿಗಳು ತಲೆಬುಡವಿಲ್ಲದ ರಾಜಕಾರಣಿ-ವಿರೋಧಿ ಪ್ರಚಾರ ನಡೆಸುತ್ತಿದ್ದಾರೆ. ಈ ಬಾರಿ ಭಯೋತ್ಪಾದನೆ ತಮ್ಮನ್ನೂ ತಟ್ಟಿರುವುದರಿಂದ ಕುಪಿತಗೊಂಡಿರುವ ಮೇಲ್ಮಧ್ಯಮ ವರ್ಗದ ಜನಗಳು ಅವರ ಜತೆಗೂಡಿದ್ದಾರೆ. ಆದರೆ ವಾಸ್ತವವಾಗಿ ಈ ಪ್ರಚಾರ ವ್ಯವಸ್ಥೆಯಲ್ಲಿನ ದೋಷಗಳನ್ನು ಮುಚ್ಚಿಟ್ಟು ಒಂದು ಪ್ರಜಾಪ್ರಭುತ್ವ-ವಿರೋಧಿ, ಸರ್ವಾಧಿಕಾರಶಾಹಿ ವಾತಾವರಣ ಸೃಷ್ಟಿಸಬಹುದು ಎಂಬುದನ್ನು ಅವರು ಅರಿಯಲಾರದವರಾಗಿದ್ದಾರೆ. ಅವರೆಲ್ಲಾ 'ಅಮೆರಿಕಾ ಮಾದರಿ'ಯಲ್ಲಿ ಪ್ರತಿಕ್ರಿಯಿಸಬೇಕು ಎಂದು ಬಯಸುತ್ತಿದ್ದಾರೆ. ಬಲಪಂಥೀಯರು, ಅದರಲ್ಲೂ ಬಿಜೆಪಿ ಮುಖಂಡರೂ ಇದಕ್ಕೆ ದನಿಗೂಡಿಸಿದ್ದಾರೆ. ನೋಡಿ, ಆಮೇಲೆ ಅಮೆರಿಕಾದ ಮೇಲೆ ಭಯೋತ್ಪಾದಕ ಧಾಳಿ ನಡೆಯಲೇ ಇಲ್ಲ ಎನ್ನುತ್ತಿದ್ದಾರೆ.

ಈ ಅಮೆರಿಕಾ ಮಾದರಿಯಾದರೂ ಏನು? ನ್ಯೂಯಾರ್ಕಿನ ವರ್ಲ್ಡ್ ಟ್ರೇಡ್ ಸೆಂಟರ್ ಮೇಲೆ, ಪೆಂಟಗನ್ ಮೇಲೆ ಭಯೋತ್ಪಾದಕ ಧಾಳಿಗೆ ಪ್ರತಿಕ್ರಿಯೆಯಾಗಿ ಬುಶ್ ಆರಂಭಿಸಿದ 'ಭಯೋತ್ಪಾದನೆಯ ವಿರುದ್ಧ ಯುದ್ಧ' ಸಾಧಿಸಿದ್ದೇನು? ಭಯೋತ್ಪಾದನೆ ನಡೆಸಿದವರು ಸೌದಿ ಅರೇಬಿಯಾದವರು, ಇಜಿಪ್ಟಿನವರು. ಆದರೆ ಅಮೆರಿಕನ್ ಪಡೆಗಳು ಆ ದೇಶಗಳನ್ನು ಮುಟ್ಟಲಿಲ್ಲ. ಏಕೆಂದರೆ ಅಲ್ಲಿಯ ಆಳರಸರು ಅವರ ನಿಕಟ ಮಿತ್ರರು! ಅವರು ಸದೆಬಡಿದದ್ದು ಇರಾಕಿನ ಹತ್ತು ಲಕ್ಷ ಮುಗ್ಧ ನಾಗರಿಕರನ್ನು. ವಾಸ್ತವವಾಗಿ ಭಯೋತ್ಪಾದನೆಯನ್ನು ಅಡಗಿಸುವ ಬದಲು ಈ ಅಮೆರಿಕಾ ಮಾದರಿ ಅದನ್ನು ಇರಾಕ್ ಸೇರಿದಂತೆ ವಿಶ್ವದಲ್ಲೆಲ್ಲಾ ಹರಡಿತು!

ಅಮೆರಿಕಾದಲ್ಲಿನ ಸನ್ನಿವೇಶವನ್ನು ಭಾರತದೊಳಗಿನ ಸನ್ನಿವೇಶದೊಡನೆ ಹೋಲಿಸಲು ಸಾಧ್ಯವಿಲ್ಲ. ಭಾರತದಲ್ಲಿ ಭಯೋತ್ಪಾದನೆ ಕೃತ್ಯಗಳಲ್ಲಿ ತೊಡಗಿರುವವರು ಒಂದೆಡೆ ಮುಸ್ಲಿಂ ಸಮುದಾಯದಲ್ಲಿನ ಉಗ್ರಗಾಮಿ ಗಳು. ಇನ್ನೊಂದೆಡೆ ಹಿಂದುತ್ವ ಉಗ್ರಗಾಮಿಗಳು ಅದೇ ನಾಣ್ಯದ ಇನ್ನೊಂದು ಮುಖ ಎಂಬುದು ಮಾಲೇಗಾಂವ್ ತನಿಖೆಗಳಿಂದ ಈಗ ಬೆಳಕಿಗೆ ಬಂದಿದೆ. ಅಲ್ಲದೆ ಅತ್ತ ಉಲ್ಫಾದಂತಹ ಸಂಘಟನೆಗಳ ಭಯೋತ್ಪಾದನೆಯೂ ಇದೆ. ಆದ್ದರಿಂದ ಬುಶ್ ಕಾರ್ಯಾಚರಣೆ ನಮಗೆ ಮಾದರಿಯಾಗುವುದು ಸಾಧ್ಯವಿಲ್ಲ.

> ಭಯೋತ್ಪಾದನೆಯನ್ನು ಎದುರಿಸಲು ವಿಶ್ವಸಂಸ್ಥೆಯ ಭದ್ರತಾಸಮಿತಿಯ ನಿರ್ಣಯ ಸಂಖ್ಯೆ 1373ನ್ನು ಬಳಸಬೇಕು, ಇದರ ಜೊತೆಗೆ ನಮ್ಮ ಗುಪ್ತಚರ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಉತ್ತಮ ಪಡಿಸಬೇಕು, ಎಲ್ಲಕ್ಕೂ ಮಿಗಿಲಾಗಿ, ಭಯೋತ್ಪಾದನೆಯ ಸಮಸ್ಯೆಯನ್ನು ಕಳೆದ ಎರಡು ದಶಕಗಳ ಕೋಮುವಾದೀಕರಣದ ಹಿಡುಗಿನಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ ಎಂಬುದನ್ನು ಮನಗಾಣಬೇಕಿದೆ.

ಕೆಲವರು ಬಯಸುವಂತೆ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಬುಶ್ ಮಾದರಿಯಲ್ಲಿ ಮಿಲಿಟರಿ ಕಾರ್ಯಾಚರಣೆಗಿಳಿದರೆ ಏನಾಗಬಹುದು? ಇದರರ್ಥ ಭಾರತ ಮತ್ತು ಪಾಕಿಸ್ತಾನದ ನಡುವೆ ಯುದ್ಧ. ಲಷ್ಕರ-ಎ-ತಯ್ಯಬಾದಂತಹ

ಪುಟ 13ಕ್ಕೆ

ಮುಂಬೈ ದಾಳಿಗಳು ಮತ್ತು ಬಿಜೆಪಿ

ಮತ್ತದೇ ವಿಭಜನೆಯ ಆಟ ಮತ್ತು ಚುನಾವಣಾ ನೋಟ

ಮುಂಬೈ ಭಯೋತ್ಪಾದನಾ ದಾಳಿಯ ವಿರುದ್ಧ ಕಾರ್ಯಾಚರಣೆ ಮುಗಿದ ನಂತರ ನವೆಂಬರ್ 30ರಂದು ಪ್ರಧಾನ ಮಂತ್ರಿಗಳು ಒಂದು ಸರ್ವಪಕ್ಷ ಸಭೆಯನ್ನು ಕರೆದರು. ಸಭೆ ಒಂದು ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿ ಈ ದಾಳಿಯನ್ನು ಖಂಡಿಸಿ ಭಯೋತ್ಪಾದನೆಯನ್ನು ಐಕ್ಯತೆಯಿಂದ ಸೋಲಿಸಬೇಕೆಂದು ನಿರ್ಧರಿಸಿತು. ಬಿಜೆಪಿ ಅಧ್ಯಕ್ಷರು ಮತ್ತು ಪ್ರಧಾನಿ ಪಟ್ಟದ ಅಭ್ಯರ್ಥಿ ಇಬ್ಬರೂ ಇದರಲ್ಲಿ ಭಾಗವಹಿಸಲಿಲ್ಲ. ಅಷ್ಟೇ ಅಲ್ಲ, ಭಾಗವಹಿಸಿದ ಬಿಜೆಪಿ ಮುಖಂಡರು ಈ ಸರ್ವಸಮ್ಮತ ನಿರ್ಣಯದ ಭಾಗವಾಗಲು ಕೂಡಾ ಇಷ್ಟಪಡಲಿಲ್ಲ. ಅಂದರೆ ಮತ್ತೆ ತನ್ನ ನಿಜ ಬಣ್ಣವನ್ನು ಅದು ತೋರಿದೆ, ಈ ದಾಳಿಗಳನ್ನು ಬಳಸಿ ಕೋಮು ವಿಭಜನೆಯನ್ನು ಇನ್ನಷ್ಟು ಆಳಗೊಳಿಸುವ ಮತ್ತು ಅದರಿಂದ ಚುನಾವಣಾ ಲಾಭ ಗಿಟ್ಟಿಸುವ ಪ್ರವೃತ್ತಿಯನ್ನು ಪ್ರದರ್ಶಿಸಿದೆ.

ಕೆಲವೇ ದಿನಗಳ ಹಿಂದೆ ಅಡ್ವಾಣಿಯವರು ಭಯೋತ್ಪಾದನೆಗೆ ಧರ್ಮವಿಲ್ಲ ಎಂದಿದ್ದರು. ಮಾಲೇಗಾಂವ್ ಸ್ಫೋಟಗಳ ಹಿಂದೆ ಹಿಂದುತ್ವ ಸಂಘಟನೆಗಳ ಕೈವಾಡ ಇತ್ತೆಂಬುದು ಮಹಾರಾಷ್ಟ್ರದ ಎಟಿಎಸ್ ತನಿಖೆಗಳಿಂದ ಬೆಳಕಿಗೆ ಬಂದಾಗ ಮುಜುಗರವಾಗಿ ಈ ಮಾತು ಹೇಳಿದರು ಎಂದೀಗ ಸ್ಪಷ್ಟವಾಗುತ್ತದೆ. ವಾಸ್ತವವಾಗಿ ಮುಂಬೈ ದಾಳಿಗಳ ಮೂಲಕ ಭಯೋತ್ಪಾದಕರು ದೇಶದ ದೃಷ್ಟಿಯನ್ನು ಹಿಂದುತ್ವ ಶಕ್ತಿಗಳ ಕೈವಾಡದಿಂದ ಬೇರೆಡೆಗೆ ಸೆಳೆದು ಕೋಮುಧ್ರುವೀಕರಣದತ್ತ ತಿರುಗಿಸಲು ಕೋಮುವಾದಿಗಳಿಗೆ ನೆರವಾಗಿದ್ದಾರೆ.

ಭಯೋತ್ಪಾದಕರು ಭಾರತದ ಸಾಮಾಜಿಕ ಹಂದರವನ್ನು ಅಸ್ಥಿರಗೊಳಿಸಲು ಪ್ರಯತ್ನಿಸುವುದು ಇಂತಹ ಕೋಮು ವಿಭಜನೆಯ ಮೂಲಕವೇ. ಕೋಮುವಾದ ಮತ್ತು ಭಯೋತ್ಪಾದನೆ ಜನರನ್ನು ಬಲಿಗೊಟ್ಟು ಒಂದನ್ನೊಂದು ಪೋಷಿಸುತ್ತವೆ ಎಂಬುದನ್ನು ಇಲ್ಲಿ ನಾವು ಮತ್ತೊಮ್ಮೆ ಕಾಣುತ್ತಿದ್ದೇವೆ.

ಸರ್ವಪಕ್ಷ ಸಭೆಯಲ್ಲಿ ಬಿಜೆಪಿ ಮಂದಿ ಎಟಿಎಸ್ ಮಾಲೆಗಾಂವ್ ಸ್ಫೋಟದ ತನಿಖೆಯಲ್ಲಿ ಹಿಂದುತ್ವ ಸಂಘಟನೆಗಳ ಬೆನ್ನು ಹತ್ತುವುದರಲ್ಲಿ ಮಗ್ನವಾಗಿದ್ದುದೇ (ಯುಪಿಎ ಕುಮ್ಮಕ್ಕಿನಿಂದ) ಈ ಮುಂಬೈ ದಾಳಿಗಳಿಗೆ ಹೊಣೆ ಎಂದು ಆಪಾದಿಸುವ ಮಟ್ಟಕ್ಕೂ ಹೋದರು! ಕೇಸರಿ ಪಡೆಗಳ ವೆಬ್ ತಾಣಗಳಲ್ಲಿ ಅದುವರೆಗೆ ಎಟಿಎಸ್ ಮುಖ್ಯಸ್ಥ ಹೇಮಂತ ಕರ್ಕರೆಯವರ ಮೇಲೆ ದೂಷಣೆಗಳ, ಬೈಗುಳಗಳ ಸುರಿಮಳೆಯೇ ಆಗುತ್ತಿತ್ತು. ಆತ ಮತ್ತು ಆತನ ಸಹಾಯಕರು ಈ ಮುಂಬೈ ದಾಳಿಗಳಲ್ಲಿ ಕೊಲ್ಲಲ್ಪಟ್ಟ ಕೂಡಲೇ ಅವನ್ನೆಲ್ಲಾ ತೆಗೆದು ಹಾಕಲಾಯಿತು! ಮಧ್ಯಪ್ರದೇಶ ಮತ್ತು ಛತ್ತಿಸ್‌ಗಡದ ಚುನಾವಣೆಗಳಲ್ಲಿ 'ಹಿಂದೂ ಧಾರ್ಮಿಕ ವ್ಯಕ್ತಿಗಳಿಗೆ ಕರ್ಕರೆಯ ದುಷ್ಟ ಕಿರುಕುಳ'ವೇ ಅವರ ಮುಖ್ಯ ಪ್ರಚಾರ ವಸ್ತುವಾಗಿತ್ತು. ನಂತರ

ಪುಟ 13ಕ್ಕೆ

ಮಾಲೆಗಾಂವ್ ಮತ್ತಿತರ ಸ್ಫೋಟಗಳ ಆರೋಪಿಗಳಾದ ಪ್ರಗ್ಯಾಸಿಂಗ್, ಪುರೋಹಿತ್ ಇತರರ ಬೆಂಬಲವಾಗಿ ಹಿಂದೂ 'ಸಾಧುಸಂತ'ರೆನಿಸಿಕೊಂಡವರ ಪ್ರದರ್ಶನ



ಮುಂಬೈ ಮೇಲೆ ಅಮಾನವೀಯ ಫಿದಾಯಿ ದಾಳಿಗಳ ಹಿಂದಿನ ರಾಜಕೀಯ ಮತ್ತು ಅದನ್ನು ಪೋಷಿಸುತ್ತಿರುವ ಸಾಮ್ರಾಜ್ಯಶಾಹಿ ಹಾಗೂ ಕೋಮುವಾದಿ ರಾಜಕೀಯವನ್ನು ಇವೆಲ್ಲವುಗಳಿಗೆ ದೇಶದ ದುಡಿಯುವ ಜನಗಳು ಹೇಗೆ ಪ್ರತಿಕ್ರಿಯಿಸಬೇಕು ಎಂಬುದನ್ನು ವಿ.ಜೆ.ಕೆ. ನಾಯರ್, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು ಇಲ್ಲಿ ವಿಶ್ಲೇಷಿಸುತ್ತಾರೆ.

ಮುಂಬೈ : ಭಯೋತ್ಪಾದಕ ದಾಳಿಗಳ ಹಿಂದೆ - ಮುಂದೆ

ಳೆದ ವಾರ ಮುಂಬೈ ಮೇಲೆ ನಡೆದ ಮಾನವೀಯ ದಾಳಿಗೆ ಇಡೀ ನಮ್ಮ ದೇಶದ ಮತ್ತು ಗತ್ತಿನ ಜನಗಳು ದೊಡ್ಡ ರೀತಿಯಲ್ಲಿ ಸ್ಪಂದಿಸಿದರು. ದಾಳಿಯು ಯೋಜನೆ ಮತ್ತು ಅದನ್ನು ರ್ಯರೂಪಕ್ಕೆ ತರುವಲ್ಲಿ ಕಾಣ ಬಂದಿರುವ ಖರತೆ ಎಂಟು ವರ್ಷಗಳ ಹಿಂದೆ ಸಪ್ಟೆಂಬರ್ 1 ರಂದು ನ್ಯೂಯಾರ್ಕಿನ ವರ್ಲ್ಡ್ ಟ್ರೇಡ್ ಂಟರ್(ವಿಶ್ವ ವ್ಯಾಪಾರ ಕೇಂದ್ರ) ಮೇಲಿನ ಾಳಿಯನ್ನು ನೆನಪಿಸಿದೆ. ಆದ್ದರಿಂದಲೇ ಇರಬೇಕು, ವಿ ವಾಹಿನಿಗಳು ಇದನ್ನು ಭಾರತದ 9/11 ಂದವು. ಅಲ್ಲದೆ ಈ ಎರಡು ದಾಳಿಗಳನ್ನೂ ಡೆಸಿದವರು ಅವನ್ನು ಇಸ್ಲಾಮಿನ ಹೆಸರಿನಲ್ಲಿ ಡೆಸಿದರು.

ನಿಜ, ಇವೆರಡರ ನಡುವೆ ಕೆಲವು ೋಲಿಕೆಗಳಿವೆ. ಆದರೆ ನ್ಯೂಯಾರ್ಕ್ ಇರಲಿ, ುಂಬೈ ಇರಲಿ ಅಥವಾ ಮಾಲೇಗಾಂವ್ ಇರಲಿ, ರ್ಮದ ಹೆಸರಿನಲ್ಲಿ ನಡೆಸುವ ಇಂತಹ ಯೋತ್ಪಾದಕ ದಾಳಿಗಳ ವಿಧಾನವನ್ನು ಮತ್ತು ದರ ಹಿಂದಿರುವ ರಾಜಕೀಯವನ್ನು ವಿರೋಧಿಸುವ ರ್ಮಿಕ ವರ್ಗ ಮತ್ತು ಜನತೆ ಇವುಗಳಲ್ಲಿ ್ಯತ್ಯಾಸವನ್ನು ಕಾಣಬೇಕು ಹಾಗೂ ಅದಕ್ಕೆ ಕವಾಗಿ ಸ್ಪಂದಿಸಬೇಕು.

9/11 ಮತ್ತು 26-28/11 ಅಂದರೆ ್ಯೂಯಾರ್ಕ್(ವರ್ಲ್ಡ್ ಟ್ರೇಡ್ ಸೆಂಟರ್) ಮತ್ತು ುಂಬೈ(ತಾಜ್, ಟ್ರೈಡಂಟ್ ಹೊಟೇಲುಗಳು, ರಿಮನ್ ಹೌಸ್) ನಡುವಿನ ಹೋಲಿಕೆಯೆಂದರೆ ಡಾಳಿಗಳನ್ನು ಯೋಜಿಸಿದವರು ಇಸ್ಲಾಮೀ ನಿಸಿಕೊಂಡ ಭಯೋತ್ಪಾದಕರು, ಅದನ್ನು ನಡೆಸಿದ್ದು ಣಕಾಸು ರಾಜಧಾನಿಗಳ ಮೇಲೆ, ಆರ್ಥಿಕ ಮೃದ್ಧಿಯ ಕೇಂದ್ರಗಳ ಮೇಲೆ. ಎರಡೂ ಗುಪ್ತ ಾರ್ಯಾಚರಣೆಗಳು, ದಾಂಯಿಗಳು ಅಂದರೆ ಧರ್ಮದ ಸರಿನಲ್ಲಿ ಪ್ರಾಣ ತೆರಲು ದ್ಧರಿರುವವರು ನೆರವೇರಿಸಿದ ತ್ಯಗಳು.

ಅಮೆರಿಕಾ ಮತ್ತು ಇತರ ಸಾಮ್ರಾಜ್ಯಶಾಹಿ ದೇಶಗಳು ಯುದ್ಧಗಳನ್ನು ಬೇರೆ ದೇಶಗಳನ್ನು ಅಡಿಯಾಳಾಗಿಸಲು ಬಳಸಿದರೆ, ಭಯೋತ್ಪಾದನೆ ಮುಗ್ಧ ಜನಗಳನ್ನು, ನಮ್ಮಂತಹ ದೇಶಗಳನ್ನು ಪೀಡಿಸುವ ಯುದ್ಧದ ಸ್ವರೂಪ ಪಡೆದಿದೆ.

ಭಿನ್ನ ಅಂಶಗಳೆಂದರೆ, ್ಯೂಯಾರ್ಕಿನ ದಾಳಿಗಳ ತೆಯಲ್ಲಿಯೆ ಅಮೆರಿಕಾದ ಸೈನಿಕ ೇಂದ್ರ ಪೆಂಟಗನ್ ಮೇಲೆ, ಷ್ಟ್ರಾಧ್ಯಕ್ಷರ ಶ್ವೇತ ಭವನದ ಮೇಲೆ ಹೈಜಾಕ್ ಮಾಡಿದ ಾಗರಿಕ ವಿಮಾನಗಳನ್ನು ಳಸಲಾಯಿತು; ಮುಂಬೈ ಾಳಿಗಳನ್ನು ಉಚ್ಚ ತರಬೇತಿ ಹೊಂದಿದ ಭಯೋತ್ಪಾದಕರು ಸ್ಪಾ ರೀತಿಗಳಲ್ಲೂ ನಡೆಸಿದರು, ಸಮುದ್ರ ಮಾರ್ಗ ಬಳಸಿ, ಗುಪ್ತವಾಗಿ ಬಂದಿಳಿದು, ವಿವಿಧ ಕೇಂದ್ರಗಳಿಗೆ ನುಗ್ಗಿ 48 ಗಂಟೆಗಳಿಗೂ ಹೆಚ್ಚು ಕಾಲ ಕಾರ್ಯಾಚರಣೆ ನಡೆಸಿದರು. ಅಮೆರಿಕಾದ 9/11 ರಲ್ಲಿ ಭಯೋತ್ಪಾದಕರು ದಾಳಿಗೆ ಶ್ವೇತ ಭವನ, ಪೆಂಟಗನ್ ನಂತಹ ಆಳ್ವಿಕೆಯ ಕೇಂದ್ರಗಳನ್ನು ಆರಿಸಿಕೊಂಡರು. ಆದರೆ ಮುಂಬೈ ಮೇಲೆರಗಿದ ಭಯೋತ್ಪಾದಕರಲ್ಲಿ ಅಂತಹ ಆಯ್ಕೆ ಕಾಣಲಿಲ್ಲ. ಆದರೆ ಅವರಲ್ಲೂ ಒಂದು ರೀತಿಯ ಆಯ್ಕೆಯಿದ್ದಂತೆ ಕಾಣುತ್ತದೆ. ನರಿಮನ್ ಹೌಸ್ ಯೆಹೂದ್ಯರು ವಾಸವಾಗಿದ್ದ ಸ್ಥಳ ಹಾಗೂ ಮಾಧ್ಯಮಗಳ ವರದಿಗಳ ಪ್ರಕಾರ ಅವರು ಅಮೆರಿಕನ್ನರನ್ನು/ ಬ್ರಿಟಿಶರನ್ನು ಬಿಡಲಿಲ್ಲ.





ಸ್ಪಷ್ಟ ವ್ಯತ್ಯಾಸ

ಆದರೆ ಸ್ಪಷ್ಟವಾಗಿ ಎದ್ದು ಕಾಣುವ ವ್ಯತ್ಯಾಸವೆಂದರೆ 9/11 ಒಂದು ಸಾಮ್ರಾಜ್ಯಶಾಹಿ ಶಕ್ತಿಯ, ತನ್ನ ದೇಶದ ಯಾವುದೇ ಸ್ಥಳದಲ್ಲಿ ಇಂತಹ ದಾಳಿ ಸಾಧ್ಯ ಎಂದು ಸರ್ವಥಾ ಊಹಿಸಿಯೂ ಇರದ ಒಂದು ಶಕ್ತಿಯ ವಿರುದ್ಧ ನಡೆಸಿದ ದಾಳಿಯಾಗಿದ್ದರೆ, ಮುಂಬೈಯದ್ದು ಜಾತ್ಯಾತೀತರೆಂಬ ಪ್ರಶಂಸೆ ಪಡೆದಿರುವ, ಆದರೆ ಅಲ್ಲಲ್ಲಿ ಕೋಮುವಾದದ ಮತ್ತು ಧಾರ್ಮಿಕ ಅಸಹಿಷ್ಣುತೆಯ ದೌರ್ಬಲ್ಯವನ್ನು ತೋರುತ್ತಿರುವ ಒಂದು ದೇಶದ ವಿರುದ್ಧ, ಜನತೆಯ ವಿರುದ್ಧ ನಡೆಸಿರುವ ದಾಳಿ. ಅಮೆರಿಕನ್ ಸರಕಾರ ಜಗತ್ತಿನ ಆಳರಸರಾಗಬೇಕೆಂದು ಬಯಸುತ್ತಿರುವಂತದ್ದು ಮತ್ತು ಆ ರೀತಿ ವರ್ತಿಸುತ್ತಲೂ ಇದೆ. ಈ ಪ್ರಕ್ರಿಯೆಯಲ್ಲಿ ಅದು ಮಧ್ಯಪೂರ್ವ ದೇಶಗಳ ಜನಗಳ ವಿರುದ್ಧ ವರ್ತಿಸುತ್ತಿದೆ. ಈ ಜನ ಇಸ್ಲಾಮ್ ಧರ್ಮಾವಲಂಬಿಗಳು. ಭಾರತದಲ್ಲಿ, ಕೋಮುವಾದಿಗಳು ಅಧಿಕಾರದಲ್ಲಿದ್ದಾಗಲೂ, ಹೊರಗಿದ್ದಾಗಲೂ ತಮ್ಮದೇ ದೇಶದ ಜನಗಳ ಮೇಲೆ ದಾಳಿ ನಡೆಸುವವರು- ಮಸೀದಿಗಳನ್ನು ಮತ್ತು ಇತರ ಪೂಜಾಸ್ಥಳಗಳನ್ನು ಧ್ವಂಸ ಮಾಡಿ, ಕೋಮುಗಲಭೆಗಳನ್ನು ಸೃಷ್ಟಿಸಿ, ಅಲ್ಪಸಂಖ್ಯಾತರ ವಿರುದ್ಧ, ಮೊದಲಿಗೆ ಮುಸ್ಲಿಮರು, ಈಗ ಕ್ರೈಸ್ತರ ವಿರುದ್ಧವೂ ಹಿಂಸಾಕಾಂಡಗಳನ್ನು ನಡೆಸಿ ದಾಳಿ ಮಾಡುವವರು. ಮುಂಬೈ ದಾಳಿ ಬಾಬ್ರಿ ಮಸೀದಿ ಧ್ವಂಸ, ಗುಜರಾತ್ ಹಿಂಸಾಕಾಂಡ, ಜಮ್ಮು, ಕಂಧಮಲ್ ಇತ್ಯಾದಿಗಳಿಗೆ ಪ್ರತಿಕ್ರಿಯೆಯಾಗಿ ನಡೆದಿರುವ ಭಯೋತ್ಪಾದಕ ಚಟುವಟಿಕೆಗಳ ಮುಂದುವರಿಕೆ.

ಯುದ್ಧ ಎಂದರೆ ಪರಸ್ಪರ ವಿರೋಧಿಯಾಗಿರುವ ದೇಶಗಳು ನಡೆಸುವ ರಾಜಕೀಯ. ಗೆರಿಲ್ಲಾ ಯುದ್ಧಗಳು ಪೀಡನೆಗಳಿಗೊಳಗಾದ ಜನ ನಡೆಸುವಂತವುಗಳು. ಉದಾಹರಣೆಗೆ ಎಪ್ಪತ್ತರ ದಶಕದಲ್ಲಿ ವಿಯೆಟ್ನಾಂ ನಂತಹ ಆಕ್ರಮಣಕ್ಕೊಳಗಾದ ದೇಶಗಳಲ್ಲಿ ನಡೆಸಿದ ಯುದ್ಧಗಳು. ಜಿಹಾದಿ ರಾಜಕೀಯ ಒಂದು ಪೀಡನೆಗೊಳಗಾದ ಧರ್ಮ ಅವಲಂಬಿಸುವ ಒಂದು ಗುಪ್ತ ಕಾರ್ಯಾಚರಣೆ. ಆದರೆ ಇದನ್ನು ಸಾಮ್ರಾಜ್ಯಶಾಹಿ ಶಕ್ತಿಗಳೂ ಬಳಸಿವೆ. ಅಫಘಾನಿಸ್ತಾನದಲ್ಲಿ ತಾಲಿಬಾನ್ ಅನ್ನು ಸೃಷ್ಟಿಸಿದ್ದು ಅಮೇರಿಕಾವೇ-ರಶ್ಯಾದ ಅತಿಕ್ರಮಣವನ್ನು ವಿರೋಧಿಸುವ ಹೆಸರಿನಲ್ಲಿ. ಈಗ ಜಿಹಾದಿ ರಾಜಕೀಯ ಅಮೆರಿಕಾದ ವಿರುದ್ಧವಷ್ಟೇ ಅಲ್ಲ, ಇಸ್ರೇಲಿನಿಂದ ಆರಂಭಿಸಿ, ಇರಾಕ್, ಅಫಘಾನಿಸ್ತಾನ ಮತ್ತು ನಮ್ಮ ನೆರೆಯ ಪಾಕಿಸ್ತಾನದ ವರೆಗೆ ಅಮೆರಿಕಾದ ಕೈಗೊಂಬೆ ಆಳರಸರ ವಿರುದ್ಧ ಕೂಡ.

ಪಾಕಿಸ್ತಾನವನ್ನು ಶಸ್ತ್ರಾಸ್ತ್ರಗಳಿಂದ ಸಜ್ಜುಗೊಳಿಸಿದವರು, ಅಲ್ಲಿನ ಐಎಸ್ಐ (ಗುಪ್ತಚರ ಪಡೆ)ಯನ್ನು ರಚಿಸುವಲ್ಲಿ, ಕಾಶ್ಮೀರಿಗಳ ಆಕಾಂಕ್ಷೆಗಳ ಹೆಸರಿನಲ್ಲಿ ಭಾರತದಲ್ಲಿ ಗುಪ್ತ ಕಾರ್ಯಾಚರಣೆಗಳನ್ನು ನಡೆಸುವಲ್ಲಿ ನೆರವಾದವರು ಇದೇ ಅಮೆರಿಕನ್ ಮತ್ತು ಇತರ ಸಾಮ್ರಾಜ್ಯಶಾಹೀ ಶಕ್ತಿಗಳು.

ಜಿಹಾದಿ ಮತ್ತು ಕೋಮುವಾದಿ ರಾಜಕೀಯ

ಆದರೆ ಒಂದೊಮ್ಮೆ ಅಮೆರಿಕವೇ ಪ್ರೋತ್ಸಾಹಿಸಿದ ಜಿಹಾದಿ ರಾಜಕೀಯ ಈಗ ಅದೇ ಅಮೆರಿಕಾದ 'ಭಯೋತ್ಪಾದನೆಯ ವಿರುದ್ಧ ಸಮರ'ದಲ್ಲಿ ಅದರ ಬದ್ಧ ವೈರಿಯಾಗಿದೆ. ಆದರೆ 9/11 ಸಂಭವಿಸಿದ ಸಂದರ್ಭದಲ್ಲಿ ಅಕ್ಟೋಬರ್ 2000ದಲ್ಲೇ ನಾವು ಹೇಳಿದಂತೆ, ಭಯೋತ್ಪಾದನೆಯ ಮೇಲೆ ಸಮರ ಕಾರ್ಯಸಾಧ್ಯವಲ್ಲ. ಈಗ ಎಂಟು ವರ್ಷಗಳ ನಂತರ ಒಂದಂತೂ ಸ್ಪಷ್ಟವಾಗಿದೆ- ಅಮೆರಿಕಾ ಮತ್ತು ಇತರ ಸಾಮ್ರಾಜ್ಯಶಾಹಿ ದೇಶಗಳು ಯುದ್ಧಗಳನ್ನು ಬೇರೆ ದೇಶಗಳನ್ನು ಅಡಿಯಾಳಾಗಿಸಲು ಬಳಸಿದರೆ, ಭಯೋತ್ಪಾದನೆ ಮುಗ್ಧ ಜನಗಳನ್ನು, ನಮ್ಮಂತಹ ದೇಶಗಳನ್ನು ಪೀಡಿಸುವ ಯುದ್ಧದ ಸ್ವರೂಪ ಪಡೆದಿದೆ. ಜಿಹಾದಿಗಳು ಬ್ರಿಟಿಶ್ ಮತ್ತು ಅಮೆರಿಕನ್ ಹಿತಾಸಕ್ತಿಗಳ ಮೇಲೆ ದಾಳಿ ನಡೆಸಲು ಕಾರಣವನ್ನು ಆ ಸರಕಾರಗಳು ಅಭಿವೃದ್ಧಿ ಹೊಂದದ ದೇಶಗಳು ಮತ್ತು ಜನಗಳ ಬಗ್ಗೆ ಹೊಂದಿರುವ ನಿಲುವಿನಲ್ಲಿ ಕಾಣಬಹುದು. ಆದರೆ ಭಾರತೀಯ ಜನಗಳನ್ನು ಪೀಡಿಸುವ ಅವರ ಕೃತ್ಯಗಳಿಗೆ ಕಾರಣ ಭಾರತ ಸರಕಾರದ ನಿಲುವಿನಲ್ಲಿಲ್ಲ. ಅದು ಕೋಮುವಾದಿ ರಾಜಕೀಯವನ್ನು ಬಳಸಿ ಅಧಿಕಾರ ಗಿಟ್ಟಿಸಲು ಪ್ರಯತ್ನಿಸುತ್ತಿರುವ ಒಂದು ಪಕ್ಷ ಅನುಸರಿಸುತ್ತಿರುವ ಕೋಮುವಾದಿ ರಾಜಕೀಯದ ವಿರುದ್ದ ಎಂಬುದು ಸ್ಪಷ್ಟ.


ಮುಂಬೈ ದಾಳಿಗಳಲ್ಲೇ ಮುಂಬೈ ಪೋಲಿಸ್ ಪಡೆಯ ಭಯೋತ್ಪಾದನಾ-ವಿರೋಧಿ ತಂಡದ ಮೂವರು ಅತ್ಯುತಷ್ಟ ಅಧಿಕಾರಿಗಳನ್ನು ನವಂಬರ್ 26ರ ರಾತ್ರಿಯೇ ಕಾಮಾ ಆಸ್ಪತೆಯ ಬಳಿ ಗುಂಡಿಟ್ಟು ಕೊಲ್ಲಲಾಯಿತು. ಹಿಂದೂ ಭಯೋತ್ಪಾದಕರನ್ನೂ ಬಿಡದ ಅಧಿಕಾರಿಗಳು ಇವರು. ಯಾವುದೇ ಧರ್ಮದ ಬೇಧವಿಲ್ಲದೆ ಭಯೋತ್ಪಾದಕರ ಬೆನ್ನು ಹತ್ತಿದ್ದ ಈ ಅಧಿಕಾರಿಗಳ ವಿರುದ್ಧ, ಹಿಂದುತ್ವ ಭಯೋತ್ಪಾದಕರನ್ನು ಶಿಕ್ಷಿಸುವುದರ ವಿರುದ್ಧ ಹಿಂದುತ್ವ ಸಂಘಟನೆಗಳು ಡಿಸೆಂಬರ್ 1 ರಂದು ಮುಂಬೈ ಬಂದ್‌ಗೆ ಕರೆ ನೀಡಿದ್ದವು.

ಮುಂಬೈ ದಾಳಿಗಳಲ್ಲೇ ಮುಂಬೈ ಪೋಲಿಸ್ ಪಡೆಯ ಭಯೋತ್ಪಾದನಾ- ವಿರೋಧಿ ತಂಡದ ಮೂವರು ಅತ್ಯುತಷ್ಟ ಅಧಿಕಾರಿಗಳನ್ನು ನವಂಬರ್ 26ರ ರಾತ್ರಿಯೇ ಕಾಮಾ ಆಸ್ಪತೆಯ ಬಳಿ ಗುಂಡಿಟ್ಟು ಕೊಲ್ಲಲಾಯಿತು. ಹಿಂದೂ ಭಯೋತ್ಪಾದಕರನ್ನೂ ಬಿಡದ ಅಧಿಕಾರಿಗಳು ಇವರು. ಯಾವುದೇ ಧರ್ಮದ ಬೇಧವಿಲ್ಲದೆ ಭಯೋತ್ಪಾದಕರ ಬೆನ್ನು ಹತ್ತಿದ್ದ ಈ ಅಧಿಕಾರಿಗಳ ವಿರುದ್ಧ, ಹಿಂದುತ್ವ ಭಯೋತ್ಪಾದಕರನ್ನು ಶಿಕ್ಷಿಸುವುದರ ವಿರುದ್ಧ ಹಿಂದುತ್ವ ಸಂಘಟನೆಗಳು ಡಿಸೆಂಬರ್ 1 ರಂದು ಮುಂಬೈ ಬಂದ್‌ಗೆ ಕರೆ ನೀಡಿದ್ದವು. ಈಗ ಆ ಬಂದ್

ಪುಟ 13 ಕ್ಕೆ

ಸಕಲೇಶಪುರದಲ್ಲಿ : ಮುಂಬೈ ಭಯೋತ್ಪಾದಕ ದಾಳಿ ಖಂಡಿಸಿ ಮುಸ್ಲಿಂ ಸಂಘಟನೆಗಳಿಂದ ಬೃಹತ್ ಪ್ರತಿಭಟನೆ





ಒರಟು ಕಲ್ಲನ್ನು ನೋಡ ನೋಡುತ್ತಲೇ ಅರಳಿಸಿ ಆಕಾರಗೊಳಿಸುವ ಅವರ ನೈಪುಣ್ಯಕ್ಕೆ ಬೆರಗಾಗುತ್ತಿದ್ದೆ. ಎಲ್ಲರ ಪಡಸಾಲೆಯಲ್ಲಿ ಇವರು ಚಿಂದಗೊಳಿಸಿ ಪ್ರತಿಷ್ಠಾಪಿಸಿದ್ದ ಬೀಸಾಕಲ್ಲು. ಕಾಳು ಬೇಳೆ ಒಡೆಯಲು ಸಣ್ಣ ಬೀಸಾಕಲ್ಲು. ಅಡಿಗೆ ಮನೆಯಲ್ಲಿ ಹೂರಣ ರುಬ್ಬಲು. ಕಳವಿ ಬೇಳೆ ಥಳಿಸಲು ದೊಡ್ಡ ಒಳ್ಳು ಹೀಗೆ ಬಹು ಪ್ರಯೋಜನಕಾರಿ ನಾನಾ ನಮೂನೆಯ ವಸ್ತುಗಳು.

ರೈಲು ಹಳಿಯ ಆ ಪಕ್ಕ 'ಅಬಲೆ'ಯರು

ಪುಣೆಗೆ ಹೊರಡುವ ಟ್ರೇನು ಬರೋಬ್ಬರಿ ನಿಗದಿಸಿದ ಸಮಯಕ್ಕೆ ಬಂದು ನಿಂತಿತು. ಜನರಲ್ ಡಬ್ಬಿಗಳು ಭರ್ತಿಯಾಗಿದ್ದವು. ಅಕ್ಕಂದಿರು ಮತ್ತು ಭಾವನನ್ನು ಬೀಳ್ಕೊಟ್ಟು ಕೈ ಬೀಸಿದೆವು. ಪುಟ್ಟ ಮೊಮ್ಮಗಳು 'ಚಿನ್ನಾ' ಅಚ್ಚರಿಯ ಅನುಭವಕ್ಕೆ ಪಕ್ಕಾಗಿ ಬೆರಗಿನ ಮುದ್ದೆಯಾಗಿದ್ದಳು. ಏನು ಹೇಳೀದರೂ' ಹೂಂ ಅವ್ವಾ..'ಎನ್ನುತ್ತಿದ್ದಳು. ರಾಶಿಗಟ್ಟಲೇ ಜನ ಪ್ರತಿಬೋಗಿಯ ಒಡಲಿಗೆ ಜಾರಿದಳು. ಟ್ರೇನು ಸಿಳ್ಳೆ ಹಾಕುತ ಚಲಿಸತೊಡಗಿತು. ಹಳಿ ದಾಟಿ ಈಚೆಗೆ ಬಂದೆವು.

ಕಲ್ಲುಗಳನ್ನು ಸೀಳುತ್ತಿದ್ದರು

ದೂರದಲ್ಲಿ ಮೂವರು ಹೆಂಗಸರು ಕಚ್ಚಿಕಟ್ಟಿಕೊಂಡು ದೊಡ್ಡ ದೊಡ್ಡ ಕಲ್ಲುಗಳನ್ನು ಸೀಳುತ್ತಿದ್ದರು. ಎರಡೂ ಕೈಗಳೆತ್ತಿ ಹತೋಡಿಯಿಂದ ಮಜಬೂತು ಕಲ್ಲಿನ ಮೇಲೆ ಗುರಿಯಿಟ್ಟು ಬೀಸಿ ಬೀಸಿ ಕುಟ್ಟುತ್ತಿದ್ದರು. ಎರಡು ಇಲ್ಲವೇ ಮೂರನೇಯ ಏಟಿಗೆ ಗಟ್ಟಿಯಾದ ಕಲ್ಲು ಹೋಳಾಗಿ ಉರುಳುತ್ತಿತ್ತು. ಹೆಂಗಸರ ವಯಸ್ಸು 40 ರಿಂದ 45ರವರೆಗಿರಬಹುದು. ನಾನು ಅವರ ಕಾಯಕವನ್ನು ಅವಲೋಕಿಸುತ ದೂರದಲ್ಲಿ ಸುಮ್ಮನೆ ನಿಂತುಕೊಂಡೆ. ಅವರು ತಮ್ಮ ಪಾಡಿಗೆ ತಾವು ಕಲ್ಲು ಒಡೆಯುವ ಪ್ರಕ್ರಿಯೆಯಲ್ಲಿ ಮಗ್ನರಾಗಿದ್ದರು. ದೊಡ್ಡ ಕಲ್ಲುಗಳು ಭರ-ಭರನೇ ಸೀಳಿ ಸಣ್ಣದಾಗಬಾರದೇ ಎಂಬಂತೆ ಅವರು ತಮ್ಮ ಕೆಲಸ ತೀವ್ರಗೊಳಿಸುತ್ತಿದ್ದರು. 'ಕಾಯಕದಲಿ ನಿರತನಾದಡೆ ಲಿಂಗ ಪೂಜೆಯಾದರೂ ಮರೆಯಬೇಕು. ಗುರುವಿನ ಹಂಗೂ ಹರಿಯಬೇಕು..' ವಚನವು ಹೆಂಗಸರ ಕೈಯಲ್ಲಿ ಜೀವ ತಳೆದಿತ್ತು. ಅವರಿಗೆ ಆ ಕಲ್ಲುಗಳೂ ಒಡೆದು ಮುಗಿಯಬೇಕಷ್ಟೆ. ಸುತ್ತ-ಮುತ್ತಲಿನ ಚಟುವಟಿಕೆಗಳು ಅವರ ಮೇಲೆ ಯಾವ ಪರಿಣಾಮವೂ ಬೀರುತ್ತಿರಲಿಲ್ಲ.

ಅವರು ನೋಡಬೇಕು

ಹೆಂಗಸರೆಂದರೆ ಅಬಲೆಯರು, ಭಾರ ಎತ್ತುವುದಿಲ್ಲ. ಎಂದೆಲ್ಲ ವಾದಿಸುವವರು ಒಂದು ಸಾರಿ ಈ ಹೆಂಗಸರ ಕೆಲಸ ನೋಡಬೇಕು. ಎಂಥ ಕಠಿಣ ಕೆಲಸ ಎಂಥ ಅಪಾಯದ ಕೆಲಸವೂ ಹೇಗೆ ಚಕ ಚಕನೇ ಮಾಡಿ ಮುಗಿಸುತಿರುವವರು?! ಬೀಳುವ ಏಟು ಅದು ತಪ್ಪಬಾರದು. ಹಾಕಿದ ಏಟಿಗೆ ಚೂರುಗಳನ್ನು ಸಿಡಿಸುತ ಕಲ್ಲು ಹೋಳಾಗುತ್ತದೆ. ಚೂಪಾದ ಚೂರುಗಳು ಎಲ್ಲಾದರೂ ಹಾಕಿ ಚುಚ್ಚಬಹುದು. ಕಣ್ಣಿಗೂ ಹಾರಿ ಬಿಡಬಹುದು. ನಾಜೂಕು ಕಣ್ಣು. ದೃಷ್ಟಿಯೇ ಹೋದರೆ..? ನಾನು ಅವರ ಒಟ್ಟೂ ಪೋಷಾಕಿನತ್ತ ದಿಟ್ಟಿ ಹರಿಸಿದೆ. ಕಾಟನ್ ಮಿಕ್ಸ್ ಸಿಂಥೆಟಿಕ್ ಸೀರೆ. ಕೈಗಳಿಗೆ ಗಾಜಿನ ಬಳೆ. ಹಣೆಗೆ ಕಾಸಿನಗಲ ಕುಂಕುಮ. ಕುತ್ತಿಗೆಗೊಂದು ಸಣ್ಣ ಸೈಜಿನ ಕರಿಮಣಿ ತಾಳಿ. ಕಣ್ಣಿಗೆ ಕನ್ನಡಕ ಇಲ್ಲ. ಸೆರಗು ನಡುಬಳಿಸಿ ಬಿಗಿಗೊಳಿಸಿ ಸೊಂಟಕ್ಕೆ ಸಿಕ್ಕಿಸಿದ್ದರು. ಬಿಗಿದ ಕಚ್ಚೆಯ ಸೀರೆ. ಗಟ್ಟಿಯಾದ ರಟ್ಟೆಗಳು. ವೇಗದ ಗತಿಗೆ ಲಯಬದ್ಧವಾಗಿ ಚಲಿಸುವ ಭಾರದ ಹತೋಡಿ.

ಢಾಳು ಬಣ್ಣದ ಕುಪ್ಪಸ

ಢಾಳು ಬಣ್ಣದ ಕುಪ್ಪಸದ ಮೇಲೆ ನನ್ನ ದಿಟ್ಟಿ ನೆಟ್ಟಿತು.ನಾನು ಚಿಕ್ಕವಳಿದ್ದಾಗ ಖಾರ ಕುಟ್ಟುವ ಒಳ್ಳು, ಕಲ್ಲಬತ್ತಿ ಮಾಡಿಕೊಡಲು ಕತ್ತೆಯ ಮೇಲೆ ದೊಡ್ಡ ಕಲ್ಲುಗಳನ್ನು ಹೇರಿಕೊಂಡು ಬರುತ್ತಿದ್ದರು. ಕೆಲವೊಮ್ಮೆ ಬೀಸಾಕಲ್ಲು ಸವೆದರೆ 'ಮುಳ್ಳಾಡಿಸಿ' ಕೊಡುತ್ತಿದ್ದರು. ಆಗೆಲ್ಲ ಹೆಂಗಸರು ಕುಪ್ಪಸ ಹಾಕುತ್ತಿರಲೇ ಇಲ್ಲ. ಗಾಳಿ-ಬಿಸಿಲಿಗೆ ಒಡ್ಡಿಕೊಂಡ ಬತ್ತಲೆ ಮೈ, ಜೋತುಬಿದ್ದ ಎದೆಗಳು, ಕಲ್ಲಿನಂತಾದ ಅಂಗೈ ಪಾದಗಳು, ನನ್ನೊಳಗೆ ಪ್ರಶ್ನೆ ತಳಮಳ, ಕುತೂಹಲ ಹುಟ್ಟಿಸಿದ್ದವು. ಒರಟು ಕಲ್ಲನ್ನು ನೋಡ ನೋಡುತ್ತಲೇ ಅರಳಿಸಿ ಆಕಾರಗೊಳಿಸುವ ಅವರ ನೈಪುಣ್ಯಕ್ಕೆ ಬೆರಗಾಗುತ್ತಿದ್ದೆ. ಎಲ್ಲರ ಪಡಸಾಲೆಯಲ್ಲಿ ಇವರು ಚಿಂದಗೊಳಿಸಿ ಪ್ರತಿಷ್ಠಾಪಿಸಿದ್ದ ಬೀಸಾಕಲ್ಲು. ಕಾಳು ಬೇಳೆ ಒಡೆಯಲು ಸಣ್ಣ ಬೀಸಾಕಲ್ಲು. ಅಡಿಗೆ ಮನೆಯಲ್ಲಿ ಹೂರಣ ರುಬ್ಬಲು. ಕಳವಿ ಬೇಳೆ ಥಳಿಸಲು ದೊಡ್ಡ ಒಳ್ಳು ಹೀಗೆ ಬಹು ಪ್ರಯೋಜನಕಾರಿ ನಾನಾ ನಮೂನೆಯ ವಸ್ತುಗಳು. ಅಷ್ಟೇ ಯಾಕೆ? ಮನೆಯ ಗೋಡೆ, ನೆಲವೆಲ್ಲ ರಕ್ಷಣಾತ್ಮಕವಾಗಿ ಮೈಮೆತ್ತಿ ನಿಲ್ಲಲು ಇವರೇ ಕಾರಣರಲ್ಲವೇ..?

ತಂತಾನೇ ಉದ್ಭವವಾಗಲಿಲ್ಲ

ಗೆಳತಿ ಮೀನಾಕ್ಷಿ ಭಾಷಣದಲ್ಲಿ ಹೇಳುತ್ತಿರುವುದು ನೆನಪಿಗೆ ಬಂದಿತು. 'ನಿಮ್ಮಗುಡಿಯೊಳಗಿನ ದೇವರ ಮೂರ್ತಿಗಳೆಲ್ಲ ತಂತಾನೇ ಉದ್ಭವವಾಗಲಿಲ್ಲ ಅಥವಾ ಆಕಾಶದಿಂದ ಉದರಲಿಲ್ಲ. ದುಡಿಯುವ ಕಾರ್ಮಿಕರು ತಮ್ಮ ಪಾದಗಳ ನಡುವಿಗೆ ಕಲ್ಲಿಟ್ಟುಕೊಂಡು ಛಾಣಾದಿಂದ ಕೆತ್ತಿ ಕೆತ್ತಿ ಕಣ್ಣು-ಮೂಗು-ಬಾಯಿ ಮಾಡಿ ಆಕಾರಗೊಳಿಸಿದ ಮ್ಯಾಲ, ಅದಕ್ಕೆ ಹೆಸರಿಟ್ಟು ಗರ್ಭ ಗುಡ್ಯಾಗ ಇಟ್ಟು 'ಓಂಭೂರ್‌ಭೂರ್ ಭೂರ್ವಸ್ವ...' ಅಂತ ಮಂತ್ರ ಹೇಳಿ, ಕಲ್ಲಿನ ತಲಿ ಮ್ಯಾಲ ಹಾಲು-ತುಪ್ಪ ಸುರುವಿ ಪವಿತ್ರ ದೇವ್ರಿಗೆ ಮುಟ್ಟಬ್ಯಾಡ್ರಿ ಅಂದು ಖರೆ ಮೂರ್ತಿ ಮಾಡಿದವ್ರಿಗಿ ಗುಡಿ ಹೊರಗಿಟ್ರೇ.. ಬರೇ ಮಂತ್ರ ಹೇಳವ್ರು ದೊಡ್ಡವ್ರಾದ್ರಿ. ಈ ಬಹಿರಂಗ ಮೋಸ ಎಲ್ಲಿತನಾ...?' ಹೌದು ಎಲ್ಲಿತನಾ ಈ ಬಡತನ ಮತ್ತು ಅಪಮಾನ?

ಮೊಬೈಲಿನ ಕ್ಯಾಮರಾ ಕ್ಲಿಕ್ಕಿಸಿದೆ. ಬೆವರು ಗಟ್ಟಿದ ಹಣೆ ಒರೆಸಿಕೊಂಡು ಹತೋಡಿ ಕೆಳಗಿಟ್ಟು ಕಲ್ಲುಗಳನ್ನು ಉರುಳಿಸುವಾಗ ನಮಗೆ ನೋಡಿದರು. ಈಗ ಮಾತಾಡಿಸಬಹುದೆನಿಸಿತು. ಎಲ್ಲಿಂದ ಸುರು ಮಾಡುವುದು...? "ಎಲ್ಲಿಂದ ಬಂದೀರಿ ಅವ್ವಾ"? "ಶಾಬಜಾರಿಂದ..". ಅಂದಳು ಒಬ್ಬಾಕೆ. "ಪೂರಾ ಕಲ್ಲಿನ ರಾಶಿ ಇವತ್ತೇ ಒಡಿತಿರೇನು" ಇನ್ನೊಬ್ಬಾಕೆ ತುಸು ಅಸಮಾಧಾನ ವ್ಯಕ್ತಿಸುತ "ಹೂಂ..." ಅಂದಳು. ಆದರೆ ಮತ್ತೊಬ್ಬಾಕೆ ಸ್ವಲ್ಪ ಸ್ನೇಹಮಯಿ ಇರಬೇಕು. 'ಮತ್ತಗುತ್ತಿಗೆ ತಗೊಂಡಿವ್ರೀ... ಎರಡು ನೂರು ರೂಪಾಯಿಗೆ ಈ ಕಲ್ಲಿನ ರಾಶಿ ಸಣ್ಣ



ಮಾಡಬೇಕು. ಈಟ ಸಣ್ಣ ಮಾಡಿದರೂ ಮಾಲಕರಿಗೆ ಸಂತೋಷ ಇರಾದಿಲ್ಲ. ಏನ್ ಮಾಡಾದು? ಕೈ ಮ್ಯಾಲಿನ ಕೆಲಸ. ಮಾಡಿದ್ರೆ ಹೊಟ್ಟೆಗೆ ಅನ್ನ ಕಾಣ್ತೇವ' 'ದಿನಕ್ಕೆ ಎಷ್ಟು ಕೂಲಿ ಬೀಳ್ತದ?' ಎಂದು ನಾನು ನಡುವಿಗೇ ಕೇಳಿದೆ 'ಆಗ್ತದರಿ ಎಂಭತ್ತು-ನೂರು. ಆದ್ರ ಎದಕ ಸಾಲ್ತದ ಹೇಳ್ರೀ? ಎಲ್ಲ ದಿನಸ ದುಬಾರಿ ಆಗ್ಯಾವ..'

ನಾನು ಸುಮ್ಮನೇ ಮಾತಿಗೆಳೆದೆ. ಗೆಳೆತನದ ಎಳೆ ಹಿಡಿದು ಪಯಣಿಸುವುದು ಖುಷಿ ಕೊಡುತ್ತದೆ. 'ನಿಮ್ಮ ಹೆಸರೇನಕ್ಕಾ..?' ಒಬ್ಬಳು 'ಸುಶೀಲಮ್ಮ' ಅಂದಳು. ಇನ್ನೊಬ್ಬಳು ಭಾಗಮ್ಮ ಮತ್ತೊಬ್ಬಾಕೆ ಪಾರ್ವತಿ. ಮಧ್ಯಮ ವರ್ಗೀಯ ಅಥವಾ ಅಕ್ಷರಸ್ಥರಿಗೆ 'ನಿಮ್ಮ ಹೆಸರೇನು?' ಎಂದು ಕೇಳಿಯೇ ಮಾತಿಗೆ ಮೊದಲಾಗಬೇಕು. ಆದರೆ ದುಡಿಮೆಗಾರರ ಪ್ರಶ್ನೆ ಅಡಗಿರುವುದು ಹೆಸರಿನಲ್ಲಿ ಅಲ್ಲ. ರಟ್ಟೆಯ ಕಸುವಿನಲ್ಲಿ ಹೊಟ್ಟೆಯ ಹಸಿವಿನಲ್ಲಿ.

ಭೂತ ಬಿಡುವುದೇ ಇಲ್ಲ


'ನಿನ ಗಂಡ ಮಕ್ಕಳೂ ದುಡಿತಾರೇನಿಲ್ಲ..' ಪ್ರಶ್ನೆಗೆ ಅವಳು ಚಿಂತಿತಳಾದಂತೆ ತೋರಿತು. 'ಸುಳ ಹೇಳಾದು ಏನದಾರಿ? ಗಂಡ ದುಡಿದಿದ್ದು ಅಧ ಕುಡಿಲಾಕ ಹೋಗ್ತದ. ಮಗ ಸಾಲಿಗಿ ಹೋಗ್ತಾನ ಮಗಳು ಕೊಟ್ಟ ಗಂಡ ಮನಿಗಿ ಹೋಗ್ಯಾರ. ಮೂರ ಮಕ್ಕಳು ಸಣ್ಣು ಅವಾ. ನಾವು ಗಂಡ-ಹೆಣ್ತಿ ದುಡದರ ಮನಿ ನಡಿಬೇಕು' ಯಾವ ಪ್ರತಿಷ ಹಮ್ಮು-ಬಿಮ್ಮುಗಳಿಲ್ಲದೆ ಎರಡು ನುಡಿಯಲ ಸಂಕಟದ ಜೀವನಗಾಥೆಯನ್ನೇ ಅರುಹಿದಳು "ಕುಪ್ಪಸ ಎಷ್ಟು ತಿಂಗಳಿಗೊಂದು ಜೋಡ ಬೇಕು..?" ಅಯ್ಯೋ ಕುಬಸಾನೆ ಯಾಕ್ರೀ ಸೀರಿನ ಜಲ್ದಿ ಹರದು ಹೋಗ್ತಾವ. ತಿಂಗಳಿಗೆ ಒಂದ ಜೋಡು ಕುಬಸ ಆರು ತಿಂಗಳಿಗೆ ಒಂದು ಜೋಡ ಸೀರಿ ಬೇಕು.." ಕೈಯೆತ್ತಿ ಎತ್ತಿ ಕಲ್ಲು ಕುಟ್ಟುವುದರಿಂದ ಕುಪ್ಪಸದ ತೋಳುಗಳು ನೋಡ ನೋಡುತ್ತಲೆ ಹರಿದೇ ಹೋಗುವುವು? ದುಭಾರಿ ಕುಬಸ ತರಲಾಗದೇ ಬಿಟ್ಟೇ ಬಿಟ್ಟರೇ ಹಿಂದಿನವರು? ಒಡೆದ ಕಲ್ಲಿನ ಚೂರುಗಳು ಉಟ್ಟ ಸೀರೆಯನ್ನು ತೂತ ಮಾಡುವುದು ಎಷ್ಟೊತ್ತು ತಡ? ಸಾಳೆ ಮತ ದುಡಿಯಲು ಇಂದು ಹೊಟ್ಟೆ ತುಂಬಾ ಉಣ್ಣಬೇಕು ದುಡಿಯುವಾಗ ಬತ್ತಲೆ ಇರಲಾದೀತೆ? ಮೈ ತುಂಬ ಬಟ್ಟೆ ಉಡಲೇಬೇಕು. ಹಾಗಾದರೆ ತಿಂಗಳಿಗೊಮ ಕುಪ್ಪಸ, ಆರು ತಿಂಗಳಿಗೊಮ್ಮೆ ಸೀರೆಗಳನ ಖರೀದಿಸಬೇಕು. ಇದಕ್ಕೂ ಹಣ ಹೊಂದಿಸಬೇಕು ಪ್ರತಿದಿನ ನೂರಿನ್ನೂರು ಕೈಗೆ ಕೂಲಿ ಬರುತ್ತದಲ ಎನಿಸಬಹುದು. ಆದರೆ ಖರ್ಚು ಸಹ ದುಪ್ಪಟ್ಟ ತಿಪ್ಪಟ್ಟು. ಬಡತನವೆಂಬ ಭೂತ ಬಿಟ್ಟು ಹೋಗುವುದೇ ಇಲ್ಲ.

ವಿಪರ್ಯಾಸ

ಇದೆಂಥ ವಿಪರ್ಯಾಸ! ಜಗತ್ತನ್ನೇ ಕಟ್ಟಿಕೊಟ್ಟ ಜನ ಇವರು. ನಿಜದ ಬ್ರಹ್ಮರೇ. ಆದರೆ ಇವರ ಬದುಕು ಮಾತ್ರ ಮೂರಬಟ್ಟೆಯೇ. ಪ್ರತಿಯೊಬ್ಬ ಕಾಯಕ ಜೀವಿಗಳ ಬದುಕಿನಲ್ಲಿ ಇಣುಕಿ ನೋಡಿದರ ಅವರ ಸಂಕಟ ಸರಮಾಲೆ ಅರ್ಥವಾದಾತು.

ರಸ್ತೆಯುದ್ದಕ್ಕೂ ಹೆಜ್ಜೆ ಹಾಕುವಾಗ ಆ ಹೆಂಗಸರ ಕಲ್ಲು ಹೊಡೆಯುವ ಶಬ್ದ ಹಿಂಬಾಲಿಸಿತು. ಹರಿದ ಕುಪ್ಪಸ ಕಾಡುತ್ತಿತ್ತು. ಯಾರದೋ ಮನೆಯ ದೇವರುಗಳು ಪವಡಿಸಲು ಇರುವ ಜಗುಲಿಗಾಗಿ ಇವರು ಕಲ್ಲೊಡೆಯುತ್ತಿರಬಹುದು. ಇವರು ಹದಗೊಳಿಸಿದ ಕಲ್ಲುಗಳು ಗುಡಿ- ಗೋಪುರಗಳಿಗೆ ಭವ್ಯ ಇಮಾರತುಗಳಿಗೆ ಚಿಂದಗೊಳಿಸಬಹುದು ಆದರೆ ಈ ಬ್ರಹ್ಮರ ಜೀವನ..? ಕವಿ ವಾಣಿಯೊಂದು ನೆನಪಿಗೆ ಬಂತು.

'ಎಲ್ಲೋ ಹುಡುಕಿದೆ ಇಲ್ಲದ ದೇವರ ಕಲ್ಲು ಮಣ್ಣಿನ
ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಸ್ನೇಹಗಳ ಅರಿಯದೆ ಹೋದ
ನಿಮ್ಮೊಳಗೆ'



■ ಶರತ್‌ಚಂದ್ರ

ವಿದೇಶಿ ಪ್ರಜೆಗಳು, ಪೊಲೀಸ್ ಅಧಿಕಾರಿಗಳು, ಭದ್ರತಾ ಪಡೆಯ ಯೋಧರು ಇವರ ಸಾವು ವಿಷಾದನೀಯವೇ. ಆದರೆ ಬಡವರ, ಸಾಮಾನ್ಯ ಜನರ, ಸಾಮಾನ್ಯ ಪೊಲೀಸರ ಸಾವು ಸಾವಲ್ಲವೇ? ಅವರು ಬರೀ ಸಂಖ್ಯೆ ಮಾತ್ರವೇ?

ಭಯೋತ್ಪಾದಕ ಮಾಧ್ಯಮಗಳು ?

ನಮ್ಮ ಸುದ್ದಿ ಮಾಧ್ಯಮಗಳು ಮುಂಬಯಿ ಭಯೋತ್ಪಾದಕ ದಾಳಿಯ ಸಮಯದಲ್ಲಿ ವರ್ತಿಸಿದ ರೀತಿ ತೀರಾ ಭಯ ಹುಟ್ಟಿಸುವಂಥದು. ಅದರಲ್ಲೂ ಟಿವಿ ಚಾನೆಲ್‌ಗಳದ್ದು. ಮೊದಲನೆಯದಾಗಿ ಈ ಥರದ ಭಯೋತ್ಪಾದಕ ದಾಳಿಯ ಸಮಯದಲ್ಲಿ 'ಲೈವ್ ಕವರೇಜ್' ಭದ್ರತಾ ಪಡೆಗಳ ಪ್ರತಿದಾಳಿಗೆ ತೊಂದರೆ ಮಾಡೀತೇ, ಭಯೋತ್ಪಾದಕ ಗುಂಪನ್ನು ದೂರದಿಂದ 'ರಿಮೋಟ್ ಕಂಟ್ರೋಲ್' ಮಾಡುತ್ತಿರುವವರಿಗೆ ಸಹಾಯ ಮಾಡಿದ ಹಾಗೆ ಆಗಲಿಲ್ಲವೇ, 'ಇಂತಹ ಪ್ರತಿ ಮಿನಿಟಿನ ಪ್ರಸಾರ ಬೇಕೆ'? ಈ ಪ್ರಶ್ನೆಗಳನ್ನು ಟಿವಿ ಚಾನೆಲ್‌ಗಳು ಆಗಲೂ ಕೇಳಿಕೊಳ್ಳಲಿಲ್ಲ. ಆ ಮೇಲೂ ಕೇಳಿಕೊಂಡಿಲ್ಲ. ಸರ್ಕಾರ ಸಹ ಈ ಪ್ರಶ್ನೆಯನ್ನು ಆಗ ಎತ್ತಲಿಲ್ಲ. ಆಮೇಲೆ ಸರ್ಕಾರ ಮುಂದೆ ಇಂತಹ ಭಯೋತ್ಪಾದಕ ದಾಳಿಯ ಸಮಯದಲ್ಲಿ ಮಾಧ್ಯಮಗಳಿಗೆ ರಚಿಸಿದ 'ನಿಯಮಾವಳಿ'ಯನ್ನು ಚರ್ಚಿಸಲು ಸಹ ನಿರಾಕರಿಸಿವೆ. ಟಿವಿ ಚಾನೆಲ್‌ಗಳು ಮುದ್ರಣ ಮಾಧ್ಯಮಗಳಿಗಿಂತ ಹೆಚ್ಚು ಬೇಜವಾಬ್ದಾರಿಯಿಂದ ವರ್ತಿಸಿದವು.

ಭಯೋತ್ಪಾದಕ ದಾಳಿಯ 60 ಗಂಟೆಗಳ ಉದ್ರೇಕಕಾರಿ ಕವರೇಜ್ ಈ ಮಾಧ್ಯಮಗಳ ಹಲವು ಹುಳುಕುಗಳನ್ನು ಎತ್ತಿ ತೋರಿಸಿದವು. ಮಾಧ್ಯಮಗಳ ಉನ್ನತ ವರ್ಗದ ಜನರ ಬಗೆಗಿನ ಪಕ್ಷಪಾತ ಸ್ಪಷ್ಟವಾಗಿ ಕಂಡುಬಂತು. ಬಹುಶಃ ಮೊದಲ ಬಾರಿಗೆ ಭಾರತದಲ್ಲಿ ಶ್ರೀಮಂತರು ದೊಡ್ಡ ರೀತಿಯಲ್ಲಿ ಭಯೋತ್ಪಾದಕ ದಾಳಿಯಲ್ಲಿ ಸಾವು ನೋವಿಗೀಡಾದರು. ಆದರ ಎದುರು ಜನ ಸಾಮಾನ್ಯರ ಸಂಕಟಕ್ಕೆ ಜಾಗ ಇರಲಿಲ್ಲ. ತಾಜ್ ಹೋಟೇಲ್ ಮುಂಬಯಿಯ ಪ್ರತೀಕ ಎಂದೆಲ್ಲಾ ಹಾಡಿ ಹೊಗಳಿ, ಅದರ ಬಗ್ಗೆ ಗಂಟೆಗಟ್ಟಲೆ ಮಟಗಟ್ಟಲೆ ಇತಿಹಾಸದ ಸ್ಮರಣೆ ನಡೆಯಿತು. ಆದರೆ ಮುಂಬಯಿಯ ಜನಸಾಮಾನ್ಯ ತಾಜ್ ಹೋಟೇಲ್ ನೋಡದೆ ಇರುವ ಸಾಧ್ಯತೆ ಹೆಚ್ಚು. ಮುಂಬಯಿಯ ಎಲ್ಲರ ಜೀವನದ ಭಾಗವಾಗಿರುವ ದಾಳಿಗೊಳಗಾಗಿದ್ದ ಇನ್ನೊಂದು ಪ್ರತೀಕ ವಿಕ್ಟೋರಿಯಾ ಟರ್ಮಿನಸ್‌ಗೆ ಅಂತಹ ಸೌಭಾಗ್ಯ ಇರಲಿಲ್ಲ. ಅಲ್ಲಿನ ದಾಳಿ, ಅಲ್ಲಿನ ಸಾವು-ನೋವು ಅಷ್ಟು ಸುದ್ದಿ ಮಾಡಲಿಲ್ಲ.

ದಫನ್ ಮಾಡಲು ನಿರಾಕರಣೆ ಸುದ್ದಿ ಅಲ್ಲ

ಅದೇ ರೀತಿ ಭಯೋತ್ಪಾದಕ ದಾಳಿಯನ್ನು ಮುಸ್ಲಿಮರ ತಲೆಗೆ ಕಟ್ಟುವ ಯಾವ ಛಾನ್ಸು ಅವರು ಬಿಟ್ಟುಕೊಡಲಿಲ್ಲ. ತಾವಾಗಿ ಮಾಡದಿದ್ದರೂ ಅಂತಹವರನ್ನು ಕರೆಸಿ ಅವರಿಂದ ಹೇಳಿಸಿದರು. ಒಬ್ಬ ರಿಯಲ್ ಎಸ್ಟೇಟ್ ತಿಮಿಂಗಲ ನಾವು ಬರಿಯ ಭಯೋತ್ಪಾದನೆ ಖಂಡಿಸಿದರೆ ಸಾಲದು. ಅದನ್ನು 'ಇಸ್ಲಾಮಿಕ್ ಭಯೋತ್ಪಾದನೆ' ಅಂತ ಕರೀಲಿಕ್ಕೆ ಹೆದರಬಾರದು. ಅಮೆರಿಕನ್ನರು ಮಾಡಿದಂತೆ ಅದನ್ನು ನಿರ್ನಾಮ ಮಾಡಬೇಕು ಅಂತ ಮುಲಾಜಿಲ್ಲದೆ ಹೇಳಿದ. ಇನ್ನೊಬ್ಬ ಮಾಜಿ ನಟಿ ತನ್ನ ಗಗನಚುಂಬಿ ಕಟ್ಟಡದಿಂದ ನೋಡಿದರೆ ಕಾಣುವ ಕೊಳೆಗೇರಿಗಳಲ್ಲಿ ಬರಿಯ 'ಪಾಕಿಸ್ತಾನದ ಧ್ವಜ' ಕಾಣಿಸುತ್ತದೆ. ಅದನ್ನು ಬಾಂಬು ಹಾಕಿ ಹುಟ್ಟಲಿಲ್ಲ ಅನಿಸಬೇಕು ಎಂದು ರೋಷದಿಂದ ಹೇಳಿದಳು. ಈ ಬಗ್ಗೆ ಕೋಲಾಹಲ ಆದಾಗ, ತಾನು 'ಇಸ್ಲಾಮಿಕ್ ಧ್ವಜ'ವನ್ನು 'ಪಾಕಿಸ್ತಾನದ ಧ್ವಜ' ಅಂತ ಕನ್‌ಫ್ಯೂಸ್ ಮಾಡಿಕೊಂಡುಬಿಟ್ಟೆ ಅಂತ ಸಮಜಾಯಿಷಿ ಕೊಟ್ಟಳಂತೆ.

ಭಯೋತ್ಪಾದನೆಗೆ ಬಲಿಯಾದ ಸಾಮಾನ್ಯ ಜನ, ಸಾಮಾನ್ಯ ಪೊಲೀಸ್ ಸಿಬ್ಬಂದಿಗಳ ಕುಟುಂಬ ವರ್ಗಗಳ ಗೋಳಾಟಗಳು ಕಾಣಲೇ ಇಲ್ಲ ಟಿವಿ ಚಾನಲ್‌ಗಳಲ್ಲಿ



ಆದರೆ ಈ ನಡುವೆ ಮುಂಬಯಿಯ ಮಸೀದಿಗಳೆಲ್ಲಾ ದಾಳಿಯಲ್ಲಿ ಸತ್ತ 9 ಭಯೋತ್ಪಾದಕರ ಶವ ದಫನ್ ಮಾಡಲು ನಿರಾಕರಿಸಿದ್ದು ಟಿವಿ ಚಾನೆಲ್‌ಗಳಿಗೆ ಸುದ್ದಿ ಆಗಲೇ ಇಲ್ಲ. ಒಂದೇ ಪತ್ರಿಕೆಯಲ್ಲಿ ಎಲ್ಲೋ ಒಳಪುಟದಲ್ಲಿ ಮೂಲೆಯಲ್ಲಿ ಅದಕ್ಕೆ ಜಾಗ ಸಿಕ್ಕಿದ್ದು. ಆಶ್ಚರ್ಯವೆಂದರೆ ಮುಸ್ಲಿಮರ ವಿರುದ್ಧ ಪಕ್ಷಪಾತಕ್ಕೆ ಹೆಸರಾದ ಎಲ್ಲಾ ಬ್ರಿಟಿಷ್ ಪತ್ರಿಕೆಗಳಲ್ಲಿ ಸಹ ಅದು ಮುಖಪುಟದ ದೊಡ್ಡ ಸುದ್ದಿ ಆಯ್ತು. ಅಂದರೆ ನಮ್ಮ ಟಿವಿ-ಪತ್ರಿಕೆಗಳು ಮುಸ್ಲಿಂ ವಿರುದ್ಧ ಪಕ್ಷಪಾತದಲ್ಲಿ ಬ್ರಿಟಿಷರಿಗಿಂತ ಕಡೆ ಅಂತಲೇ?!

ಸಾವಿಗೀಡಾದ 20 ಕ್ಕೂ ಹೆಚ್ಚು ಪೋಲೀಸು-ಕಮಾಂಡೋಗಳಲ್ಲಿ ನಾಲ್ವರು ಅಧಿಕಾರಿಗಳ ಬಗ್ಗೆ ಮಾತ್ರ ದೊಡ್ಡ ರೀತಿಯ ಕವರೇಜ್ ಆಯಿತು. ಅವರ ತ್ಯಾಗ-ಬಲಿದಾನಗಳ ಬಗ್ಗೆ ಸೂಚಿಸಿದ ಗೌರವದ ಬಗ್ಗೆ ಖಂಡಿತ ತಕರಾರು ಇಲ್ಲ. ಆದರೆ ಉಳಿದ ಸಾಮಾನ್ಯ ಸಿಬ್ಬಂದಿ (ಹೆಚ್ಚಾಗಿ ಮುಂಬಯಿ ಪೋಲೀಸರು) ಸಹ ಅದೇ ಗೌರವಕ್ಕೆ ಪಾತ್ರರಾಗಬೇಕಲ್ಲವೇ ? ಅವರ ಪರಿಚಯ, ಕುಟುಂಬದವರ ಜತೆ ಸಂದರ್ಶನ ಹೋಗಲಿ, ಫೋಟೋಗೆ ಸಹ ಜಾಗ ಇರಲಿಲ್ಲ. ಅವರ ಹೆಸರಿನ ಪಟ್ಟಿ ಸಹ ಎಲ್ಲೂ ಕಾಣಿಸಿಕೊಳ್ಳಲಿಲ್ಲ. ಅವರು ಬರಿ ಸಂಖ್ಯೆಗಳಾಗಿ ಉಳಿದರು.

ರಾಜಕಾರಣಿಗಳೇ ವಿಲನ್‌ಗಳು

ಇನ್ನು ಭಯೋತ್ಪಾದಕತೆಯ ಮೂಲಕಾರಣ ಶೋಧನೆಯಲ್ಲಿ ತಮ್ಮ ಬೇಜವಾಬ್ದಾರಿ ಮತ್ತು ವರ್ಗನೀತಿಯನ್ನು ಸರಿಯಾಗಿಯೇ ಪ್ರದರ್ಶಿಸಿದರು. ಭಯೋತ್ಪಾದಕತೆಯ ಮೂಲಕಾರಣ ಪಾಕಿಸ್ತಾನ. ಅದರ ವಿರುದ್ಧ ಹೋರಾಟದಲ್ಲಿ ದೊಡ್ಡ ತೊಡಕು 'ರಾಜಕೀಯ ವರ್ಗ' (ಇಂತಹ ವರ್ಗ ಇದೆ ಅಂತ ನಿಮಗೆ ಗೊತ್ತೇ?!). ಇದು ಅವರ ಸರಳ ವಿಶ್ಲೇಷಣೆ. ಎಲ್ಲಾ ರಾಜಕಾರಣಿಗಳ ವಿರುದ್ಧ ಆಕ್ರೋಶ ತೋರುವ ಮಹಾಜನರೇ ಟಿವಿ ಸ್ಟುಡಿಯೋ, ಸಂದರ್ಶನ, ಲೇಖನಗಳ ಸಿಂಹಪಾಲು ಪಡೆದರು. ರಾಜಕಾರಣಿಗಳ ವಿರುದ್ಧ ಸಮರ ಸಾರಿದರು. ಅವರ ವಾದದ ಧಾಟಿ ಹೇಗಿತ್ತೆಂದರೆ ಅವರು ಹಾಗೆ ಹೇಳದಿದ್ದರೂ - ಪ್ರಜಾಪ್ರಭುತ್ವವೇ ಸರಿ ಇಲ್ಲ. ಬುಶ್ ಮಾದರಿಯಲ್ಲಿ ಪ್ರಜಾಪ್ರಭುತ್ವ ಹಕ್ಕುಗಳನ್ನು ದಮನ ಮಾಡಿ ಮಾತ್ರ ಭಯೋತ್ಪಾದನೆಯ ವಿರುದ್ಧ ಹೋರಾಟ ಸಾಧ್ಯ. ಅಂತ ಅರ್ಥ ಬರುವ ಚರ್ಚೆ ನಡೆಯಿತು.

ಪಾಕಿಸ್ತಾನದ ಐ.ಎಸ್.ಐ. ಹುಟ್ಟಿಸಿ ಪೋಷಿಸಿ ಈಗಲೂ ಬಳಸುತ್ತಿರುವ ಸಿ.ಐ.ಎ. ಬಗ್ಗೆ ಆಗಲೀ, ಅವರ ಹಿಂದೆ ಇರುವ ಹಾಲಿ-ಮಾಜಿ ಅಮೆರಿಕನ್ ಅಧ್ಯಕ್ಷರ ಬಗ್ಗೆ ಆಗಲೀ (ಅಮೆರಿಕನ್ ಅಧ್ಯಕ್ಷ ಸಹ ರಾಜಕಾರಣಿ ತಾನೇ?!) ಚಕಾರವಿರಲಿಲ್ಲ. 1970-80 ರ ದಶಕದಲ್ಲಿ ಅಫಘಾನಿಸ್ತಾನದಲ್ಲಿ ಸೋವಿಯೆಟ್ ಒಕ್ಕೂಟದ ವಿರುದ್ಧ ಬಳಸಲು ಜಗತ್ತಿನಾದ್ಯಂತ ಇಸ್ಲಾಮಿಕ್ ಮೂಲಭೂತವಾದಕ್ಕೆ ಕುಮ್ಮಕ್ಕು ಕೊಟ್ಟ ಅಮೆರಿಕದ ನೀತಿ ಇಂದಿನ ಭಯೋತ್ಪಾದನೆಯ ಮೂಲದ ಬಗ್ಗೆ ಸುದ್ದಿ ಇರಲಿಲ್ಲ. ಇಸ್ಲಾಮಿಕ್ ಮೂಲಭೂತವಾದಿ ಚಳುವಳಿಯನ್ನು ರಾಮಜನ್ಮಭೂಮಿ ರಥಯಾತ್ರೆ-ಬಾಬ್ರಿ ಮಸೀದಿ ನಾಶಗಳ ಮೂಲಕ ಬಲಪಡಿಸಿ, ಗುಜರಾತ್ ಹತ್ಯಾಕಾಂಡದ ಬೆಂಕಿಯಿಂದ ಕೋಮುವಾದಿ ಭಯೋತ್ಪಾದಕ ಶಕ್ತಿಗಳಿಗೆ ದೇಶದಲ್ಲಿ ಶಾಶ್ವತ ಸ್ಥಾನ ಮಾಡಿಕೊಟ್ಟ ಹಿಂದೂ ಮೂಲಭೂತವಾದಿಗಳ ಬಗ್ಗೆ ಸ್ವಾಭಾವಿಕವಾಗಿಯೇ ಉಸಿರೆತ್ತಲಿಲ್ಲ.

ಅಚುತಾನಂದನ್ ವಿರುದ್ಧ ವಿವಾದದ ಸೃಷ್ಟಿ

ಎಡ ಚಳುವಳಿ, ಪಕ್ಷಗಳು, ನಾಯಕರ ಬಗ್ಗೆ ಯಾವಾಗಲೂ ವಿಷಕಾರುವ ಮಾಧ್ಯಮಗಳು ಈ ಸಂದರ್ಭದಲ್ಲಿ ಸಹ ಅದನ್ನು ಬಿಡಲಿಲ್ಲ. ಬೆಂಗಳೂರಿನಲ್ಲಿ ಮೇಜರ್ ಸಂದೀಪ್ ಮನೆಗೆ ಕೇರಳ ಮುಖ್ಯಮಂತ್ರಿ ಭೇಟಿ ನೀಡದೆ ಅವಮಾನ ಮಾಡಿದರು ಎಂದು ಮೊದಲು ದಾಂಧಲೆ ಎಬ್ಬಿಸಿದರು. ಭೇಟಿ ಕೊಟ್ಟ ಮೇಲೆ ಸಂದೀಪ್ ತಂದೆ ಉನ್ನಿಕೃಷ್ಣನ್ ಅವರನ್ನು ನಾಯಿ ಅಂತ ದೂಷಿಸಿ ಅವಮಾನ ಮಾಡಿದರು. ಕ್ಷಮೆ ಕೇಳಬೇಕು. ರಾಜೀನಾಮೆ ಕೊಡಬೇಕು ಎಂಬ ಕೂಗು ಹಾಕಿದರು. ಈ ಹಗರಣ ಸೃಷ್ಟಿಸಿದ್ದು ಟೈಮ್ಸ್ ಚಾನಲ್. ಈ ಹಗರಣದಿಂದ ಬೇಸರಗೊಂಡ ಉನ್ನಿಕೃಷ್ಣನ್ ಕುಟುಂಬ ನಿಜ ಸಂಗತಿ ಬಗ್ಗೆ ಹೇಳಿಕೆ ಕೊಟ್ಟಾಗ ಮಾತ್ರ ಟೈಮ್ಸ್ ಚಾನಲ್ ಮತ್ತು ಎಲ್ಲಾ ಮಾಧ್ಯಮಗಳ ಹೂರಣ ಬಯಲಾಯಿತು. ದುಃಖ ತಪ್ತ ಸ್ಥಿತಿಯಲ್ಲಿ ತಾನು ಯಾವ ನಾಯಿಯನ್ನು ಭೇಟಿ ಮಾಡುವುದಿಲ್ಲ ಎಂದು ಉನ್ನಿಕೃಷ್ಣನ್ ಹೇಳಿದ್ದರಂತೆ. ಆ ಬಗ್ಗೆ ಮಾಧ್ಯಮಗಳು ಕಿಡಿಗೇಡಿ ಪ್ರಶ್ನೆ ಕೇಳಿದಾಗ ಉತ್ತರವಾಗಿ ಅಷ್ಟೇ ಮುಖ್ಯಮಂತ್ರಿ ಅಚುತಾನಂದನ್ ಆ ಪದ ಬಳಸಿದರು. ಅಚುತಾನಂದನ್ ಉನ್ನಿಕೃಷ್ಣನ್ ಅವರಿಗೆ ಆ ರೀತಿ ಹೇಳಿರಲಿಲ್ಲ. ಈ ಹಿನ್ನೆಲೆ ಬೇಕೆಂತಲೇ ಹೇಳದೆ ಅಚುತಾನಂದನ್ ಹೇಳಿಕೆ ಮಾತ್ರ ಎತ್ತಿಹಿಡಿದು ಈ ಹಗರಣ ಸೃಷ್ಟಿಸಲಾಯಿತು. ಉನ್ನಿಕೃಷ್ಣನ್ ಕುಟುಂಬ ನಿಜ ಸಂಗತಿ ಬಗ್ಗೆ ಹೇಳಿಕೆ ಸಹ ಕೆಲವೇ ಪತ್ರಿಕೆಗಳಲ್ಲಿ ಬಂತು. ಆ ಮೇಲೂ ಟೈಮ್ಸ್ ಚಾನಲ್ ಅಥವಾ ಇತರ ಮಾಧ್ಯಮಗಳಿಗೆ ಈ ಬಗ್ಗೆ ತಪ್ಪು ಒಪ್ಪಿಕೊಳ್ಳಬೇಕು ಅಥವಾ ಕ್ಷಮೆ ಕೇಳಬೇಕು ಅನಿಸಲಿಲ್ಲ. ಟೈಮ್ಸ್ ಆಫ್ ಇಂಡಿಯಾದ ಈ ಬಗೆಗಿನ ವರದಿ ಬಾಕ್ಸನಲ್ಲಿ ಇದೆ.

ಹೀಗೆ ಮಾಧ್ಯಮಗಳು ಮುಂಬಯಿ ಭಯೋತ್ಪಾದನೆ ಬಗ್ಗೆ ವರದಿ ಮಾಡುತ್ತಾ ಇನ್ನೊಂದು ರೀತಿಯ ಉದ್ರೇಕ, ಭಯ ಸೃಷ್ಟಿಸಿದ್ದಾರೆ.

○

ನಿಜ ಸಂಗತಿ ಬಗ್ಗೆ ಉನ್ನಿಕೃಷ್ಣನ್ ಕುಟುಂಬದ ಹೇಳಿಕೆ - ಡಿಸೆಂಬರ್ 4 ಟೈಮ್ಸ್ ಆಫ್ ಇಂಡಿಯಾ ವರದಿ

...ಬೆಂಗಳೂರಲ್ಲಿ ಉನ್ನಿಕೃಷ್ಣನ್ ಕುಟುಂಬ ಸಂಬಂಧಿಸಿದ ಎಲ್ಲರಿಗೂ ಈ ವಿವಾದಕ್ಕೆ ತೆರೆ ಎಳೆಯುವಂತೆ ಮನವಿ ಮಾಡಿದ್ದಾರೆ. ಮುಖ್ಯಮಂತ್ರಿಗಳಿಗೆ ನೋವು ಉಂಟುಮಾಡಿದ್ದಕ್ಕೆ ವಿಷಾದ ವ್ಯಕ್ತಪಡಿಸಿದ್ದಾರೆ. ಕುಟುಂಬದ ಪರವಾಗಿ ಹೇಳಿಕೆ ನೀಡಿದ ಸಂದೀಪ್ ಸಂಬಂಧಿ ರಾಜೀವ್ ನಡೆದ ಘಟನೆ ದುರದೃಷ್ಟಕರ ಎಂದರು. ಉನ್ನಿಕೃಷ್ಣನ್ ಅವರ ದುಃಖತಪ್ತ ಸ್ಥಿತಿಯಿಂದಾಗಿ ಆ ರೀತಿ ವರ್ತಿಸಿದರು. ಅದಕ್ಕೆ ಅವರು ವಿಷಾದ ವ್ಯಕ್ತಪಡಿಸಿದರು. ಟಿವಿ ವರದಿಗಾರನೊಬ್ಬ ಉನ್ನಿಕೃಷನ್ ನಾಯಿ ಪದ ಬಳಸಿ ಮಾಡಿದ ಹೇಳಿಕೆ ಬಗ್ಗೆ ಅಚುತಾನಂದನ್ ಅವರನ್ನು ನಿರ್ದಿಷ್ಟವಾಗಿ ಪ್ರಶ್ನಿಸಿದಾಗ ಮಾತ್ರ ಅವರೂ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಿದರು ಎಂದು ತಮ್ಮ ಕುಟುಂಬದ ಗಮನಕ್ಕೆ ಬಂದಿದೆ. ಉನ್ನಿಕೃಷ್ಣನ್ ಅವರ ಆಕ್ರೋಶ ಅಚುತಾನಂದನ್ ಬಗ್ಗೆ ಅಲ್ಲ ಎಂದು ರಾಜೀವ್ ಹೇಳಿಕೆಯಲ್ಲಿ ತಿಳಿಸಿದ್ದಾನೆ.



ವೈದ್ಯ ವೃತ್ತಿಗೆ ತಗಲಿರುವ ಶಾಪಗಳು

ವೈದ್ಯವೃತ್ತಿ ನೂರಾರು ವರ್ಷಗಳಿಂದ ಜನರ ಆರೋಗ್ಯ ಸೇವೆ ಮಾಡುತ್ತಾ ಬಂದಿದೆ. ವೈದ್ಯ ವೃತ್ತಿಯಲ್ಲಿರುವವರು ಖಾಸಗಿ ವೈದ್ಯರೇ ಹೆಚ್ಚು ಸಂಖ್ಯೆಯಲ್ಲಿ. ವೈದ್ಯರೆಂದರೆ ದೇವರಿಗೆ ಸಮಾನ ಅನ್ನುವ ಮನೋಭಾವನೆ ಜನರಲ್ಲಿದೆ. ಆದರೆ ಇತ್ತೀಚಿಗಿನ ದಶಕಗಳಲ್ಲಿ ವೈದ್ಯವೃತ್ತಿ ವ್ಯಾಪಾರೀಕರಣಗೊಳ್ಳುತ್ತಿದೆ. ಜನರು ಈಗೀಗ ಅರ್ಥಮಾಡಿಕೊಳ್ಳುತ್ತಿದ್ದಾರೆ. ಈ ವ್ಯಾಪಾರೀಕರಣ ದಿಂದಾಗಿ ವೈದ್ಯವೃತ್ತಿಯಲ್ಲಿ ಬದಲಾವಣೆಯಾಗುತ್ತಿದೆ. ಜನಸಾಮಾನ್ಯರಿಗೆ ದಿನನಿತ್ಯದ ಆರೋಗ್ಯ ಸಮಸ್ಯೆಗಳಿಗೆ ಸುಲಭವಾದ ಪರಿಹಾರ ಪಡೆಯಲು ಮೊದಲಿನಷ್ಟು ಸುಲಭವಾಗಿಲ್ಲ ಹಾಗೂ ದುಬಾರಿಯಾಗುತ್ತಿದೆ. ಈ ಬದಲಾವಣೆಯಿಂದ ವೈದ್ಯವೃತ್ತಿ ಏಳು ಶಾಪಗಳಿಗೆ ಗುರಿಯಾಗಿದೆ!

ಶಾಪ - 6

ಮಾನಸಿಕ ನೆಮ್ಮದಿ ನೀಡಲು ಆಪ್ತ ಸಮಾಲೋಚನೆ

ರೋಗಿಗಳು ವೈದ್ಯರ ಕೈಗುಣದ ಆಧಾರದ ಮೇಲೆ, ವೈದ್ಯರಿಗೆ ಅಂಟಿಕೊಳ್ಳುತ್ತಾರೆ. ರೋಗಿಗೆ ನೆಮ್ಮದಿ ನೀಡುವ ವೈದ್ಯರಿಂದ ಮಾತ್ರ ಚಿಕಿತ್ಸೆ ಪರಿಣಾಮಕಾರಿಯಾಗಲು ಸಾಧ್ಯ. ಆದರೂ ಕೆಲವು ಸನ್ನಿವೇಶಗಳಲ್ಲಿ ರೋಗಿಗೆ ರೋಗದ ಬಗ್ಗೆ ಜೀವನದ ಬಗ್ಗೆ ಆತಂಕ, ಜಿಗುಪ್ಸೆ, ಅನುಮಾನ, ಅನಿಶ್ಚಿತತೆಗಳಿರಲು ಸಾಧ್ಯ. ಇವೂ ರೋಗದ ಮೇಲೆ ರೋಗಿಯ ಮೇಲೆ ಪರಿಣಾಮ ಬೀರುತ್ತದೆ. ಅಂತಹ ಸಂದರ್ಭದಲ್ಲಿ ರೋಗಿಯೊಂದಿಗೆ ಮಾತನಾಡಿ ಅವರ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಸೂಕ್ತ ಪರಿಹಾರ ನೀಡಬೇಕಾಗುತ್ತದೆ. ವೈದ್ಯನ ಈ ಆದೇಶಕ್ಕೆ ಮಹತ್ವದಿಂದ ಹಾಗೂ ರೋಗಿಯ ಸಮಸ್ಯೆ ಪರಿಹಾರ ನೀಡುತ್ತದೆ. ಇದಕ್ಕೆ ಆಪ್ತ ಸಮಾಲೋಚನೆ ಎನ್ನಬಹುದು. ಈಗಿನ ದಿನಗಳಲ್ಲಿ ಸಾಮಾಜಿಕ ಅನಿಶ್ಚಿತತೆ, ಹೆಚ್ಚಾಗಿರುವುದರಿಂದ ಈ ಆಪ್ತ ಸಮಾಲೋಚನೆಯ ಅಗತ್ಯತೆ ಹೆಚ್ಚಾಗಿದೆ.

ಆದರೆ ವೈದ್ಯರು ಕೇವಲ ವೈದ್ಯ ಚಿಕಿತ್ಸೆಗೆ ಸಜ್ಜಾಗಿದ್ದಾರೆ ಹಾಗೂ ಆಪ್ತ ಸಮಾಲೋಚನೆಯ ವಿಧಾನವನ್ನು ಅರಿಯದವರಾಗಿದ್ದಾರೆ. ಕೆಲವರು ನಾಲ್ಕು ಒಳ್ಳೆಯ ಮಾತುಗಳನ್ನಾಡಿ ರೋಗಿಯನ್ನು ಸಂತೈಸಬಲ್ಲರು. ಆದರೆ ಅದು ವೈಜ್ಞಾನಿಕ ಆಪ್ತ ಸಮಾಲೋಚನೆಗೆ ಸಮಾನವಲ್ಲ. ರೋಗಿ ಆತಂಕಪಡುವುದನ್ನು ಅಥವಾ ಖಿನ್ನತೆಯಲ್ಲಿರುವುದನ್ನು ನೋಡಿದಾಗ, ವೈದ್ಯ ಅನೇಕ ಪರೀಕ್ಷೆಗಳನ್ನು ಬರೆದುಕೊಡುವುದಾಗಲಿ, ಅನೇಕ ಚಿಕಿತ್ಸೆಗಳನ್ನು ನೀಡುವುದಾಗಲಿ, ಕೆಲವರಿಗೆ ಮನ:ಶಾಂತಿಗಾಗಿ ಕೆಲವು ಔಷಧಿಗಳನ್ನು (tranquillizers) ಬರೆದುಕೊಡುವುದಾಗಲಿ ಸಾಮಾನ್ಯವಾಗಿದೆ. ಇದು ಅವೈಜ್ಞಾನಿಕ. ಆಪ್ತ ಸಮಾಲೋಚನೆಗೆ ವೈದ್ಯನಿಗೆ ತರಬೇತಿ ಇಲ್ಲ. ಆಪ್ತ ಸಮಾಲೋಚನೆ ಸುಲಭ ಪರಿಣಾಮಕಾರಿ ಸಾಧನ. ಎಲ್ಲ ಕುಟುಂಬ ವೈದ್ಯರು ಕಲಿಯಲೇಬೇಕಾದ ವಿಧಾನ ○

ಆ ಮೂರು ದಿನಗಳ ನಂತರ....

ಪುಟ 7 ರಿಂದ

ಉಗ್ರಗಾಮಿ ಸಂಘಟನೆಗಳು ಬಯಸುವುದು ಇದನ್ನೇ. ಅವರ ಬಯಕೆಯನ್ನು ಈಡೇರಿಸಿ ಭಯೋತ್ಪಾದನೆಯನ್ನು ಕೊನೆಗೊಳಿಸಲು ಸಾಧ್ಯವೇ?

ಹಾಗಿದ್ದರೆ ಭಯೋತ್ಪಾದಕರ ಪಾಕಿಸ್ತಾನೀ ಸಂಪರ್ಕಗಳ ಬಗ್ಗೆ ಏನು ಮಾಡಬಹುದು?

ಪಾಕಿಸ್ತಾನದೊಡನೆ ಯುದ್ಧ ಮಾಡುವುದರಿಂದ ಇದನ್ನು ಕಡಿತಗೊಳಿಸಲು ಸಾಧ್ಯವಿಲ್ಲ. ಭಾರತ ಸರಕಾರ ಪಾಕಿಸ್ತಾನದ ಸರಕಾರ ಅಥವಾ ಅಲ್ಲಿನ ಪ್ರಭುತ್ವದ ಸಂಸ್ಥೆಗಳು ಇದರಲ್ಲಿ ಪಾತ್ರ ವಹಿಸಿವೆ ಎಂದು ಹೇಳಿಲ್ಲ. ಆದ್ದರಿಂದ ನಾವು ಎಲ್ಲಾ ಸಾಕ್ಷ್ಯಗಳನ್ನು ಸಂಗ್ರಹಿಸಿ ಪಾಕಿಸ್ತಾನ ಸರಕಾರದ ಮುಂದಿಟ್ಟು ಅಲ್ಲಿ ಮತ್ತು ಭಾರತದಲ್ಲಿ ಕಾರ್ಯಾಚರಣೆ ನಡೆಸುವ ಉಗ್ರಗಾಮಿ ಸಂಘಟನೆಗಳ ಮೇಲೆ ತಕ್ಷಣ ಕಠಿಣ ಕ್ರಮ ತಗೊಳ್ಳುವಂತೆ ಕೇಳಬೇಕು. ಅದಕ್ಕೆ ಅವರು ಸ್ಪಂದಿಸದಿದ್ದರೆ ಭಾರತ ಇದನ್ನು ವಿಶ್ವ ಸಂಸ್ಥೆಯ ಭದ್ರತಾ ಸಮಿತಿಗೆ ಒಯ್ಯಬೇಕು. ಅಮೆರಿಕಾದಲ್ಲಿ 9/11 ದಾಳಿಗಳ ನಂತರ ಭದ್ರತಾ ಸಮಿತಿ ನಿರ್ಣಯ ಸಂಖ್ಯೆ 1373ನ್ನು ಅಂಗೀಕರಿಸಿತು. ಅದು ಈ ವಿಷಯದ ಮೇಲಿನ ಒಂದು ಸಮಗ್ರವಾದ ನಿರ್ಣಯ. ಎಲ್ಲಾ ಸದಸ್ಯ ದೇಶಗಳು 'ಭಯೋತ್ಪಾದಕ ಕೃತ್ಯಗಳನ್ನು ಎಸಗದಂತೆ ತಡೆಯಬೇಕು; ಭಯೋತ್ಪಾದಕ ಕೃತ್ಯಗಳಿಗೆ ಹಣಕಾಸು, ಯೋಜನೆ, ಬೆಂಬಲ ನೀಡುವವರಿಗೆ, ಅದನ್ನು ಎಸಗುವವರಿಗೆ ಸುರಕ್ಷಿತ ಆಶ್ರಯ ನಿರಾಕರಿಸಬೇಕು' ಎಂದು ಅದು ಹೇಳುತ್ತದೆ. ಎಲ್ಲಾ ಸರಕಾರಗಳು 'ಭಯೋತ್ಪಾದಕ ಕೃತ್ಯಗಳಿಗೆ ಹಣಕಾಸು, ಯೋಜನೆ, ಸೌಲಭ್ಯ ಒದಗಿಸುವವರು ಮತ್ತು ಎಸಗುವವರು ತಮ್ಮ ಪ್ರದೇಶವನ್ನು ಬೇರೆ ದೇಶಗಳು ಅಥವಾ ಅವರ ನಾಗರಿಕರ ವಿರುದ್ಧ ಬಳಸುವುದನ್ನು ತಡೆಯಬೇಕು' ಎಂದೂ ಈ ನಿರ್ಣಯ ವಿಧಿಸುತ್ತದೆ. ಮುಂದುವರೆದು ಅದು ಸದಸ್ಯ ದೇಶಗಳು 'ಭಯೋತ್ಪಾದಕ ಕೃತ್ಯಗಳಿಗೆ ಹಣಕಾಸು ಅಥವಾ ಬೆಂಬಲಕ್ಕೆ ಸಂಬಂಧಪಟ್ಟ ಕ್ರಿಮಿನಲ್ ತನಿಖೆಗಳಲ್ಲಿ ಅಥವಾ ವಿಚಾರಣೆಗಳಲ್ಲಿ , ತಮ್ಮ ಬಳಿಯಿರುವ ಸಾಕ್ಷ್ಯಗಳನ್ನು ಪಡೆಯುವುದೂ ಸೇರಿದಂತೆ ಪರಸ್ಪರ ಅತ್ಯಂತ ಹೆಚ್ಚಿನ ಸಹಕಾರ ನೀಡಬೇಕು' ಎಂದೂ ಹೇಳುತ್ತದೆ.

ಮುಂಬೈ ದಾಳಿಗಳಲ್ಲಿ ಇನ್ನೊಂದು ದೇಶದಿಂದ ಭಯೋತ್ಪಾದಕರು ಬಂದಿದ್ದಾರೆ; ಅವುಗಳ ಹಿಂದೆ ಬಹಳಷ್ಟು ತರಬೇತಿ ಮತ್ತು ಯೋಜನೆ ಇದೆ. ಈ ದಾಳಿಗಳಲ್ಲಿ ಆರು ದೇಶಗಳ 30 ವಿದೇಶಿ ನಾಗರಿಕರು ಸತ್ತಿದ್ದಾರೆ. ಆದ್ದರಿಂದ ಪಾಕಿಸ್ತಾನ ಇದಕ್ಕೆ ಹೊಣೆಗಾರರಾದ ಅಪರಾಧಿಗಳನ್ನು ಪತ್ತೆ ಹಚ್ಚಲು, ಅವರ ಸಂಘಟನೆಯನ್ನು ದಮನ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ವಿಶ್ವ ಸಂಸ್ಥೆಯ ಭದ್ರತಾ ಸಮಿತಿ ಕೇಳಬೇಕೆಂದು ಅದನ್ನು ಭಾರತ ವಿನಂತಿಸಿಕೊಳ್ಳಬಹುದು. ಇದರಿಂದ ಪಾಕಿಸ್ತಾನದ ಮೇಲೆ ಅಂತರ್ರಾಷ್ಟ್ರೀಯ ಒತ್ತಡ ಬರುತ್ತದೆ. ಆಗ ಭಯೋತ್ಪಾದನೆಯನ್ನು ಎದುರಿಸುವ ಪ್ರಶ್ನೆ ಕೇವಲ ಭಾರತ ಮತ್ತು ಪಾಕಿಸ್ತಾನದ ನಡುವಿನ ತಿಕ್ಕಾಟವಾಗುಳಿಯದೆ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಭಯೋತ್ಪಾದನೆಯನ್ನು ಎದುರಿಸುವ ಪ್ರಶ್ನೆಯಾಗುತ್ತದೆ.

ಇದರ ಜೊತೆಗೆ ನಮ್ಮ ಗುಪ್ತಚರ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಉತ್ತಮ ಪಡಿಸಬೇಕು. ಕೇಂದ್ರ ಸರಕಾರ ಒಂದು ಒಕ್ಕೂಟ ತನಿಖಾ ಸಂಸ್ಥೆ ರಚಿಸ ಬಯಸುತ್ತದೆ. ಆದರೆ ಇದರಿಂದ ರಾಜ್ಯಸರಕಾರಗಳನ್ನು ಸೂಕ್ಷ್ಮ ಭದ್ರತಾ ತನಿಖೆಗಳಲ್ಲಿ ಹೊರಗಿಡಬಹುದೆಂಬ ಭಯವಿದೆ. ಈ ಭಯವನ್ನು ಹೋಗಲಾಡಿಸುವ ಅಂಶ ಅದರಲ್ಲಿರಬೇಕು. ಅಲ್ಲದೆ ಪೋಲೀಸ್ ಸುಧಾರಣೆಗೆ ಮತ್ತು ಕರಾವಳಿ ರಕ್ಷಣಾ ವ್ಯವಸ್ಥೆಯನ್ನು ಪುನರ್ರೂಪಿಸಲು ಆದ್ಯತೆ ನೀಡಬೇಕು.

ಎಲ್ಲಕ್ಕೂ ಮಿಗಿಲಾಗಿ, ಭಯೋತ್ಪಾದನೆಯ ಸಮಸ್ಯೆಯನ್ನು ಕಳೆದ ಎರಡು ದಶಕಗಳ ಕೋಮುವಾದೀಕರಣದ ಹಿಡುಗಿನಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ ಎಂಬುದನ್ನು ಅರಿಯಬೇಕು. ಅಲ್ಪಸಂಖ್ಯಾತರ ವಿರುದ್ಧ ಹಿಂಸಾಕಾಂಡಗಳು, ಅದಕ್ಕೆ ಬಲಿಯಾದವರಿಗೆ ನ್ಯಾಯ ದೊರಕಿಸಿಕೊಡಲಾಗದಿರುವುದು ಅಲ್ಪಸಂಖ್ಯಾತ ಸಮುದಾಯದಲ್ಲಿ ಉಗ್ರಗಾಮಿತ್ವಕ್ಕೆ ನೆಲೆ ಸೃಷ್ಟಿಸಿದೆ. ಕೋಮುವಾದ ಮತ್ತು ಧಾರ್ಮಿಕ ಉಗ್ರವಾದ ಎರಡೂ ಭಯೋತ್ಪಾದನೆಯನ್ನು ಪೋಷಿಸುತ್ತವೆ. ಪಾಕಿಸ್ತಾನದಲ್ಲಿ ನೆಲೆ ಪಡೆದಿರುವ ಉಗ್ರಗಾಮಿ ಶಕ್ತಿಗಳಿಗೆ ಇದು ಮಧ್ಯಪ್ರವೇಶಿಸಲು ಸುವರ್ಣಾವಕಾಶವಾಗಿ ಕಾಣುತ್ತದೆ.

ಆದ್ದರಿಂದ ಭಾರತದಲ್ಲಿ ಭಯೋತ್ಪಾದನೆಯ ವಿರುದ್ಧ ಹೋರಾಟ ಪೂರ್ಣವಾಗಿ ಯಶಸ್ವಿಯಾಗಬೇಕಾದರೆ ಕೋಮುವಾದದ ಶಕ್ತಿಗಳನ್ನು ದೂರ ತಳ್ಳಬೇಕು ಮತು ಸೋಲಿಸಬೇಕು. ಇದು ಮೇಲ್ವರ್ಗಗಳ ಜನರು ಮತ್ತು ಕಾರ್ಪೊರೇಟ್ ಮಾಧ್ಯಮಗಳು ಪ್ರಾಯೋಜಿಸುತ್ತಿರುವ ರಾಜಕೀಯ-ವಿರೋಧಿ ಪ್ರಚಾರದಿಂದ ಸಾಧ್ಯವಿಲ್ಲ. ಬದಲಾಗಿ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯಾತೀತ ರಾಜಕೀಯಕ್ಕೆ ದೃಢವಾದ ಬದ್ಧತೆಯಿಂದ ಮಾತ್ರ ಸಾಧ್ಯ. ಅದರಿಂದ ಮಾತ್ರವೇ ಭಾರತದ ಸಮಗ್ರತೆ ಮತ್ತು ಐಕ್ಯತೆ ಸುರಕ್ಷಿತವಾಗಿ ಉಳಿಯಲು ಸಾಧ್ಯ.

ಮುಂಬೈ ದಾಳಿಗಳು ಮತ್ತು ಬಿಜೆಪಿ

ಪುಟ 7 ರಿಂದ

ದಿಲ್ಲಿ ಮತ್ತು ರಾಜಸ್ತಾನದ ಚುನಾವಣಾ ಪ್ರಚಾರದಲ್ಲಿ ಅದು ಇದ್ದಕ್ಕಿದ್ದಂತೆ ಮಾಯವಾಯಿತು. ಮತ್ತೆ ಭಯೋತ್ಪಾದನೆ ಅವರ ಪ್ರಚಾರದ ಮುಖ್ಯ ವಸ್ತುವಾಯಿತು. ಮುಂಬೈ ದಾಳಿಗಳ ಬಗ್ಗೆ ಜನಗಳಲ್ಲಿ ಹರಡಿದ ಕ್ರೋಧದ ಚುನಾವಣಾ ಲಾಭ ಗಿಟ್ಟಿಸಲು ಅವರು ಸ್ವಲ್ಪವೂ ವಿಳಂಬ ಮಾಡಲಿಲ್ಲ!

ನಿಜ, ಎಲ್ಲಾ ಹತ್ತು ಭಯೋತ್ಪಾದಕರು ಪಾಕಿಸ್ತಾನದ ಕರಾಚಿಯಿಂದ ಬಂದಿದ್ದರು, ಎಲ್ಲರೂ ಮುಸ್ಲಿಮರೇ. ಅವರಲ್ಲಿ ಬದುಕುಳಿದವ ತಾನು ಲಷ್ಕರ್-ಎ-ತಯ್ಯಬಾಕ್ಕೆ ಸೇರಿದವ ಎಂದು ಒಪ್ಪಿಕೊಂಡಿದ್ದಾನೆ. ಆದರೆ ಅವರು ಮುಂಬೈಯಲ್ಲಿ ಸಾಯಿಸಿದವರಲ್ಲಿ ಕನಿಷ್ಟ 40 ಮುಸ್ಲಿಮರಿದ್ದರು, ಅವರು ದಾಳಿ ಮಾಡಿದ್ದು ಒಂದು ಪಾರಸೀ ಕೈಗಾರಿಕಾ ಕುಟುಂಬದ, ಒಬ್ಬ ಸಿಖ್ ಹೊಟೇಲ್ ಉದ್ಯಮಿಯ ಆಸ್ತಿಗಳ ಮೇಲೆ ಮತ್ತು ಯೆಹೂದ್ಯರ ಒಡೆತನದ ಮನೆಯ ಮೇಲೆ ಎಂಬುದನ್ನು ಕೂಡಾ ಗಮನಿಸದಿರಲು ಸಾಧ್ಯವೇ?

ನಿಜ, ಎಲ್ಲಾ ಹತ್ತು ಭಯೋತ್ಪಾದಕರು ಪಾಕಿಸ್ತಾನದ ಕರಾಚಿಯಿಂದ ಬಂದಿದ್ದರು, ಎಲ್ಲರೂ ಮುಸ್ಲಿಮರೇ. ಅವರಲ್ಲಿ ಬದುಕುಳಿದವ ತಾನು ಲಷ್ಕರ್-ಎ-ತಯ್ಯಬಾಕ್ಕೆ ಸೇರಿದವ ಎಂದು ಒಪ್ಪಿಕೊಂಡಿದ್ದಾನೆ. ಆದರೆ ಅವರು ಮುಂಬೈಯಲ್ಲಿ ಸಾಯಿಸಿದವರಲ್ಲಿ ಕನಿಷ್ಟ 40 ಮುಸ್ಲಿಮರಿದ್ದರು, ಅವರು ದಾಳಿ ಮಾಡಿದ್ದು ಒಂದು ಪಾರಸೀ ಕೈಗಾರಿಕಾ ಕುಟುಂಬದ, ಒಬ್ಬ ಸಿಖ್ ಹೊಟೇಲ್ ಉದ್ಯಮಿಯ ಆಸ್ತಿಗಳ ಮೇಲೆ ಮತ್ತು ಯೆಹೂದ್ಯರ ಒಡೆತನದ ಮನೆಯ ಮೇಲೆ ಎಂಬುದನ್ನು ಕೂಡಾ ಗಮನಿಸದಿರಲು ಸಾಧ್ಯವೇ?

ಇದು ಭಾರತದ ವೈವಿಧ್ಯತೆಯ ಮೇಲೆ ಮಾಡಿದ ದಾಳಿಯಲ್ಲವೇ? ಭಯೋತ್ಪಾದನೆಯನ್ನು ಸೋಲಿಸಬೇಕಾದರೆ ಭಾರತದಲ್ಲಿನ ವೈವಿಧ್ಯತೆಯಲ್ಲಿ ಏಕತೆಯನ್ನು ಪ್ರದರ್ಶಿಸಬೇಕೇ ಹೊರತು ಬಿಜೆಪಿ ಪ್ರಯತ್ನಿಸುತ್ತಿರುವಂತೆ ಹಿಂದು-ಮುಸ್ಲಿಂ ವಿಭಜನೆಯನ್ನು ಆಳಗೊಳಿಸುವುದಲ್ಲ. ಇದು ಈ ಮೇಲೆ ಹೇಳಿದಂತೆ ಭಾರತವನ್ನು ಅಸ್ಥಿರಗೊಳಿಸಲು ಭಯೋತ್ಪಾದಕರಿಗೇ ನೆರವಾಗುವ ಕೃತ್ಯ, ಭಯೋತ್ಪಾದನೆಯ ಗಂಭೀರ ಅಪಾಯವನ್ನು ಐಕ್ಯತೆಯಿಂದ ಎದುರಿಸಬೇಕಾಗಿರುವಾಗ ದೇಶವನ್ನು ದುರ್ಬಲಗೊಳಿಸುವ ಪ್ರಯತ್ನ. ○

ಹೀಗೊಂದು ದಲಿತ ಸಬಲೀಕರಣದ ಒತ್ತಾಯ...

"ನಮ್ಮಂಗೆ ನಮ್ಮ ಮಕ್ಳು ಜೀವ್ನ ಸವೆಸೋದು ಬೇಡ, ವಿದ್ಯ ಕಲಿತು ನಾಲ್ಕು ಕಾಸು ಸಂಪಾದಿಸ್ಲಿ ಅಂತ ಕಾಲೇಜಿಗೆ ಹಾಕಿದ್ದೆ ತಪ್ಪೇ, ತಲೆ ಎತ್ತಿ ನಮ್ಮ ಹುಡುಗ್ರು ಓಡಾಡೊದು ತಪ್ಪೇ ಆಗಿದೆ ನೋಡಿ ಸಾಮಿ" ಈ ಮಾತು ಕೊಪ್ಪಳ ಜಿಲ್ಲೆಯ ಗಂಗಾವತಿಯಿಂದ ಬಂದಿದ್ದ 50ರ ವಯಸ್ಸಿನ ದಲಿತ ಮಹಿಳೆಯ ಎದೆಯಾಳದ ಅನಿಸಿಕೆ. ಅದನ್ನು ಆಕೆ ಭೀತಿಯಿಂದಲೇ ಹೊರಹಾಕುತ್ತಿದ್ದಳು.

"ಒಂಭತ್ತು ವರ್ಷದ ಹಿಂದೆ ಚಿಂತಾಮಣಿ ತಾಲ್ಲೂಕಿನ ಕಂಬಾಲಪಲ್ಲಿಯುಲ್ಲಿ 7 ಜನ ನಮ್ಮ ಅಣ್ಣ-ತಮ್ಮಂದಿರನ್ನು ಸುಟ್ಟಿದ್ದರು. ದೆಹಲಿಯಿಂದ ಸೋನಿಯಾಗಾಂಧಿ ಸೇರ್ಕಂಡು ದೊಡ್ಡೋರೆಲ್ಲಾ ಬಂದು ಹೋಗಿದ್ದರು. ಕೇಂದ್ರ ಸರ್ಕಾರವೂ ಸೇರ್ಕಂಡು ಕಂಬಾಲಪಲ್ಲಿಯ ಪುನರ್ ವಸತಿ ಹಾಗೂ ಜೀವನದ ಭದ್ರತೆಗಾಗಿ ರೂ.4 ಕೋಟಿ ಪರಿಹಾರ ಘೋಷಿಸಲಾಗಿತ್ತು. ಇದರಲ್ಲಿ ಗೌರ್ಮೆಂಟ್ ಲೆಕ್ಕ ಕೊಡೋದು ರೂ.1 1/2 ಕೋಟಿಗೆ ಮಾತ್ರ. ಉಳಿದಿದ್ದು, ಎಲ್ಲಿ ಹೋಯಿತು ಅಂತ ಗೊತ್ತಿಲ್ಲ ಸಾರ್' ಇದು ತಂದೆ-ತಾಯಿಗಳನ್ನು ಕಳೆದುಕೊಂಡಿರುವ ದಲಿತ ಯುವಕನ ಅಳಲು.

'ನಮ್ಮೂರ ಬಸವಕಲ್ಯಾಣ ತಾಲ್ಲೂಕಿನ ಚಿಟ್ಟ ಗ್ರಾಮದವರು ಬಾಯಿಗೆ ಮೂತ್ರ ಹೊಯ್ದಿದ್ದಾರೆ. ನಮ್ಮ ಜನ ಸತ್ತರೇ ಹೂಳಕ್ಕೆ ಜಾಗ ಇಲ್ಲ ಸಾಮಿ. ಮೇಲ್ಜಾತಿಯವರಿಗೆ ಜಮೀನು ಇದೆ. ನಾವು ಹುಟ್ಟಿದ್ರು ಜಾಗ ಇಲ್ಲ ಸತ್ತ ಮೇಲೂ ಹೂಳಕ್ಕ ಜಾಗ ಇಲ್ಲ ಸಾಮಿ' ಹೀಗೆ ಒಬ್ಬೊಬ್ಬರನ್ನು ಮಾತಾಡಿಸಲು ಪ್ರಯತ್ನಪಟ್ಟಾಗ ದಲಿತರ ಮೇಲೆ ನಡೆಯುತ್ತಿರುವ ಕ್ರೂರ-ಅನಾಗರೀಕ ದೌರ್ಜನ್ಯಗಳ ಸ್ವರೂಪಗಳು ಧರಣಿಯಲ್ಲಿ ಭಾಗವಹಿಸಿದ್ದ ದಲಿತರ ಬಾಯಿಂದ ಹೊರ ಹೊಮ್ಮಿದವು. ಸಿಪಿಐ(ಎಂ) ರಾಜ್ಯ ಸಮಿತಿಯ ನೇತೃತ್ವದಲ್ಲಿ ಆಯೋಜಿಸಿದ್ದ ದಲಿತರ ಮೇಲಿನ ದೌರ್ಜನ್ಯಗಳ ವಿರುದ್ಧ ಮುಖ್ಯಮಂತ್ರಿ ಮನೆ ಮುಂದಿನ ಧರಣಿಯಲ್ಲಿ ಅವರು ಪಾಲ್ಗೊಂಡಿದ್ದರು.

ಬಿಜೆಪಿ ಸರ್ಕಾರ ಅಧಿಕಾರಕ್ಕೇರಿದ ಮೇಲೆ



ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚುತ್ತಿವೆ ಎಂಬುದಕ್ಕೆ ಮಾಗಡಿ ತಾಲ್ಲೂಕಿನ ಲಕ್ಕಸಂದ್ರ ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ಹಾತೊರೆದ ದಲಿತ ಮಹಿಳೆಯನ್ನು ಸರ್ವಣೀಯರ ಅವಮಾನಿಸಿ ಆತ್ಮಹತ್ಯೆಗೆ ದೂಡಿರುವುದು. ಇಂತಹ ಪ್ರಕರಣಗಳು ರಾಜ್ಯಾದ್ಯಂತ ಹೆಚ್ಚುತ್ತಿವೆ. ದಲಿತರ ಅಭಿವೃದ್ಧಿಗಾಗಿ ಮೀಸಲಿಟ್ಟ ವಿಶೇಷ ಘಟಕ ಯೋಜನೆ ಅಡಿಯಲ್ಲಿನ ಕೋಟಿಗಟ್ಟಲೇ ಹಣವನ್ನು ಇನ್ನಿತರ ಸಾಮಾನ್ಯ ಯೋಜನೆಗಳ ಅನುಷ್ಠಾನಕ್ಕೆ ಬಳಸಿಕೊಳ್ಳಲಾಗುತ್ತಿದೆ. ಪಟ್ಟಭದ್ರ ಕೋಮುವಾದಿ ಬಿಜೆಪಿ ಸರ್ಕಾರ ದಲಿತರ-ಅಲ್ಪಸಂಖ್ಯಾತರ ದನದ ಮಾಂಸ ಆಹಾರದ ಹಕ್ಕಿನ ಮೇಲಿನ ದಾಳಿಯನ್ನು ವಿರೋಧಿಸಿ, ದಲಿತ ಮಾನವ ಅಭಿವೃದ್ಧಿಗೆ ಕೇಂದ್ರ-ರಾಜ್ಯ ಸರ್ಕಾರವನ್ನು ಅನುದಾನದ ಹಣವನ್ನು ಒಂದೇ ಇಲಾಖೆ ಅಡಿಗೆ ತರಬೇಕು. ಜೊತೆಗೆ ಈಗಿರುವ ರೂ.410 ಕೋಟಿಯನ್ನು 600 ಕೋಟಿಗೆ ಹೆಚ್ಚಿಸಬೇಕೆಂಬ ಹಲವಾರು ಬೇಡಿಕೆಗಳ ಆಧಾರದಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ನೇತೃತ್ವದಲ್ಲಿ ಡಿಸೆಂಬರ್ 29, 2008ರಂದು ಬೆಂಗಳೂರು ರೈಲ್ವೆ ನಿಲ್ದಾಣದಿಂದ ರ್‍ಯಾಲಿ ನಡೆಸಿ ಮುಖ್ಯಮಂತ್ರಿ ಮನೆ ಎದುರು ಧರಣಿ ಯೋಜಿಸಲಾಗಿತ್ತು. ಪ್ರತಿಭಟನೆ ನಡೆಸಲು ಮುಂದಾದ ಜನರನ್ನು ಪೋಲೀಸರು ಮಾರ್ಗ ಮಧ್ಯೆ ತಡೆದರು. ನಂತರ ಬೆಂಗಳೂರು ನಗರ ಬಸವೇಶ್ವರ ಸರ್ಕಲ್ ಹತ್ತಿರದಲ್ಲೇ ಸಭೆ ನಡೆಯಿತು. ಬಸವೇಶ್ವರ ಸರ್ಕಲ್‌ನಲ್ಲಿ ಸಮಾವೇಶ ಗೊಂಡ ಪ್ರತಿಭಟನಾಕಾರರನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿಜೆಕೆ ನಾಯರ್ ಮಾತಾಡಿದರು. ಸ್ವಾತಂತ್ರ್ಯ ಪೂರ್ವದಿಂದಲೂ ದಲಿತರ ಸಮಗ್ರ ಏಳ್ಗೆಗೆ ಶ್ರಮಿಸದ ಕಾಂಗ್ರೆಸ್, ದಲಿತರ ಇಂತಹ ಹೀನಾಯ ಸ್ಥಿತಿಗೆ ಕಾರಣವಾಗುತ್ತಿರುವ ಬಿಜೆಪಿ ಸೇರಿದಂತೆ ದಲಿತರ ಶೋಷಣೆಯ ವಿರುದ್ಧ ಬಹಳಷ್ಟು ಬಂಡವಾಳಶಾಹಿ ಪಕ್ಷಗಳು ನಿಂತಿಲ್ಲ. ಸಿಪಿಐ(ಎಂ) ಪಕ್ಷಗಳು ಮುಂದಿನ ದಿನಗಳಲ್ಲಿ ದಲಿತರ ದೌರ್ಜನ್ಯಗಳ ವಿರುದ್ಧ ಹಾಗೂ ಸಮಗ್ರ ಅಭಿವೃದ್ಧಿಗಾಗಿ ಯೋಜನಾಬದ್ಧ ಹೋರಾಟಗಳನ್ನು ರೂಪಿಸಲಿದೆ. ದಲಿತ ಬಾಂಧವರು ಇನ್ನಾದರೂ ನೈಜ ಹೋರಾಟ ನಡೆಸುವ ಸಿಪಿಐ(ಎಂ) ಜೊತೆ ಸಮ್ಮಿಲನಗೊಳ್ಳಬೇಕೆಂದರು.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆಯವರ ನೇತೃತ್ವದ ನಿಯೋಗ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿತು. ದಲಿತ ಸಬಲೀಕರಣದ ವಿವಿಧ ಬೇಡಿಕೆಗಳನ್ನು ಕೇಳಿಕೊಂಡ ಬಿ.ಎಸ್.ಯಡಿಯೂರಪ್ಪ ಕೊನೆಗೆ ತಮ್ಮ ಸರ್ಕಾರದ ಭಾಗ್ಯಲಕ್ಷ್ಮಿ ಯೋಜನೆಯ ಕುರಿತು ಭಾಷಣ ಬಿಗಿದಿದ್ದಾರೆ. ದೇವದಾಸಿಯರಿಗೆ ಮಾಶಾಸನ ಹೆಚ್ಚಿಸಿ ಎಂದರೆ ಕೊಡುತ್ತಿರುವುದನ್ನು ನಿಲ್ಲಿಸಬೇಕಾಗಬಹುದು, ಹಣಕಾಸಿನ ತೊಂದರೆ ಎಂದಿದ್ದಾರೆ. ಕೊನೆಗೆ ನಿಯೋಗವು ದಲಿತರ ಬೇಡಿಕೆಗಳಿಗೆ ಸೂಕ್ತವಾಗಿ ಸ್ಪಂದಿಸದಿದ್ದರೆ ಹೋರಾಟ ತೀವ್ರಗೊಳ್ಳಲಿದೆ ಎಂದು ಹೇಳಿ ಬಂದಿದೆ.

ಬಿ.ರಾಜಶೇಖರಮೂರ್ತಿ

ಭಯೋತ್ಪಾದಕ ದಾಳಿಗಳ ಹಿಂದೆ - ಮುಂದೆ

ಪುಟ 9 ರಿಂದ

ನಡೆಸಲು ಅವರಿಗೆ ಕಾರಣಗಳಿಲ್ಲ. ಒಂದೇ ಕಾಲದಲ್ಲಿ ನಡೆದಿರುವ ಈ ಘಟನೆ ಭಯೋತ್ಪಾದಕರು, ಅವರು ಇಸ್ಲಾಮಿಗಳಾಗಲೀ, ಇಸ್ಲಾಮ್- ವಿರೋಧಿಗಳಾಗಲೀ, ಶಾಂತಿಪ್ರಿಯ ಜನಗಳಿಗೆ, ಸಾಂವಿಧಾನಿಕ ಆಡಳಿತಕ್ಕೆ ಮತ್ತು ಕಾನೂನಿನ ಆಳ್ವಿಕೆಗೆ ಒಂದು ಬೆದರಿಕೆಯೇ ಎಂಬುದಕ್ಕೆ ಅತ್ಯುತ್ತಮ ಉದಾಹರಣೆ. ಎನ್‌ಎಸ್‌ಜಿ ಕಮಾಂಡೋಗಳು, ಸೇನಾ ಮತ್ತು ನೌಕಾಪಡೆಯ ಸಿಬ್ಬಂದಿ ಪರಿಣಾಮಕಾರಿ ಕ್ರಮ ಕೈಗೊಳ್ಳದಿದ್ದರೆ ಜೀವಹಾನಿ ಮತ್ತು ಆಸ್ತಿ-ಪಾಸ್ತಿಗಳ ಹಾನಿ ಇನ್ನಷ್ಟು ಹೆಚ್ಚಿರುತ್ತಿತ್ತು. ಬೆಂಗಳೂರಿನ ಮೇಜರ್ ಸಂದೀಪ್ ಉನ್ನಿಕೃಷ್ಣನ್‌ರವರ ಅತ್ಯುನ್ನತ ಬಲಿದಾನ ಕೂಡಾ ವೈಶಿಷ್ಟ್ಯಪೂರ್ಣ.

ಬೆಂಕಿಗೆ ತುಪ್ಪ ಸುರಿಯುವವರು

ಹಿಂದುತ್ವ ಶಕ್ತಿಗಳು ಸಮುದ್ರ ಮಾರ್ಗದಿಂದ ಮುಂಬೈಯ ಮೇಲಿನ ದಾಳಿಗಳನ್ನು ತಡೆಯುವಲ್ಲಿ ಭಾರತ ಸರಕಾರದ ವಿಫಲತೆಯತ್ತ ತೋರಿಸುತ್ತಾ ಪರಿಸ್ಥಿತಿಯ ಪ್ರಯೋಜನ ಗಿಟ್ಟಿಸಲು ಪ್ರಯತ್ನಿಸುತ್ತಿವೆ. ಆದರೆ ಸಂಸತ್ತಿನ ಮೇಲೆ ದಾಳಿಯನ್ನು ತಡೆಯುವಲ್ಲಿ ತಮ್ಮ ಸರಕಾರವೂ ವಿಫಲವಾದುದನ್ನು ಸಮರ್ಥಿಸಿಕೊಳ್ಳಲಾರದೆ ಆ ಘಟನೆಯಲ್ಲಿ ಶಿಕ್ಷೆಗೊಳಗಾದ ಅಫ್ಜಲ್‌ನನ್ನು ನೇಣಿಗೇರಿಸುವ ಭರವಸೆ ಕೊಡುತ್ತಾ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಈಗ ಅವು ಮುಂಬೈ ದಾಳಿಗಳ ರಾಜಕೀಯ ಲಾಭ ಪಡೆಯುವ ಪ್ರಯತ್ನದಲ್ಲಿವೆ. ಇದು ಕಾಂಗ್ರೆಸ್ ಸರಕಾರದ ವಿಫಲತೆ ಎಂದು ರಾಗ ಹಾಕುವಾಗ ಈ ಹಿಂದುತ್ವ ಶಕ್ತಿಗಳು ತಮ್ಮ ರಾಜಕೀಯ ಮುನ್ನಡೆಗೆ ಬಹುಸಂಖ್ಯಾತರ ಧರ್ಮವನ್ನು ಬಳಸುವ ಅವರ ಸಿದ್ಧಾಂತ ಮತ್ತು ಕೃತ್ಯಗಳು ಮುಸ್ಲಿಂ ಮೂಲಭೂತವಾದದ ಸ್ವರೂಪದಲ್ಲಿ ಬರುತ್ತಿರುವ ಪ್ರತಿಕ್ರಿಯೆಗೆ ತುಪ್ಪ ಸುರಿಯುತ್ತಿವೆ ಎಂಬುದನ್ನು ಅರಿಯುವಲ್ಲಿ ಅವರು ವಿಫಲರಾಗಿದ್ದಾರೆ. ಇದೀಗ ಮುಂಬೈ ದಾಳಿಗಳು ಮತ್ತು ಅಮೆರಿಕಾದ ವಿರುದ್ಧ 9/11ರ ದಾಳಿಗಳಿಗಿರುವ ವ್ಯತ್ಯಾಸ.

ಸಾಮ್ರಾಜ್ಯಶಾಹಿ ಶಕ್ತಿಗಳು ಮತ್ತು ಕೋಮುವಾದ/ಮೂಲಭೂತವಾದದ ನಡುವಿನ ಸಂಬಂಧಗಳನ್ನು ಕಾರ್ಮಿಕ ವರ್ಗ ಅರ್ಥ ಮಾಡಿಕೊಳ್ಳಬೇಕು. ಇದು ಭಾರತದಲ್ಲಿ ಮತ್ತು ವಿಶ್ವದೆಲ್ಲೆಡೆ ಜನಗಳ ಅಸ್ತಿತ್ವಕ್ಕೆ ಬೆದರಿಕೆ ಒಡ್ಡಿದೆ. ಹಿಂದುತ್ವ ಶಕ್ತಿಗಳು ಪ್ರತಿಪಾದಿಸುವ ಧಾರ್ಮಿಕ ವೇಷದ ದೇಶಭಕ್ತಿಯಾಗಲೀ ಅಥವಾ ತಮ್ಮ ಧರ್ಮದ ಹಿತಾಸಕ್ತಿಗಳಿಗೆಂದು ಕೃತ್ಯಗಳನ್ನು ನಡೆಸುವ ಫಿದಾಯಿಗಳಾಗಲೀ, ಇಬ್ಬರೂ ತಮ್ಮ ಕೃತ್ಯಗಳು ಜನಗಳ ಹಿತಾಸಕ್ತಿಗಳಿಗೆ ಕೇಡುಂಟು ಮಾಡುತ್ತವೆ ಎಂದು ಅರಿಯುವಲ್ಲಿ ವಿಫಲರಾಗಿದ್ದಾರೆ.

ಕಾರ್ಮಿಕ ವರ್ಗದಿಂದ ಮಾತ್ರ ಸಾಧ್ಯ

ವಿಶ್ವದ ಹಣಕಾಸು ಬಂಡವಾಳ ಪ್ರತಿಪಾದಿಸಿದ ಉದಾರೀಕರಣ/ಖಾಸಗೀಕರಣ /ಜಾಗತೀಕರಣ ಈಗಾಗಲೇ ಕುಸಿದಿದೆ. ಈ ಸಾಮ್ರಾಜ್ಯಶಾಹೀ ಪಥ್ಯಕ್ಕೆ ಪ್ರತಿಯಾಗಿ ಕಾರ್ಮಿಕ ವರ್ಗ ಮುಂದಿಟ್ಟ ಪರ್ಯಾಯ ಮಾರ್ಗ ಮಾತ್ರವೇ ಜನಗಳನ್ನು ಸಂಕಟಗಳಿಂದ ಪಾರು ಮಾಡಬಲ್ಲುದು. ಸಾಮ್ರಾಜ್ಯಶಾಹಿ ದೇಶಗಳ ಆದೇಶಗಳನ್ನು ಪ್ರತಿರೋಧಿಸುವಲ್ಲಿ ಸ್ವತಂತ್ರ ದೇಶಗಳ, ವಿಶೇಷವಾಗಿ ಭಾರತದಂತಹ ದೇಶಗಳ ಜನಗಳ ಐಕ್ಯತೆ ನಿರ್ಣಾಯಕವಾಗುತ್ತದೆ. ಸಾಮ್ರಾಜ್ಯಶಾಹಿ-ವಿರೋಧ ಮತ್ತು ರಾಷ್ಟ್ರೀಯ ದೇಶಪ್ರೇಮ ಇವೆರಡನ್ನು ಯಾವುದೇ ಸಂದರ್ಭದಲ್ಲಿ, ವಿಶೇಷವಾಗಿ ಈಗಿನ ಸಂದರ್ಭದಲ್ಲಿ ಪ್ರತ್ಯೇಕಿಸಲು ಸಾಧ್ಯವಿಲ್ಲ. ವಸಾಹತುಶಾಹಿ-ವಿರೋಧಿ ಹೋರಾಟಗಳ ಕಾಲದಲ್ಲಿ ದುಡಿಯುವ ಜನಗಳ ಮತ್ತು ಅವರ ಶೋಷಕರ ಹಿತಾಸಕ್ತಿಗಳು ಒಂದೇ ಆಗಿದ್ದಿರಬಹುದು, ಆದರೆ ಈಗ ಅವು ಒಂದೇ ಆಗಿಲ್ಲ.

ಜಾಗತೀಕರಣದ ಈ ಅವಧಿಯಲ್ಲಿ ಸಾಮ್ರಾಜ್ಯಶಾಹಿ ದೇಶಗಳ ಮತ್ತು 'ಅಭಿವೃದ್ಧಿಶೀಲ' ಅಥವಾ ಇನ್ನೂ ಅಭಿವೃದ್ಧಿ ಹೊಂದಿರದ ದೇಶಗಳ ಆಳುವ ವರ್ಗಗಳ ನಡುವಿನ ಅಂತರ ಬಹಳ ತೆಳುವಾಗಿದೆ. ಅವೆಲ್ಲಾ ಅಂದರೆ ಸಾಮ್ರಾಜ್ಯಶಾಹಿ ದೇಶಗಳ ಆಳುವ ವರ್ಗಗಳು ಮತ್ತು ಅಭಿವೃದ್ಧಿಶೀಲ ದೇಶಗಳ ಆಳುವ ವರ್ಗಗಳು ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳನ್ನು ಅನುಸರಿಸುವಲ್ಲಿ ಒಂದಾಗಿವೆ. ಅದೇ ರೀತಿ ಉದಾರೀಕರಣ ಮತ್ತು ಖಾಸಗೀಕರಣವನ್ನು ಪ್ರತಿರೋಧಿಸುವಲ್ಲಿ ವಿಶ್ವಾದ್ಯಂತ ಕಾರ್ಮಿಕ ವರ್ಗ ಒಂದಾಗಿದೆ.

ಒಂದು ಐಕ್ಯ, ದೇಶಪ್ರೇಮಿ ಮತ್ತು ಹೋರಾಟಶೀಲ ಜನತೆ ಮಾತ್ರವೇ ನಮ್ಮ ಸಂವಿಧಾನದ ಪೀಠಿಕೆಯಲ್ಲಿ ಹೇಳಿರುವಂತಹ, ಅಂದರೆ ಒಂದು ಸಾರ್ವಭೌಮ, ಪ್ರಜಾಸತ್ತಾತ್ಮಕ ಮತ್ತು ಸಮಾಜವಾದಿ ಮಾದರಿಯ ಗಣತಂತ್ರದ ನೀತಿಗಳ ಆಧಾರದಲ್ಲಿ ತಮಗಾಗಿ ಒಂದು ದೇಶವನ್ನು ಕಟ್ಟಲು ಸಾಧ್ಯ. ಭಾರತದ ಕಾರ್ಮಿಕ ವರ್ಗ ಮಾತ್ರವೇ ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಮತ್ತು ಸಮಾಜವಾದದ ಭರವಸೆ ನೀಡಿ ಜನಗಳ ಹಿತಾಸಕ್ತಿಗಳನ್ನು ಅತ್ಯುತ್ತಮ ರೀತಿಯಲ್ಲಿ ಈಡೇರಿಸಲು ಸಾಧ್ಯ.

ಇದೇ ಕಾರಣಕ್ಕೆ ಕೋಮುವಾದಿ ಪಕ್ಷ ಮತ್ತು ಭಯೋತ್ಪಾದಕರು ಇಬ್ಬರೂ ಕಾರ್ಮಿಕ ವರ್ಗದ ರಾಜಕೀಯಕ್ಕೆ ವಿರುದ್ಧವಾಗಿದ್ದಾರೆ. ಕಾರ್ಮಿಕ ವರ್ಗ ಈ ರಾಜಕೀಯ ವಾಸ್ತವತೆಯನ್ನು ಉಪೇಕ್ಷಿಸಿದರೆ ತನ್ನ ವರ್ಗ ಐಕ್ಯತೆಯೇ ಬುಡಮೇಲಾಗುವ ಬೆದರಿಕೆಯನ್ನು ಎದುರಿಸಬೇಕಾಗುತ್ತದೆ. ಹೀಗೆ ಕೋಮುವಾದ ಮತ್ತು ಭಯೋತ್ಪಾದನೆ ಇವೆರಡರ ವಿರುದ್ಧವೂ ಒಟ್ಟಿಗೇ ಹೋರಾಡುವುದು ಕಾರ್ಮಿಕ ವರ್ಗದ ಆಂದೋಲನದ ತಕ್ಷಣದ ಅಗತ್ಯ ಆಗಿಬಿಟ್ಟಿದೆ. ಇಡೀ ಡಿಸೆಂಬರ್ ತಿಂಗಳನ್ನು ಈ ಮಹತ್ವದ ಕರ್ತವ್ಯವನ್ನು ನಿರ್ವಹಿಸಲು ಮುಡಿಪಿಡುವ ಮೂಲಕ ನಾವು ಆರಂಭಿಸೋಣ.

ಶರತ್‌ಚಂದ್ರ

ವರ್ಗ ಸಂಘರ್ಷದ ಮುನ್ನೋಟದ ಈ ಸಭೆ

ಬ್ರೆಜಿಲ್‌ನಲ್ಲಿ ಕಮ್ಯೂನಿಸ್ಟ್ ಪಕ್ಷಗಳ ಹತ್ತನೇ ಅಂತರ್ರಾಷ್ಟ್ರೀಯ ಸಭೆಯೊಂದು ನಡೆಯಿತು. ಏನಿದರ ವಿಶೇಷ ?

ಬ್ರೆಜಿಲ್ ನ ಸಾವೋ ಪಾಲೋ ಎಂಬ ನಗರದಲ್ಲಿ ಮಹತ್ವದ ಕಮ್ಯುನಿಸ್ಟ್ ಪಕ್ಷಗಳ 10 ನೇ ಅಂತರ್ರಾಷ್ಟ್ರೀಯ ಸಭೆ ಜರುಗಿತು. ಈ ಸಭೆಯಲ್ಲಿ 54 ದೇಶಗಳಿಂದ ಬಂದ 65 ಕಮ್ಯನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳು ಭಾಗವಹಿಸಿದವು. ಇದು ಮೊದಲ ಬಾರಿಗೆ ಲ್ಯಾಟಿನ್ ಅಮೆರಿಕದಲ್ಲಿ ನಡೆದಿದ್ದು ಅಲ್ಲಿನ 13 ದೇಶಗಳಿಂದ 15 ಕಮ್ಯನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳು ಭಾಗವಹಿಸಿದವು. ಲ್ಯಾಟಿನ್ ಅಮೆರಿಕದಿಂದ ಪಾಲ್ಗೊಳ್ಳುವಿಕೆಯ ಈ ಸಂಖ್ಯೆ 1998 ರಲ್ಲಿ ಅಥೇನ್ಸ್ ನಲ್ಲಿ ಆರಂಭವಾದ ಈ ಸಭೆಗಳಲ್ಲೇ ಅತಿ ದೊಡ್ಡದು. ಸಭೆಗೆ ಬ್ರೆಜಿಲ್ ಅಧ್ಯಕ್ಷ ಲುಲಾ ಶುಭ ಕೋರಿ ಸಂದೇಶ ಕಳಿಸಿದ್ದರು.

ಅಜೆಂಡಾ ಸಮಿತಿ ಮೊದಲೇ ನಿರ್ಧರಿಸಿದಂತೆ ಸಭೆ ಚರ್ಚೆಗೆ ತೆಗೆದುಕೊಂಡ ನಾಲ್ಕು ಪ್ರಮುಖ ವಿಷಯಗಳು - ಹದಗೆಡುತ್ತಿರುವ ರಾಷ್ಟ್ರೀಯ, ಸಾಮಾಜಿಕ, ಪರಿಸರ ಮತ್ತು ಸಾಮ್ರಾಜ್ಯಶಾಹಿಯ ಆಂತರಿಕ ವೈರುಧ್ಯಗಳು ಮತ್ತು ಸಮಸ್ಯೆಗಳು; ಶಾಂತಿ, ಪ್ರಜಾಪ್ರಭುತ್ವ, ಸಾರ್ವಭೌಮತೆ, ಪ್ರಗತಿ ಮತ್ತು ಸಮಾಜವಾದಕ್ಕಾಗಿ ಹೋರಾಟಗಳು; ಕಮ್ಯನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ ಐಕ್ಯ ಕಾರ್ಯಾಚರಣೆ; ಅಂತರ್ರಾಷ್ಟ್ರೀಯ ಚೌಕಟ್ಟಿನಲ್ಲಿ ಹೊಸ ಬದಲಾವಣೆಗಳು.ಆದರೆ ಸ್ವಾಭಾವಿಕ ವಾಗಿಯೇ ಪ್ರಸಕ್ತ ಅಭೂತಪೂರ್ವ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ಚರ್ಚೆಯ ದೊಡ್ಡ ಪಾಲು ತೆಗೆದುಕೊಂಡಿತು. ಸಭೆ ಎರಡು ನಿರ್ಣಯಗಳನ್ನು ಪಾಸು ಮಾಡಿತು. ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟು ಬಗ್ಗೆ ಒಂದು. ಇದನ್ನು ಸಾವೋ ಪಾಲೋ ಘೋಷಣೆ ಎಂದೂ ಕರೆಯಲಾಗಿದೆ. ಲ್ಯಾಟಿನ್ ಅಮೆರಿಕದ ಪ್ರಸ್ತುತ ಪರಿಸ್ಥಿತಿ ಮತ್ತು ಕಮ್ಯನಿಸ್ಟ್ ಪಕ್ಷಗಳ ಸೌಹಾರ್ದ ಬೆಂಬಲ ಬಗ್ಗೆ ಇನ್ನೊಂದು. (ನಿರ್ಣಯದ ಪ್ರಮುಖ ಅಂಶಗಳು ಬಾಕ್ಸ್ ನಲ್ಲಿ ಇವೆ.)



ಸೀತಾರಾಮ ಯೆಚೂರಿ ಸಭೆಯಲ್ಲಿ

ಚರ್ಚೆಯಲ್ಲಿ ಸೋವಿಯೆಟ್ ವಿಘಟನೆ ನಂತರ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ವಿರುದ್ಧ ಸೈದ್ಧಾಂತಿಕ ದಾಳಿ ನಡೆಸಿ ಸಮಾಜವಾದಿ ಆದರ್ಶದ ಪ್ರಸಾರ ಮಾಡಲು ಅತ್ಯಂತ ಅನುಕೂಲ ವಾತಾವರಣ ಇದೆ ಎಂಬ ಸರ್ವಸಮ್ಮತಿ ಮೂಡಿತು. ಈಗಿನ ಜಾಗತಿಕ ಬಂಡವಾಳ ಶಾಹಿ ಬಿಕ್ಕಟ್ಟು ವ್ಯವಸ್ಥೆಯ ಬಿಕ್ಕಟ್ಟು. ಆದರೆ ಅದು ತನ್ನಿಂತಾನೇ ಬಂಡವಾಳ ಶಾಹಿಯ ಕೊನೆ ಅಲ್ಲ. ಆದ್ದರಿಂದ ಬಂಡವಾಳಶಾಹಿಗೆ ರಾಜಕೀಯ ಬದಲಿ ರೂಪಿಸಲು ವರ್ಗ ಮತ್ತು ಸಾಮೂಹಿಕ ಹೋರಾಟಗಳನ್ನು ಪ್ರತಿ ದೇಶದಲ್ಲಿ ಚುರುಕು ಗೊಳಿಸಬೇಕು. ಈ ಹಿನ್ನೆಲೆಯಲ್ಲಿ ಸಭೆ ಬರಿಯ ನಿರ್ಣಯಗಳನ್ನು ಮೀರಿ, ಜಂಟಿ ಜಾಗತಿಕ ಪ್ರತಿಭಟನೆ ಕಾರ್ಯಾಚರಣೆ ಮೂಲಕ ಕಮ್ಯುನಿಸ್ಟ್ ಶಕ್ತಿ ಸೃಷ್ಟಿಸಬೇಕು - ಎಂದು ನಿರ್ಧರಿಸಿದ್ದು ಸಭೆಯ ಅತ್ಯಂತ ಪ್ರಮುಖ ವಿಶೇಷವಾಗಿತ್ತು. ಲ್ಯಾಟಿನ್ ಅಮೆರಿಕದ ಅನುಭವ ಇಂತಹ ಕಾರ್ಯಾಚರಣೆಯ ಮಹತ್ವ ಮತ್ತು ಸಾಧ್ಯತೆ ತೋರಿಸಿದೆ ಎನ್ನಲಾಯಿತು.



ಮುಂದಿನ ವರ್ಷ ಬರಲಿರುವ ಕ್ಯೂಬಾ ಕ್ರಾಂತಿಯ 50 ನೇ ವಾರ್ಷಿಕೋತ್ಸವವನ್ನು ಜಾಗತಿಕ ಸಂಯೋಜನೆ ಜತೆ ಆಚರಿಸಬೇಕು. ಏಪ್ರಿಲ್ 2009 ರಲ್ಲಿ ಬರಲಿರುವ ನಾಟೋ 60 ನೆ ವಾರ್ಷಿಕದ ಸಂದರ್ಭದಲ್ಲಿ ಭಾರೀ ಜಾಗತಿಕ ಪ್ರತಿಭಟನೆ ಸಂಘಟಿಸಬೇಕು ಆ ಮೂಲಕ ಕಮ್ಯುನಿಸ್ಟ್ ಪಕ್ಷಗಳು ಮತ್ತು ಸಾಮ್ರಾಜ್ಯಶಾಹಿ-ವಿರೋಧಿ ಚಳುವಳಿಗಳ ನಡುವೆ ಸೌಹಾರ್ದ ಮತ್ತು ಐಕ್ಯತೆ ಗಟ್ಟಿಯಾಗುವುದನ್ನು ನಿರೀಕ್ಷಿಸಬಹುದು. ಮುಂದಿನ ವರ್ಷದ 11 ನೇ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ ಸಭೆ ಏಶ್ಯಾದಲ್ಲಿ (ಅದರಲ್ಲೂ ಬಾರತದಲ್ಲಿ) ನಡೆಯುವ ನಿರೀಕ್ಷೆ ಇದೆ.

ಸಮಾಜವಾದವೇ ಬದಲಿ - ಸಾವೋ ಪಾಲೋ ಘೋಷಣೆಯ ಕೆಲವು ಭಾಗಗಳು

... ಪ್ರಸ್ತುತ ಬಿಕ್ಕಟ್ಟು, ಬಂಡವಾಳಶಾಹಿ ವ್ಯವಸ್ಥೆಯ ಆಳವಾದ ಆಂತರಿಕ ಬಿಕ್ಕಟ್ಟಿನ ವ್ಯಕ್ತರೂಪ. ಇದು ಬಂಡವಾಳಶಾಹಿಯ ಚಾರಿತ್ರಿಕ ಮಿತಿ ಮತ್ತು ಅದರ ಕ್ರಾಂತಿಕಾರಿ ಪದಚ್ಯುತಿಯ ಅಗತ್ಯವನ್ನು ತೋರಿಸುತ್ತಿದೆ. ಈ ಬಿಕ್ಕಟ್ಟು ಚರಿತ್ರೆಯ ಅನುಭವ ತೋರಿಸುವಂತೆ ಸಾಮಾಜಿಕ ಮತ್ತು ಪ್ರಜಾಸತ್ತೆಯ ಹಿನ್ನಡೆಯ ಅಗಾಧ ಬೆದರಿಕೆಯನ್ನು ಸಹ ಒಳಗೊಂಡಿದೆ. ಇದನ್ನು ಬಳಸಿ ಬೆಳೆಯಬಹುದಾದ ಸರ್ವಾಧಿಕಾರಿ ಮತ್ತು ಮಿಲಿಟರಿ ಚಳುವಳಿಗಳ ಬಗ್ಗೆ, ಕಮ್ಯುನಿಸ್ಟ್ ಪಕ್ಷಗಳು ಪ್ರಜಾಸತ್ತಾತ್ಮಕ ಮತ್ತು ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳು ಎಚ್ಚರಿಕೆ ವಹಿಸಬೇಕಾಗಿದೆ. ... ...

... ತೀವ್ರವಾಗುತ್ತಿರುವ ವರ್ಗ ಸಂಘರ್ಷದ ಅಂತರ್ರಾಷ್ಟ್ರೀಯ ಪರಿಸ್ಥಿತಿಯ ಮುನ್ನೋಟ ಇದೆ. ಮನುಕುಲ ಚರಿತ್ರೆಯಲ್ಲಿ ಅತ್ಯಂತ ಸಂದಿಗ್ಧ ಮತ್ತು ಸಂಕೀರ್ಣ ಕ್ಷಣದ ಮೂಲಕ ಹಾದು ಹೋಗುತ್ತಿದೆ. ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಜತೆ ತೀವ್ರ ಶಕ್ತಿ ಮೂಲ, ಗಂಭೀರ ಆಹಾರ ಮತ್ತು ಪರಿಸರ ಬಿಕ್ಕಟ್ಟುಗಳು ಸೇರಿವೆ. ಆಳವಾದ ಅನ್ಯಾಯ ಮತ್ತು ಅಸಮಾನತೆಯ, ಯುದ್ಧಗಳ, ಸಂಘರ್ಷಗಳನ್ನು ಇಂದು ನೋಡುತ್ತಿದ್ದೇವೆ. ಎರಡು ತದ್ವಿರುದ್ಧ ಧಾಟಿಯ ಬೆಳವಣಿಗೆಗಳ ಚಾರಿತ್ರಿಕ ತಿರುವಿನಲ್ಲಿ ನಾವು ಇದ್ದೇವೆ. ಒಂದು ಕಡೆ ಶಾಂತಿ, ಸಾರ್ವಭೌಮತೆ, ಪ್ರಜಾಪ್ರಭುತ್ವ, ಕಾರ್ಮಿಕರು ಮತ್ತು ಜನತೆಯ ಹಕ್ಕುಗಳಿಗೆ ಭಾರೀ ಅಪಾಯ. ಇನ್ನೊಂದು ಕಡೆ - ಕಾರ್ಮಿಕರು ಮತ್ತು ಜನತೆಯ ಹೋರಾಟಗಳ ಬೆಳವಣಿಗೆ, ಮುನ್ನಡೆ ಮತ್ತು ವಿಮೋಚನೆ ; ಸಾಮಾಜಿಕ ಪ್ರಗತಿ ಮತ್ತು ಶಾಂತಿ ; ಸಮಾಜವಾದ ಮತ್ತು ಕಮ್ಯುನಿಸಂ - ಇವುಗಳ ಅಗಾಧ ಸಾಧ್ಯತೆಗಳು... ...

... ಸಮಾಜವಾದವೇ ಬದಲಿ. ಸಮಾಜವಾದವೇ ಜನತೆಯ ನಿಜವಾದ ಮತ್ತು ಪೂರ್ಣ ಸ್ವಾತಂತ್ರ್ಯಕ್ಕೆ ಹಾದಿ. ಸಮಾಜವಾದವೇ ಕಾರ್ಮಿಕರ ಹಕ್ಕುಗಳನ್ನು ಎತ್ತಿ ಹಿಡಿಯುವ ದಾರಿ. ಸಮಾಜವಾದವೇ ಬಂಡವಾಳಶಾಹಿಯ ವಿನಾಶಕಾರೀ ಬಿಕ್ಕಟ್ಟನ್ನು ಕೊನೆಗೊಳಿಸುವ ಒಂದೇ ಹಾದಿ. ಈ ನಂಬಿಕೆ ಮತ್ತು ತಿಳುವಳಿಕೆಯೊಂದಿಗೆ ಜಗತ್ತಿನಾದ್ಯಂತ ಕಾರ್ಮಿಕ ವರ್ಗ ಕಾರ್ಮಿಕರು ಮತ್ತು ಜನತೆಯನ್ನು, ಕಮ್ಯನಿಸ್ಟ್ ಮತ್ತು ಕ್ರಾಂತಿಕಾರಿಗಳ ಜತೆ ಕೈಗೂಡಿಸಲು ಕರೆ ಕೊಡುತ್ತಿದ್ದೇವೆ. ತಮ್ಮ ವರ್ಗ ಹಿತಾಸಕ್ತಿ ಮತ್ತು ನ್ಯಾಯಯುತ ನಿರೀಕ್ಷೆಗಳ ಸುತ್ತ ಒಟ್ಟಾಗಿ, ಮನುಕುಲಕ್ಕೆ ಸಮೃದ್ಧಿ ನ್ಯಾಯ ಮತ್ತು ಶಾಂತಿ ಇರುವ ಭವಿಷ್ಯ ತಮ್ಮ ಕೈಗಳಿಂದಲೇ ಕಟ್ಟಬೇಕು ಎಂದೂ ಕರೆ ಕೊಡುತ್ತೇವೆ... ...

ಲ್ಯಾಟಿನ್ ಅಮೆರಿಕ ಮತ್ತು ಕೇರೀಬಿಯನ್ ದೇಶಗಳ ಜನತೆಗೆ ಸೌಹಾರ್ದ ಬೆಂಬಲ

... ಕಳೆದ ದಶಕದಲ್ಲಿ ಐಕ್ಯ ಮತ್ತು ಬಲವಾದ ಹೋರಾಟಗಳು ಹಾಗೂ ಸಾಧನೆಗಳಿಗಾಗಿ, ಈ ಪ್ರದೇಶದ ಕಮ್ಯನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳು ಹಾಗೂ ಎಲ್ಲಾ ಪ್ರಜಾಸತ್ತಾತ್ಮಕ ಪ್ರಗತಿಪರ ಜನಪ್ರಿಯ ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳನ್ನು ಅಭಿನಂದಿಸುತ್ತದೆ. ಈ ಮುನ್ನಡೆಗಳು ಈ ಪ್ರದೇಶವನ್ನು ಸಾಮ್ರಾಜ್ಯಶಾಹಿ-ವಿರೋಧಿ ಪ್ರತಿರೋಧದ ಅಪ್ರತಿಮ ಕೇಂದ್ರವಾಗಿಸಿದೆ. ಸಾಮ್ರಾಜ್ಯಶಾಹಿ ಅಧಿಪತ್ಯಕ್ಕೆ ಬದಲಿ ರೂಪಿಸುವ ತಾಣವಾಗಿಸಿದೆ. ಪ್ರಜಾಪ್ರಭುತ್ವ, ರಾಷ್ಟ್ರೀಯ ಸಾರ್ವಭೌಮತೆ ಮತ್ತು ಸಾಮಾಜಿಕ ಪ್ರಗತಿಯಲ್ಲಿ ಇನ್ನಷ್ಟು ವಿಜಯಗಳನ್ನು ಸಾಧಿಸಿದೆ... ...

ಸಮಾಜವಾದಿ ಕ್ಯೂಬಾದ ಅಸಿತ್ವವೇ ಮತ್ತು ಅದು ಸಾಮ್ರಾಜ್ಯಶಾಹಿ ಪ್ರಚೋದನೆ ಮತ್ತು ದಾಳಿಗಳನ್ನು ಸೋಲಿಸಿದ್ದೇ, ಈ ಪ್ರದೇಶದ ಇತರ ಜನತೆಯ ಪ್ರತಿರೋಧದ ಬೆಳವಣಿಗೆಗೆ ಮೂಲಭೂತ ಪ್ರಾಮುಖ್ಯತೆ ಹೊಂದಿತ್ತು. ಅದರ ಉದಾಹರಣೆ ಆಶಾಭಾವನೆಯನ್ನು ಜೀವಂತವಾಗಿಟ್ಟಿತು. ಬಂಡವಾಳಶಾಹಿ ಬರ್ಬರತೆಯ ಹೋರಾಟದಲ್ಲಿ ಸಮಾಜವಾದಿ ಬದಲಿಯನ್ನು ಎತ್ತಿ ಹಿಡಿಯಿತು... .

ಈ ಸನ್ನಿವೇಶದಲ್ಲಿ ಸ್ವತಂತ್ರ ಮತ್ತು ವಿಶಿಷ್ಟವಾಗಿರುವ ಹೊಸ ಪ್ರಾದೇಶಿಕ ಸಮೀಕರಣಕ್ಕೆ ಹುಡುಕಾಟ ನಡೆದಿದೆ. ಈ ಹುಡುಕಾಟ 'ಮೆರ್ಕೊಸುರ್', 'ಉನಾಸುರ್' ನಂತಹ ಸಂಸ್ಥೆಗಳ ಬೆಳವಣಿಗೆಗೆ ಹಾದಿ ಮಾಡಿದೆ. ಲ್ಯಾಟಿನ್ ಅಮೆರಿಕದಲ್ಲಿ

ಇಂತಹ ಸ್ವತಂತ್ರ ಪ್ರಾದೇಶಿಕ-ರಾಜಕೀಯ ಮತ್ತು ಆರ್ಥಿಕ ಧ್ರುವ ಬೆಳೆಸುವ ಪ್ರಕ್ರಿಯೆಯಿಂದ ಅಲ್ಬಾ (ಲ್ಯಾಟಿನ್ ಅಮೆರಿಕ ಮತ್ತು ಕೆರಿಬಿಯನ್ ಗೆ ಬೊಲಿವೇರಿಯನ್ ಬದಲಿ) ದಂತಹ ಸ್ಪಷ್ಟ ಸಾಮ್ರಾಜ್ಯಶಾಹಿ-ವಿರೋಧಿ ಸತ್ವ ಇರುವ ಸಂಸ್ಥೆಗಳತ್ತ ದಾಪುಗಾಲಿನ ಹೆಜ್ಜೆ ಇಟ್ಟಿದೆ. ಈ ಪ್ರಕ್ರಿಯೆಗಳು ವೈರುಧ್ಯಗಳನ್ನು ಹೊಂದಿದ್ದು ತೊಡಕುಗಳು ಮತ್ತು ತಾತ್ಕಾಲಿಕ ಹಿಂಜರಿತಗಳಿಂದ ಹೊರತಾಗಿಲ್ಲ. ಈ ಸಂದರ್ಭದಲ್ಲಿ ರಾಷ್ಟ್ರೀಯ ಸಕಾರಗಳ ಉದಯ ತನ್ನಿಂತಾನೇ ರಾಜಕಿಯ ಶಕ್ತಿ ಗ್ರಹಣ ಅಂತ ತಿಳಿಯಬೇಕಿಲ್ಲ. ಇದು ಕ್ರಾಂತಿಕಾರಿ ಆಯಾಮದ ಚಟುವಟಿಕೆ ಬೇಡುವಂತದ್ದು

ಕತ್ತಲೆಯೆಡೆಗೆ ಕರ್ನಾಟಕ...

ಟ 5 ರಿಂದ

ಉತ್ಪಾದನೆ 2006-07 ವಾಸ್ತವ ಹಾಗೂ 2007-08ರ ರೀಕ್ಷಿತ ಉತ್ಪಾದನೆ ದಶಲಕ್ಷ ಯೂನಿಟ್‌ಗಳಲ್ಲಿ) ರಾಜ್ಯ ಸರ್ಕಾರದ ಅಂದಾಜಿಂತೆ ಜಲವಿದ್ಯುತ್ ಖ್ಯತೆ ಶೇ.40 ಇಳಿಮುಖ ಉಂಟಾಗಿದೆ. 2008 ಕ್ಟೋಬರ್ ನಿಂದ 2009ನೇ ಅವಧಿಯಲ್ಲಿ ಶೇ.5

ವರ್ಷ	ಒಟ್ಟುವಿದ್ಯುತ್	ಜಲ ವಿದ್ಯುತ್	ಉಷ್ಣ ವಿದ್ಯುತ್	ಖಾಸಗಿ ವಲಯ
2006-07(ವಾಸ್ತವ)	26635	14998	11483	-
2007-08(ನಿರೀಕ್ಷಿತ)	25805	14495	11072	5424
	(ಶೇ.3.1ರಷ್ಟು ಕಡಿಮೆ)	(ಶೇ.3.3 ರಷ್ಟು ಕಡಿಮೆ)	(ಶೇ.3.6 ರಷ್ಟು ಕಡಿಮೆ)	

ಷ್ಟು ವಿದ್ಯುತ್ ಬಳಕೆಯಲ್ಲಿ ಬೆಳವಣಿಗೆಯನ್ನು ರಿಗಣಿಸಿದಲ್ಲಿ ಸರಾಸರಿ ವಿದ್ಯುತ್ ಕೊರತೆಯ ದಾಜು 700 ಮೆಗಾವ್ಯಾಟ್‌ಗಳಂತೆ. ಅದನ್ನು ರಿದೂಗಿಸಲು ಇತರೆಡೆಯಿಂದ ವಿದ್ಯುತ್ ರೀದಿಸಬೇಕಿದ್ದ ರಾಜ್ಯ ಸರ್ಕಾರ 2008 ಜುಲೈ ರಂದು ಹಾಗೂ 18 ರಂದು ಸಂಪುಟ ಸಭೆ ರಿ ಚರ್ಚಿಸಿ 23 ರಂದು ಸಚಿವರು, ಶಾಸಕರ ಭೆಯಲ್ಲಿ ಪರಿಸ್ಥಿತಿ ವಿವರಿಸಿದೆ. ಇಲ್ಲಿಂದ ಅಲ್ಲಿಂದ ರೀದಿಸಲು ಪ್ರಸ್ತಾವವಿದೆ ಎಂದು ಹೇಳಿತು. ಕೇಂದ್ರ ರ್ಕಾರವು ತಮಿಳುನಾಡು-ಆಂಧ್ರಪ್ರದೇಶಕ್ಕೆ ಆದರ ವಿದ್ಯುತ್ ಸ್ಥಾವರಗಳಿಂದ 3000-3500 ಮೆಗಾವ್ಯಾಟ್‌ಗಳಷ್ಟು ವಿದ್ಯುತ್ ನೀಡುತ್ತಿದೆ. ಆದರೆ ಕರ್ನಾಟಕಕ್ಕೆ ಕೇವಲ 1546 ಮೆಗಾವ್ಯಾಟ್ ನೀಡುತ್ತಿದೆ ಎಂದು ದೂಷಣೆ ಮಾಡಿ, ಎಲ್ಲದಕ್ಕೂ ಕೇಂದ್ರವೇ ಕಾರಣ, ಹೆಚ್ಚುವರಿ ವಿದ್ಯುತ್ ನೀಡಲು ಮನವಿ ಮಾಡಿದ್ದೇವೆ ಎಂದು ಹೇಳಿ ಕೈ ತೊಳೆದುಕೊಂಡಿದೆ. ಪ್ರತಿ15 ದಿನಕ್ಕೆ ಒಮ್ಮೆ ಸಚಿವ ಸಂಪುಟದಲ್ಲಿ ವಿದ್ಯುತ್ ಪರಿಸ್ಥಿತಿ ಚರ್ಚಿಸುವುದಾಗಿ ಹೇಳಲಾಯಿತು. ಆದರೇನು ಬರೀ ಚರ್ಚೆ ನಡೆಯುತ್ತಿದೆ. ವಿದ್ಯುತ್ ಪರಿಸ್ಥಿತಿ ಮಾತ್ರ ದಿನದಿಂದ ದಿನಕ್ಕೆ ಹದಗೆಡುತ್ತಿದೆ. ಇದನ್ನೇ ನೆಪಮಾಡಿ, ವಿಶ್ವ ಆರ್ಥಿಕ ಬಿಕ್ಕಟ್ಟಿನೆಡೆಗೂ ಬೊಟ್ಟು ತೋರಿ ಕಾರ್ಮಿಕರಿಗೆ ಬಲವಂತದ ರಜೆ (ಪೇ ಆಫ್) ಉತ್ಪಾದನೆ ಸ್ಥಗಿತ ಕಾರ್ಮಿಕರ ಕಡಿತ, ಲೇ ಆಫ್, ತರಬೇತಿ ಮೇಲಿರುವವರು (ಓಜೆಟಿ) ಮತ್ತು ಗುತ್ತಿಗೆ ಹೊರಗುತ್ತಿಗೆ ಕಾರ್ಮಿಕರನ್ನು ಕೆಲಸದಿಂದ ಹೊರಹಾಕಲು ಮಾಲೀಕರು ಯತ್ನಿಸುತ್ತಿದ್ದಾರೆ.

ಇಂಧನ ಇಲಾಖೆ ಅಧಿಕಾರಿಗಳ ಪ್ರಕಾರ ರಾಜ್ಯ ವಿದ್ಯುತ್ ಜಾಲದಲ್ಲಿ 1500 ರಿಂದ 1700 ಮೆಗಾವಾಟ್ (ನಿತ್ಯ 15-20 ದಶಲಕ್ಷ ಯೂನಿಟ್) ವಿದ್ಯುತ್ ಕೊರತೆ ಇದೆ. ಎಲ್ಲಾ ಮೂಲಗಳಿಂದ ಸದ್ಯ ಇರುವ ಸ್ಥಾಪಿತ ಸಾಮರ್ಥ್ಯ 7051 ಮೆಗಾವ್ಯಾಟ್ ಆಗಿದ್ದು, ಗರಿಷ್ಟ 4457 ಮೆಗಾವ್ಯಾಟ್ ನಿಂದ ಕನಿಷ್ಟ 3340 ಮೆಗಾವ್ಯಾಟ್ ವಿದ್ಯುತ್ ಲಭ್ಯವಾಗುತ್ತಿದೆ. ಈಗ ಡಿಸೆಂಬರ್ ಅಂತ್ಯದವರೆಗೂ ತಾತ್ಕಾಲಿಕವಾಗಿ ನಿತ್ಯ 10 ದಶಲಕ್ಷ ಯೂನಿಟ್ ವಿದ್ಯುತ್ ಖರೀದಿಸಲು ಸರ್ಕಾರ ನಿರ್ಧರಿಸಿದೆ. ಆದರೆ ಡಿಸೆಂಬರ್ ನಂತರ ಮುಂದೇನು? ಎಂಬ ಪ್ರಶ್ನೆಗೆ ಸರ್ಕಾರದಿಂದ ಉತ್ತರವಿಲ್ಲ. ಮುಂಬರುವ ಜೂನ್‌ವರೆಗೂ ರಾಜ್ಯದಲ್ಲಿ ವಿದ್ಯುತ್ ಸಮಸ್ಯೆ ಮುಂದುವರಿಯಲಿದೆ ಎಂದು ಗೊತ್ತಿದ್ದರೂ ಅದನ್ನು ಎದುರಿಸಲು ರಾಜ್ಯ ಸರ್ಕಾರವೂ ಇದುವರೆಗೂ ದೀರ್ಘಕಾಲೀನ ಕ್ರಮಗಳನ್ನು ಕೈಗೊಳ್ಳಲು ಮುಂದಾಗಿಲ್ಲ.

ಸ್ವಾವಲಂಬನೆಯಿಂದ ಪರಾವಲಂಬನೆ ದೆಡೆಗೆ

ಹಿಂದೊಮ್ಮೆ ರಾಜ್ಯವು ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿತ್ತು ಮಾತ್ರವಲ್ಲ ಅಗತ್ಯಕ್ಕಿಂತ ಹೆಚ್ಚು ವಿದ್ಯುತ್ ಉತ್ಪಾದಿಸಿ, ಹೊರ ರಾಜ್ಯಗಳಿಗೂ ಮಾರುತ್ತಿತ್ತು. ಅಂತಹ ಪರಿಸ್ಥಿತಿಯೇ ರಾಜ್ಯಕ್ಕೆ ಅನೇಕ ಕೈಗಾರಿಕೆಗಳು ಆಕರ್ಷಿತವಾಗಲು, ನೀರಾವರಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡುವ ಕೆಲಸಕ್ಕೆ ಅಂದಿನ ಸರ್ಕಾರಗಳಿಗೆ ಶಕ್ತಿ ನೀಡಿದ್ದು, ಆದರೆ ಖಾಸಗೀಕರಣದ ಖಾಸಾ ಆದ್ಮಿಗಳಾಗ ಬಯಸಿದ ಸರ್ಕಾರಗಳ ನೀತಿಗಳಲ್ಲಿನ ಹಿಂದಿನ ದಶಕಗಳ ನೀತಿಯಲ್ಲಿನ ಪಲ್ಲಟವೇ ಇಂದಿನ ಪರಿಸ್ಥಿತಿಗೆ ನೇರ ಹೊಣೆ ಹೊರಬೇಕಿದೆ.

1948ರಲ್ಲಿ ನಮ್ಮ ರಾಷ್ಟ್ರ ಅಂಗೀಕರಿಸಿದ ವಿದ್ಯುತ್ ನೀತಿಯಿಂದಾಗಿ ವಿದ್ಯುತ್ ಉತ್ಪಾದನೆ,ವಿತರಣೆ ಹಾಗೂ ಸರಬರಾಜನ್ನು ಸಾರ್ವಜನಿಕ ವಲಯದಲ್ಲಿ ಸರ್ಕಾರವೇ ಆರಂಭಿಸಿತು. ಪರಿಣಾಮವಾಗಿ ಅನೇಕ ರಾಜ್ಯಗಳಲ್ಲಿ ವಿದ್ಯುತ್ ಮಂಡಳಿಗಳು, ವಿದ್ಯುತ್ ಉತ್ಪಾದನಾ ಕಂಪನಿಗಳು ಸಾರ್ವಜನಿಕ ವಲಯಗಳಲ್ಲಿ ಆರಂಭ ವಾದವು. ರಾಷ್ಟ್ರದ ರಾಜ್ಯಗಳ ಪ್ರಗತಿ ನಾಂದಿ ಹಾಡಿ ಆಧಾರವಾದವು. 1991ರಿಂದ ಆರಂಭಿಸಿದ ನೂತನ ಆರ್ಥಿಕ ನೀತಿಗಳ ಭಾಗವಾಗಿ ಉದಾರೀಕರಣ, ಖಾಸಗೀ ಕರಣ, ಜಾಗತೀಕರಣ (ಎಲ್‌ಪಿಜಿ) ನೀತಿಗಳ ಭಾಗವಾಗಿ ವಿದ್ಯುತ್ ರಂಗದ ಖಾಸಗೀಕರಣಕ್ಕೆ 1991ರ ವಿದ್ಯುತ್ ನೀತಿ ಅನುವುಗೊಳಿಸಿತು. ವಿಶ್ವ ಬ್ಯಾಂಕ್ ಸಾಲ, ಸಾಲ ಷರತ್ತು 2003ರಲ್ಲಿ ಅಂದಿನ ವಾಜಪೇಯಿ ನೇತೃತ್ವದ ಬಿಜೆಪಿ-ಎನ್‌ಡಿಎ ಸರ್ಕಾರ ಅಂಗೀಕರಿಸಿದ ವಿದ್ಯುತ್ ಕಾಯ್ದೆ, ವಿದ್ಯುತ್ ರಂಗದ ಖಾಸಗೀಕರಣಕ್ಕೆ ಶಾಸನಾತ್ಮಕ ಆಧಾರ ಒದಗಿಸಿ, ಸಾರ್ವಜನಿಕ ಹೂಡಿಕೆ, ಉತ್ಪಾದನೆಗೆ ಕಡಿವಾಣ ಹಾಕಿತು. ಪರಿಣಾಮವಾಗಿ ಕೆಇಬಿ, ಕೆಪಿಟಿಸಿಲ್ ಆಯಿತು. 5 ಸ್ವತಂತ್ರ ವಿದ್ಯುತ್ ಸರಬರಾಜು ಕಂಪನಿಗಳನ್ನು ಬೆಸ್ಕಾಂ, ಮೆಸ್ಕಾಂ, ಹೆಸ್ಕಾಂ, ಜೆಸ್ಕಾಂ, ಸೆಸ್ಕಾಂ ಎಂದು ವಿಭಜಿಸಿ ಸ್ಥಾಪಿಸಲಾಯಿತು. ಸ್ಪರ್ಧೆ ಉಂಟುಮಾಡಲು ಮುಕ್ತ ವಿದ್ಯುತ್ ಮಾರಾಟದ ವ್ಯವಸ್ಥೆಯನ್ನು 10.06.2005 ರಿಂದ ಜಾರಿಗೊಳಿಸಲಾಯಿತು. ಸದ್ಯ ಚಾಲ್ತಿ ಯಲ್ಲಿರುವ 11ನೇ ಪಂಚವಾರ್ಷಿಕ ಯೋಜನೆ (2007-12) ಭಾಗವಾಗಿ ರಾಜ್ಯ ದಲ್ಲಿ 1525 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಹೆಚ್ಚಿಸುವ ಯೋಜನೆಯನ್ನು ಅಂದಾಜಿಸಲಾಗಿದೆ.

2007-08 ರಲ್ಲಿನ ನಿರೀಕ್ಷಿತ ವಿದ್ಯುತ್ ಉತ್ಪಾದನೆ(ಮೆ.ವ್ಯಾಟ್)

ಸಾರ್ವಜನಿಕ ವಲಯದ ಸಾಮರ್ಥ್ಯ(ಒಟ್ಟು)	5509.83
ಜಲ ವಿದ್ಯುತ್	3407.35
	(7750 ಮೆ.ವ್ಯಾಟ್ ಉತ್ಪಾದನಾ ಸಾಮರ್ಥ್ಯ ರಾಜ್ಯಕ್ಕಿದೆ)
ಉಷ್ಣ ವಿದ್ಯುತ್	1907.00
ಡೀಸೆಲ್ ವಿದ್ಯುತ್	127.92
ವಾಯು ವಿದ್ಯುತ್	4.56

1991ರಿಂದ ಖಾಸಗಿ ಕಂಪನಿಗಳ ಹಿಂದೆ, ಅವರ ಎಲ್ಲಾ ಷರತ್ತುಗಳಿಗೆ ಒಪ್ಪಿ, ದುಬಾರಿ ಬೆಲೆಯಲ್ಲಿ ವಿದ್ಯುತ್ ಖರೀದಿ ಭರವಸೆ, ಖಾತ್ರಿ ನೀಡುವಲ್ಲೇ ಸರ್ಕಾರಗಳು ತಲ್ಲೀನವಾದ ಕಾರಣ. ಸಾರ್ವಜನಿಕ ವಲಯದಲ್ಲಿನ ಉತ್ಪಾದನೆ ನಿರ್ಲಕ್ಷಿಸಿದ ಕಾರಣ, ಖಾಸಗಿ ಕಂಪನಿಗಳು ತಮ್ಮ ಲಾಭಕೋರತನದಿಂದಾಗಿ ಕೈಕೊಟ್ಟ ಓಡಿಹೋದ ಕಾರಣ,ವಿಶ್ವಬ್ಯಾಂಕ್ ಶಿಫಾರಸ್ಸುಗಳ ಜಾರಿಯಲ್ಲೇ ಸರ್ಕಾರಗಳು ಮುಳುಗಿದ್ದು ಹಣ ಹೂಡಿಕೆ ಮಾಡದೇ ಇದ್ದ ಕಾರಣದಿಂದಾಗಿ ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿದ್ದ ರಾಜ್ಯ ಪರಾವಲಂಬಿ ಯಾಗುವಂತಾಗಿದೆ. ಪರಾವಲಂಬಿಯಾಗಲು ಶಾಸನಾತ್ಮಕ ಆಧಾರ ಒದಗಿಸಿದ್ದೆ ಅಂದಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ. ಅದರ ಫಲವಾಗಿ ರಾಜ್ಯವು ಕತ್ತಲೆಯೆಡೆಗೆ ನಡೆದಿದೆ. ಆ ನಿಟ್ಟಿನಲ್ಲಿ ರಾಜ್ಯವನ್ನು ದಾಪುಗಾಲಲ್ಲಿ ಮುನ್ನಡೆಸಲು ರಾಜ್ಯದ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರವು ಮುಂದಾಗಿದೆ. ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಯತ್ನದಲ್ಲಿ ಮಗ್ನವಾಗಿದೆ. ○

ಮತಾಂತರ' ಚರ್ಚೆಯ ಕುರಿತು.....

ಟ 2 ರಿಂದ

ಇಷ್ಟಾದರೂ ಮೂಲಭೂತವಾದವು ನಪ್ರಿಯವಾದುದಲ್ಲ. ಅದನ್ನು ನೆಚ್ಚಿಕೊಂಡಿರುವ ನಸಮುದಾಯಗಳಿಗಷ್ಟೇ ಅದು ಸೀಮಿತವಾದುದು. ಂದು ಕಠೋರ ಮತ್ತು ವಿವಾದಾಸ್ಪದ ರ್ಮಿಕನೀತಿಯು ಬಹುಸಂಖ್ಯಾತ ಜನತೆಯಿಂದ ರಗುಳಿದಿರುತ್ತದೆ. ಬಹು ಸಂಖ್ಯಾತರು ನಿಜವಾದ ವಲ್ಲಿ ಧಾರ್ಮಿಕರು, ಶಾಂತಿಪ್ರಿಯರು. ದರಿಂದ ಮೂಲಭೂತವಾದಿಗಳು ಚುನಾವಣೆ ಲ್ಲಿ ಜಯಶಾಲಿಗಳಾಗುವುದು ಅನುಮಾನಾಸ್ಪದ. ದಕ್ಕೇ ಮೂಲಭೂತವಾದಿಗಳು ಪ್ರಜಾತಂತ್ರವನ್ನು ಷಿಸುತ್ತಾರಲ್ಲದೆ ನಾನಾ ಒಳಸಂಚುಗಳಿಂದ ಧಿಕಾರಕ್ಕೆ ಬರಲು ಪ್ರಯತ್ನಿಸುತ್ತಾರೆ. ಇತಿಹಾಸದಲ್ಲಿ ಹಮದ್ ಸ್‌ರ್‌ಹಿಂದೀ ಮತ್ತು ಶಾಹ ವಲೀ ಲ್ಲಾಹ್‌ರಂಥ ಉಲೇಮಾಗಳು ಇಂಥದೇ ಳಸಂಚುಗಳಿಂದ ಕೆಲವು ಮುಸ್ಲಿಂ ರಾಜರುಗಳನ್ನು ತಾಂಧರನ್ನಾಗಿ ಪರಿವರ್ತಿಸಿದ್ದು.

ತೀಯ ರಾಜಕೀಯ

ಈ ಮೂಲಭೂತವಾದಿಗಳ ವಿಶೇಷತೆಯೆಂದರೆ ವುಗಳು ಮತೀಯ ರಾಜಕೀಯ ನಡೆಸುತ್ತವೆಯೇ ರತು ಅಪ್ಪಿ ತಪ್ಪಿಯೂ ಬಡತನ, ಹಸಿವು, ಕ್ಷರತೆ, ಆರೋಗ್ಯ ಮೊದಲಾದ ಸಮಸ್ಯೆಗಳ ಬಗ್ಗೆ ಲೆ ಕೆಡಿಸಿಕೊಳ್ಳುವುದಿಲ್ಲ.

ಮೂಲಭೂತವಾದಿಗಳ ಎರಡನೆಯ ಬೇಟೆ ಯರು. ಅವರ 'ಧಾರ್ಮಿಕ' ನಂಬಿಕೆಯಂತೆ ಯರು ಹೀನ, ದುರ್ಬಲ, ಮೂರ್ಖ, ಜ ಮೂಲದವರು ಮತ್ತು ತಿಳುವಳಿಕೆಯಿಲ್ಲದವರು. ಅವರ ಮುಖ್ಯ ಕರ್ತವ್ಯ ಮಕ್ಕಳನ್ನು ಹೆರುವುದು ಮತ್ತು ಬೆಳೆಸುವುದು.

ಮೂಲಭೂತವಾದಿಗಳ ಮೂರನೆಯ ಬೇಟೆ ಧರ್ಮನಿರಪೇಕ್ಷ ವಾದಗಳು, ನಿರೀಶ್ವರ ವಾದಗಳು ಮತ್ತು ಕಮ್ಯೂನಿಷ್ಟರು.

ಮೂಲಭೂತವಾದಿಗಳು ಮೊದಲು ಅಲ್ಪಸಂಖ್ಯಾತರನ್ನು ಭಯಗ್ರಸ್ಥರನ್ನಾಗಿ ಮಾಡುತ್ತಾರೆ. ಅನಂತರ ಅವರನ್ನು ಆರ್ಥಿಕವಾಗಿ ತುಳಿದು ಹಾಕುತ್ತಾರೆ.

ಮೂಲಭೂತವಾದಿ ನೇತಾರರು ಹೆಸರಿಗೆ ಮಾತ್ರ ಮುಸಲ್ಮಾನರು. ಅವರು ಅತ್ಯಂತ ಪಾಖಂಡಿಗಳು, ವಂಚಕರು ಮತ್ತು ಅಪ್ರಾಮಾಣಿಕರು. ತಮ್ಮ ಸಿದ್ಧಾಂತಗಳನ್ನು ಒಪ್ಪಿಸಲು ಅವರು ಉಪಯೋಗ ಮಾಡುವ ಅಸ್ತ್ರ ಹಿಂಸೆ. ಅವರನ್ನು ವಿರೋಧಿಸುವವರು ಖುದಾನ ಶತ್ರುಗಳು. ಹೆಚ್ಚಿನ ಮೂಲಭೂತವಾದಿಗಳು ಹೇಳುವುದೇ ನೆಂದರೆ ಇಸ್ಲಾಮಿನ ವಿರುದ್ಧ ಅದರ ಶತ್ರುಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಒಳಸಂಚು ನಡೆಸುತ್ತಿದ್ದಾರೆ!

ಪಾಕಿಸ್ತಾನದ ಪ್ರಖ್ಯಾತ ಇತಿಹಾಸಕಾರ ಮುಬಾರಕ್ ಅಲಿ ತಮ್ಮ 'ಇತಿಹಾಸ್ ಕಾ ಮತಾಂತರ್' ಎಂಬ ಪುಸ್ತಕದಲ್ಲಿ ಭಾರತದ ಬಗ್ಗೆ ಹೀಗೆನ್ನುತ್ತಾರೆ-'ಭಾರತೀಯ ಉಪಮಹಾದ್ವೀಪದಲ್ಲಿ ಮೂಲಭೂತವಾದಿಗಳ ಅಥವಾ ಕಟ್ಟರ್‌ಪಂಥೀಯರ ಹೋರಾಟ ಸಕ್ರಿಯವಾಗಿದೆ. ಪ್ರಗತಿಶೀಲ ಶಕ್ತಿಗಳು ಸಮಾಜವನ್ನು ಆಕರ್ಷಿಸುವಲ್ಲಿ ವಿಫಲವಾಗಿವೆ. ಪ್ರಗತಿಶೀಲ ಪ್ರವೃತ್ತಿಗಳ ವೈಫಲ್ಯ ಮತ್ತು ಮೂಲಭೂತವಾದಿಗಳ ಸಫಲತೆಗೆ ಕಾರಣ - ಅಲ್ಲಿನ ಬದಲಾಗದ ಪಾಳೇಗಾರಿ ಸಮಾಜ ವ್ಯವಸ್ಥೆ.'

ಮೂಲಭೂತವಾದವು ಎಲ್ಲಾ ಮತಗಳಲ್ಲಿಯೂ ಇವೆ. ಕ್ರೈಸ್ತ ಮತವೂ ಇದಕ್ಕೆ ಹೊರತಾಗಿಲ್ಲ. ಮತಾಂತರ ಮಾಡುವ ಇವೇಂಜಲಿಸ್ಟರು ಕ್ರೈಸ್ತ ಮೂಲಭೂತವಾದಿಗಳು. ಆದರೆ ಇಂದು ಜಗತ್ತಿನಲ್ಲಿ ಕ್ರೈಸ್ತರು ಹೆಚ್ಚು ಉದಾರವಾದಿಗಳು. ಆದರೆ, ಹಿಂದೂ ಮೂಲಭೂತವಾದಿಗಳಿಂದ ಅವರು ಆಘಾತಕ್ಕೊಳಗಾಗಿದ್ದಾರೆ. ಇದು ಅತ್ಯಂತ ಖೇದದ ಸಂಗತಿ. ಭಾರತದಲ್ಲಿ ಹಿಂದೂ ನಾಜಿವಾದಿಗಳಿಂದ ಇತೀಚಿಗಿನ ಎರಡು ದಶಕಗಳಲ್ಲಿ ಕ್ರೈಸ್ತರ ಮೇಲೆ ನಡೆದ ಹಲ್ಲೆ, ಅತ್ಯಾಚಾರ, ಇತ್ತೀಚಿಗೆ ಕರ್ನಾಟಕ, ಒರಿಸ್ಸಾ, ಮಧ್ಯಪ್ರದೇಶಗಳಲ್ಲಿ ಅವರು ನಡೆಸಿದ ಭಯಾನಕ ಉತ್ಪಾತಗಳಿಗೆ ವೈಚಾರಿಕ ಸಮರ್ಥನೆಯಾಗಿ ಎಸ್.ಎಲ್. ಭೈರಪ್ಪ ಮತ್ತು ವಿ.ಕ. ನಡೆಸಿದ ಬಾನಗಡಿ ಇದಕ್ಕೊಂದು ನಾಜೀ ದಾರ್ಶನಿಕ ಆಯಾಮವನ್ನು ನೀಡುತ್ತಿರುವುದು ಒಂದು ದೊಡ್ಡ ದುರಂತ.

ಭಾರತದ ಪಾಳೇಗಾರಿ ಸಮಾಜ ವ್ಯವಸ್ಥೆಯೇ ಇದಕ್ಕೆಲ್ಲಾ ಪ್ರಮುಖ ನೆಲೆಗಟ್ಟು ಎನ್ನುವುದು ಸತ್ಯ. ಆದರೆ, ಭಾರತದಲ್ಲಿ ಮುಸ್ಲಿಂ ಮೂಲಭೂತವಾದ ಪ್ರಜ್ವಲಿಸಲು ಕಾರಣ ಹಿಂದೂ ಮೂಲಭೂತವಾದ. ಹಿಂದೂ ಮೂಲಭೂತವಾದವು ಇಂದು ಭಯಾನಕವಾಗಿ ಬೆಳೆದಿದೆ. ಅದರ ರಥಚಕ್ರದಡಿ ಅಮಾಯಕ ಮುಸ್ಲಿಮರು, ಕ್ರೈಸ್ತರು ಸಿಕ್ಕಿ ಹುಡಿಹುಡಿಯಾಗುತ್ತಿದ್ದಾರೆ. ○

JANASHAKTHI KANNADA VARA PATRIKE DEC.14, 2008 Price : Rs. 5/- No. KARKAN /2006/17926 Postal Reg. No. RNP/KA/BGS/2078/2007-09

ಸೌಹಾರ್ದ ಕರ್ನಾಟಕ ಸೈಕಲ್ ಜಾಥಾ

ಉಗ್ರವಾದ - ಕೋಮುವಾದ ಒಂದಕ್ಕೊಂದು ಪೂರಕ

2008 ರಾಜ್ಯೋತ್ಸವ 'ಸೌಹಾರ್ದ ಕರ್ನಾಟಕ ರಾಜ್ಯೋತ್ಸವ' ವನ್ನಾಗಿ ಇಡೀ ನವೆಂಬರ್ ತಿಂಗಳಾದ್ಯಂತ ವೈವಿಧ್ಯಮಯ ಕಾರ್ಯಕ್ರಮ ಮೂಲಕ ಆಚರಿಸಬೇಕೆಂಬ ತೀರ್ಮಾನದಂತೆ 'ಕರ್ನಾಟಕವಿದು ಸರ್ವಜನಾಂಗದ ಶಾಂತಿಯ ತೋಟ' ಎಂಬ ಘೋಷಣೆಯನ್ನಿಟ್ಟುಕೊಂಡು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್‌ಐ) ಸಂಘಟನೆಗಳು ಗದಗ ಜಿಲ್ಲೆ ರೋಣತಾಲ್ಲೂಕಿನ ಗಜೇಂದ್ರಗಡದಲ್ಲಿ ಆಕರ್ಷಕ 'ಸೈಕಲ್ ಜಾಥಾ' ನಡೆಸಿದವು.

ಕಾಲ ಕಾಲೇಶ್ವರ ವೃತ್ತದಲ್ಲಿ ಶಾಂತಿ-ಸೌಹಾರ್ದತೆಯ ಸಂಕೇತವಾದ ಪಾರಿವಾಳಗಳನ್ನು ಆಕಾಶಕ್ಕೆಹಾರಿಬಿಡುವ ಮೂಲಕ ನಿವೃತ್ತ ಶಿಕ್ಷಕ ಎಸ್.ಜಿ.ಹಲಕುರ್ಕಿ ಹಾಗೂ ಜೆಡಿ(ಎಸ್) ಮುಖಂಡ ಶರಣಪ್ಪ ರೇವಡಿ ಜಾಥಾವನ್ನು ಉದ್ಘಾಟಿಸಿದರು. ಪಟ್ಟಣದ ಪ್ರಮುಖ ಬೀದಿಗಳ ಮುಖಾಂತರ ಜಾಥಾ ಸಂಚರಿಸುತ್ತಾ, ನಾಡಿನ ಶಾಂತಿ ಸೌಹಾರ್ದತೆ, ಜನರ ಐಕ್ಯತೆ-ಸಮಗ್ರತೆಯ ಪರವಾಗಿ, ಮನುಕುಲ ವಿರೋಧಿ ಕೋಮುವಾದ-ಭಯೋತ್ಪಾದನೆ ವಿರುದ್ಧ ಘೋಷಣೆಗಳನ್ನು ಹಾಕುತ್ತಾ ಸಾಗಿತು.



ದುರ್ಗಾ ವೃತ್ತದಲ್ಲಿ ಸಮಾವೇಶಗೊಂಡ ಜಾಥಾವನ್ನು ಉದ್ದೇಶಿಸಿ ಡಿವೈಎಫ್‌ಐ ಮುಖಂಡರಾದ ರವೀಂದ್ರ ಹೊನವಾಡ, ಎಂ.ಎಸ್.ಹಡಪದ, ಬಸವರಾಜ ಶೀಲವಂತರ ಎಸ್‌ಎಫ್‌ಐ ಮುಖಂಡ ಎಂ.ಎಸ್.ತಾಳಿಕೋಟಿ, ಪೀರು ರಾಠೋಡ ಅವರು ಮಾತನಾಡುತ್ತಾ, ರಾಜ್ಯದಲ್ಲಿ ಮತಾಂಧತೆಯನ್ನು ಬೆಳೆಸಲು ಅಲ್ಪಸಂಖ್ಯಾತರ ಮೇಲೆ ಕೋಮುವಾದಿ ಶಕ್ತಿಗಳು ವ್ಯವಸ್ಥಿತ ದಾಳಿಗಳನ್ನು ನಡೆಸುತ್ತಿವೆ. ಅದರಲ್ಲೂ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರವಂತೂ ಅದು ಮತ್ತಷ್ಟು ತೀವ್ರಗೊಂಡಿದೆ ಮತ್ತು ಇದೇ ಅವಧಿಯಲ್ಲಿ ದೇಶದಲ್ಲಿ ಮತ್ತು ರಾಜ್ಯದಲ್ಲಿ ಉಗ್ರವಾದಿಗಳು ತಮ್ಮ ಭಯೋತ್ಪಾದನಾ ಚಟುವಟಿಕೆಗಳನ್ನು ತೀವ್ರಗೊಳಿಸಿ ರಾಜ್ಯವನ್ನು, ದೇಶವನ್ನು ಅಶಾಂತಿಯ ತಾಣವನ್ನಾಗಿಸುತ್ತಿದ್ದಾರೆ.



ಅಕ್ಟೋಬರ್ 25, 2008 ರಂದು ವಿವಿಧ ರೈತ ಸಂಘಟನೆಗಳು, ದಲಿತ ಸಂಘಟನೆಗಳು ಕೂಡಿ ಬೆಂಗಳೂರಿನ ಮಹಾತ್ಮಗಾಂಧಿ ಪ್ರತಿಮೆ ಮುಂದೆ ಕೃಷಿ ಇಲಾಖೆಯ ಖಾಸಗೀಕರಣ - ಕೇಸರೀಕರಣ ವಿರೋಧಿಸಿ ನಡೆದ ಸಾಮೂಹಿಕ ಧರಣ

ಕೋಮುವಾದ ಮತ್ತು ಭಯೋತ್ಪಾದನೆಗಳು ಒಂದನ್ನೊಂದು ಪುಷ್ಠೀಕರಿಸಿ ಬೆಳೆಯುತ್ತಿರುವುದು ಅತ್ಯಂತ ಅಪಾಯಕಾರಿ ಸನ್ನಿವೇಶವಾಗಿದೆ. ಈ ಹಿನ್ನೆಲೆಯಲ್ಲಿ ಕುವೆಂಪು ರವರು ಬಣ್ಣಿಸಿದಂತೆ ಸರ್ವಜನಾಂಗದ ಶಾಂತಿಯ ತೋಟ ಎಂಬ ಸಂದೇಶದಡಿ ಈ ಜಾಥಾ ನಡೆಸಲಾಗುತ್ತಿದ್ದು, ಕರ್ನಾಟಕ ಶಾಂತಿ-ಸೌಹಾರ್ದತೆಯ ನೆಲೆವೀಡು, ಬಹುಭಾಷಾ, ಬಹುಸಂಸ್ಕೃತಿಗಳಿಂದ ಅರಳಿ ನಿಂತ ನಾಡು. ಇಲ್ಲಿ ಭಾಷೆ- ಆಚರಣೆಗಳಷ್ಟೇ ಭಿನ್ನವಿಲ್ಲ. ಸೂಫಿ ಸಂತರು, ದಾಸರು, ಶರಣರ ಹಲವು ಧಾರ್ಮಿಕ ಸಂದೇಶದ ವೈವಿಧ್ಯತೆಗಳು ಮೇಳೈಸಿವೆ. ವೈವಿಧ್ಯತೆಯನ್ನು ಮೈಗೂಡಿಸಿಕೊಂಡು ರಾಜ್ಯ ಮತ್ತು ದೇಶದ ಪ್ರಗತಿ ಸಾಧಿಸಬೇಕಾಗಿದೆ. ಸಾಧಿಸಬೇಕಾದರೆ ಶಾಂತಿ-ಸಾಮರಸ್ಯ ಜನತೆಯಲ್ಲಿರುವುದು ಅತ್ಯಗತ್ಯ, ಅದನ್ನು ಜತನದಿಂದ ಕಾಯ್ದುಕೊಳ್ಳಬೇಕಿದೆ.

ಉಗ್ರವಾದಕ್ಕೆ ಯಾವುದೇ ಧರ್ಮವಿಲ್ಲ. ಉಗ್ರವಾದ ಹಾಗೂ ಕೋಮುವಾದ ಒಂದಕ್ಕೊಂದು ಪೂರಕವಾಗಿ ಕಾರ್ಯನಿರ್ವಹಿಸುತ್ತವೆ. ಈ ಹಿನ್ನೆಲೆಯಲ್ಲಿ ಉಗ್ರವಾದದ ವಿರುದ್ಧ ಜನ ಕೋಮು ಸೌಹಾರ್ದತೆಯನ್ನು ಕಾಪಾಡಿಕೊಳ್ಳಬೇಕೆಂದು ಮನವಿ ಮಾಡಿಕೊಂಡರು.

ಜಾಥಾ ಆರಂಭಕ್ಕೆ ಮೊದಲು ಮುಂಬೈ ಬಾಂಬ್ ಸ್ಫೋಟಗಳನ್ನು ತೀವ್ರವಾಗಿ ಖಂಡಿಸಲಾಯಿತು. ಉಗ್ರಗಾಮಿಗಳ ವಿರುದ್ಧ ದೇಶ, ಜನರ ರಕ್ಷಣೆಗಾಗಿ ಹೋರಾಡಿ ವೀರಮರಣವನ್ನಪ್ಪಿದ ರಕ್ಷಣಾ ಅಧಿಕಾರಿಗಳು, ಸಿಬ್ಬಂದಿಗಳಿಗೆ ಹಾಗೂ ಮಡಿದ ಮುಗ್ಧ ಅಮಾಯಕರ ಗೌರವಾರ್ಥ ಕಾಲಕಾಲೇಶ್ವರ ವೃತ್ತದಲ್ಲಿ ಒಂದು ನಿಮಿಷದ ಮೌನಾಚರಿಸಲಾಯಿತು.

ಜಾಥಾದ ನೇತೃತ್ವವನ್ನು ಸಂಘಟನೆಗಳ ಮುಖಂಡರಾದ ಎಂ.ಬಿ.ಸೋಂಪುರ, ಈ.ಕೆ.ಬಡಿಗೇರ, ರಾಜು ಸಾಂಗ್ಲೀಕರ್, ಚನ್ನಪ್ಪ ಗುಗಲೋತ್ತರ, ಮಾರುತಿ ಚಿಟಗಿ, ಪೀರು ರಾಠೋಡ, ರಾಮಚಂದ್ರ ಪೂಜಾರ, ಶೇಖರ ಮಾಳೋತ್ತರ, ಶಿವು ಚವ್ಹಾಣ, ಕೆ.ಸಿ.ಗೋಡೆಕಾರ, ರಜಾಕ್ ಗೋಡೆಕಾರ, ಎಂ.ಎಂ. ಸುರಪುರ ಮತ್ತಿತರರು ವಹಿಸಿದ್ದರು.

- ರವೀಂದ್ರ ಹೊನವಾಡ

ಕವನ

ಪ್ರೀತಿಯ ಬೀಜ ಬಿತ್ತೋಣ

ಸಮುದ್ರದ ಅಲೆಗಳ ಮೇಲೆ
ತೇಲಿ ಬಂದದ್ದು
ಸುನಾಮಿ, ಚಂಡಮಾರುತದ
ಪ್ರಳಯ ನರ್ತನವಲ್ಲ
ಧರ್ಮದ ಮುಸುಕು ಹೊದ್ದು
ತೂರಿ ಬಂದ ಕ್ರೌರ್ಯ.
ದ್ವೇಷ ತುಂಬಿದ ಮನಸ್ಸು
ಕೋವಿ ಹಿಡಿದ ಕೈಗಳಿಗೆ
ಕೊಲ್ಲುವುದೆ ಒಂದು ದಂಧೆ
ಜೆಹಾದ್ ಹೆಸರಲ್ಲಿ
ಮುಗ್ಧ ಜೀವಗಳ ಬಲಿ.
ಹರಿದ ನೆತ್ತರು ಹೊಳೆ
ಚೆಲ್ಲಿದ ರಕ್ತ ಯಾರದ್ದು!
ಯಾವ ಧರ್ಮದ್ದು !
ಹಿಂದುವಿನದೋ !
ಮುಸಲ್ಮಾನನದೋ!
ಕ್ರೈಸ್ತನದೋ!
ಅಲ್ಲ! ಅದು ಮನುಷ್ಯನದ್ದು,
ರಕ್ತ ರಾತ್ರಿ ನಾಟಕದ ದೃಶ್ಯ
ಕ್ರೂರ ನಗೆ
ಇತಿಹಾಸದ ಪುಟದಲ್ಲಿ
ಮತ್ತೊಂದು ಕ್ರೂರ ಅಧ್ಯಾಯ
ವಾಣಿಜ್ಯ ನಗರಿಯ ಬೀದಿಗಳಲ್ಲಿ
ಮಾನವ ಮೃಗಗಳ ಅಟ್ಟಹಾಸ
ಘೋರ ಕೃತ್ಯಕ್ಕೆ
ಚಂದಿರನೆ ಸಾಕ್ಷಿ
ಕರಾಳ ರಾತ್ರಿಯಲಿ
ಊಳಿಟ್ಟ ನರಿಗಳು
ಮುಂಜಾನೆ ಮೂಡಿದ
ಸೂರ್ಯನ ಮುಖದಲ್ಲಿ
ಭಯದ ಕರಿನೆರಳ ಛಾಯೆ.
ಸಮುದ್ರದ ಅಲೆಗಳ ತುಂಬ
ಆರ್ತನಾದ
ರಕ್ತ, ಮಾಲಸದ ವಾಸನೆಗೆ
ಫೀಳಿಡುತ್ತಾ
ಮುಗಿಲ ತುಂಬ
ರೆಕ್ಕೆ ಬಡಿದ ಹದ್ದುಗಳು
ಸಾಕಿನ್ನು, ಈ ಘೋರ ಕೃತ್ಯ
ಇತಿಹಾಸ, ವರ್ತಮಾನದ
ಕ್ರೂರ ಅಧ್ಯಾಯಕ್ಕೆ ತೆರೆ ಎಳೆದು
ದ್ವೇಷದ ಕಳೆ ಕಿತ್ತು
ಪ್ರೀತಿಯ ಬೀಜ ಬಿತ್ತೋಣ
ನಾವಿಂದು.

- ಹುಲಿಕಟ್ಟಿ ಚನ್ನಬಸಪ್ಪ
ಸಿರುಗುಪ್ಪ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH